ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

45

ಏಪ್ರಿಲ್ 8 ಮಂಗಳವಾರ 2025

₹4

ಸಂಪುಟ: 45 | ಸಂಚಿಕೆ: 348 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಕಟ್ಟಡ ನವೀಕರಣಕ್ಕೆ ಭೂಮಿ ಪೂಜೆ

ಸೇವಾ ಮನೋಭಾವಕ್ಕೆ ಫಲ ನಿಶ್ಚಿತ: ಸತ್ಯಧ್ಯಾನಾಚಾರ್ಯ ಕಟ್ಟಿ



ಶ್ರೀ ಉತ್ತರಾದಿ ಮಠ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಶ್ರೀಸತ್ಯಪ್ರಮೋದ ಕಲ್ಯಾಣ ಮಂಟಪದ ಅಭಿವೃದ್ಧಿ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಮೈಸೂರು, ಏ.7– ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರ ಆಜ್ಞೆ ಹಾಗೂ ಅನುಗ್ರಹದಿಂದ ಯಾದವಗಿರಿಯಲ್ಲಿರುವ ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆಯ ಶ್ರೀ ಉತ್ತರಾದಿ ಮಠ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಹಾಗೂ ಶ್ರೀಸತ್ಯಪ್ರಮೋದ ಕಲ್ಯಾಣ ಮಂಟಪದ ಭಕ್ತಾದಿಗಳಿಗೆ ಅನುಕೂಲಕಾರಿಯಾಗಿ ಪೂಜಾ ಹಾಲ್, ಹೋಮ ಶಾಲೆ, ಸಾರ್ವಜನಿಕರ ಅನುಕೂಲಕ್ಕಾಗಿ ಆರು ಸುಸಜ್ಜಿತ ಕೊಠಡಿಗಳ ಅಂದಾಜು 70 ಲಕ್ಷ ವೆಚ್ಚದ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಲಾಯಿತು.

ಬಳಿಕ ಮಾತನಾಡಿದ ಶ್ರೀ ಜಯತೀರ್ಥ ವಿದ್ಯಾಪೀಠದ ಪ್ರಾಂಶುಪಾಲ ಪಂ.ಡಾ|| ಸತ್ಯಧ್ಯಾನಾಚಾರ್ಯ ಕಟ್ಟಿ, ದೇವರ ಸನ್ನಿಧಾನಕ್ಕೆ ಬರುವಾಗ ಶುದ್ಧ ಮನಸ್ಸು, ಸೇವಾ ಮನೋಭಾವದಿಂದ ಬಂದರೆ ಖಂಡಿತ ಉತ್ತಮ ಫಲ ಸಿಕ್ಕೇ ಸಿಗುತ್ತದೆ ಎಂದು ಹೇಳಿದರು.

ದೇವಸ್ಥಾನದ ಅಭಿವೃದ್ಧಿಗೆ ಕೈಜೋಡಿಸಿದ್ದು, ಮುಂದಿನ ದಿನಗಳಲ್ಲಿ ಮತ್ತಷ್ಟು ಅಭಿವೃದ್ಧಿಗೆ ಸಹಾಯ, ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಮುಖ್ಯ ಅತಿಥಿಗಳಾಗಿ ಶ್ರೀಮಠದ ಆಡಳಿತಾಧಿಕಾರಿಗಳಾದ ಪಂ.ಶ್ರೀ ವಿದ್ಯಾಧೀಶಾಚಾರ್ಯ ಗುತ್ತಲ್, ಶ್ರೀಮದುತ್ತರಾದಿ ಮಠ ವ್ಯವಸ್ಥಾಪಕರಾದ ಪಂ. ಶ್ರೀ ಅನಿರುದ್ಧಾಚಾರ್ಯ ಪಾಂಡುರಂಗಿ, ಅನಿಲ್ ಕಂಭಾವಿ, ಎ.ಎಸ್.ಮೂರ್ತಿ, ಎಸ್.ಬಿ.ವಾಸುದೇವಮೂರ್ತಿ, ಶರತ್‌ಚಂದ್ರ, ಮಠದ ವ್ಯವಸ್ಥಾಪಕರಾದ ಪ್ರಮೋದ್ ಆಚಾರ್, ಭುಜಂಗ ಹಾಗೂ ಇನ್ನಿತರರು ಹಾಜರಿದ್ದರು.

ಮೈಸೂರು ವಿಭಾಗೀಯ ರೈಲ್ವೆ ನೂತನ ವ್ಯವಸ್ಥಾಪಕರಾಗಿ ಮುದಿತ್ ಮಿತ್ತಲ್ ಅಧಿಕಾರ ಸ್ವೀಕಾರ



ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕರಾಗಿ ಮುದಿತ್ ಮಿತ್ತಲ್ ಅಧಿಕಾರ ವಹಿಸಿಕೊಂಡರು.

ಮೈಸೂರು,ಏ.7(ಆರ್‌ಕೆ)– ಮೈಸೂರಿನ ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಆರ್‌ಎಂ)ರಾಗಿ ಮುದಿತ್ ಮಿತ್ತಲ್ ಇಂದು ಅಧಿಕಾರ ವಹಿಸಿಕೊಂಡರು.

ನಿರ್ಗಮಿತ ವ್ಯವಸ್ಥಾಪಕಿ ಶಿಲ್ಪಿ ಅಗರವಾಲ್, ನೂತನ ಡಿಆರ್‌ಎಂ ಮುದಿತ್ ಮಿತ್ತಲ್ ಅವರಿಗೆ ಅಧಿಕಾರ ಹಸ್ತಾಂತರಿಸಿದರು. 1996ರ ಪರೀಕ್ಷಾ ತಂಡದ ಐಆರ್‌ಎಎಸ್ ಸದಸ್ಯರಾಗಿದ್ದ ಮಿತ್ತಲ್ ಅವರು, ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಟಿಐ)ಯಿಂದ ಎಲೆಕ್ಟ್ರಾನಿಕ್ಸ್ ಇಂಜಿನಿಯರಿಂಗ್ ಪದವಿ ಪಡೆದಿದ್ದು, ಸಿಂಗಾಪುರದ ರಾಷ್ಟ್ರೀಯ ವಿಶ್ವವಿದ್ಯಾನಿಲಯದ ಲೀ ಕ್ವಾನ್ ಯೂ ಶಾಲೆಯಿಂದ ಸ್ನಾತಕೋತ್ತರ ಪದವಿ ಪಡೆದಿದ್ದಾರೆ.

ಭಾರತೀಯ ರೈಲ್ವೆಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಅವರು, ರೈಲ್ವೇ ವಿಕಾಸ ನಿಗಮ ಲಿಮಿಟೆಡ್‌ನಲ್ಲಿ ಕಾರ್ಯನಿರ್ವಾಹಕ ನಿರ್ದೇಶಕರಾಗಿ, ಪಶ್ಚಿಮ ಮಧ್ಯ ರೈಲ್ವೆ ಮುಖ್ಯ ಕಾರ್ಯನಿರ್ವಾಹಕ ಸಂಪರ್ಕ ಅಧಿಕಾರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಇದೇ ವೇಳೆ ನಿರ್ಗಮಿತ ಡಿಆರ್‌ಎಂ ಶಿಲ್ಪಿ ಅಗರವಾಲ್ ಅವರ ಸೇವೆಯನ್ನು ಸ್ಮರಿಸಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಅಶೋಕಪುರಂ ರೈಲು ನಿಲ್ದಾಣದ ಅಭಿವೃದ್ಧಿ ಸೇರಿದಂತೆ ಮೈಸೂರು ಭಾಗದಲ್ಲಿ ಪ್ರಯಾಣಿಕ ಸ್ನೇಹಿ ಸೌಲಭ್ಯಗಳನ್ನು ಕಲ್ಪಿಸಿದ ಬಗ್ಗೆಯೂ ಸ್ಮರಿಸಲಾಯಿತು.

ಮಾನಸಗಂಗೋತ್ರಿಯಲ್ಲಿ ಸ್ವಚ್ಛತಾ ಕಾರ್ಯ



ಮೈಸೂರಿನ ಮಾನಸಗಂಗೋತ್ರಿ ಆವರಣದಲ್ಲಿ ಸ್ವಚ್ಛತಾ ಕಾರ್ಯ ನಡೆಯಿತು.

ಮೈಸೂರು,ಏ.7(ಆರ್‌ಕೆ)– ಮೈಸೂರಿನ ಮಾನಸ ಗಂಗೋತ್ರಿ ಆವರಣದಲ್ಲಿ ಸ್ವಚ್ಛತಾ ಕಾರ್ಯ ಭಾನುವಾರ ಆರಂಭವಾಯಿತು. ಮೈಸೂರು ವಿಶ್ವವಿದ್ಯಾನಿಲಯ, ಎಂಎಸ್‌ಡಬ್ಲ್ಯು ವಿಭಾಗ ಹಾಗೂ ಜಿಎಸ್‌ಎಸ್ ಯೋಗಿಕ ರೀಸರ್ಚ್ ಫೌಂಡೇಷನ್ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ 'ಸ್ವಚ್ಛತೆಗೆ ಸ್ಫೂರ್ತಿ ಮಾನಸಗಂಗೋತ್ರಿ' ಎಂಬ ಶೀರ್ಷಿಕೆಯ ಸ್ವಚ್ಛತಾ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಗಂಗೋತ್ರಿಯ ಕುವೆಂಪು ಪ್ರತಿಮೆ ಬಳಿ ಚಾಲನೆ ನೀಡಿದರು.

ಈ ಸಂದರ್ಭ ಪಾಲ್ಗೊಂಡಿದ್ದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದ ಪ್ರೊ.ಲೋಕನಾಥ್, ಮಾನಸ ಗಂಗೋತ್ರಿ ಕ್ಯಾಂಪಸ್ ನಮ್ಮ ಅಸ್ಮಿತೆಯಾಗಿದ್ದು, ಅದನ್ನು ಸ್ವಚ್ಛವಾಗಿಟ್ಟುಕೊಳ್ಳುವ ಹೊಣೆ ನಮ್ಮದಾಗಿದೆ ಎಂದರು.

ಕುಲಸಚಿವೆ ಎಂ.ಕೆ.ಸವಿತಾ ಮಾತನಾಡಿ, ಸ್ವಚ್ಛತೆ ಮೂಲಕ ನಮ್ಮ ಶಿಸ್ತು ಆರಂಭವಾಗಿ ಅದರಿಂದ ಯಶಸ್ಸು ಸಹ ನಿರ್ಧಾರವಾಗುತ್ತದೆ. ನಮ್ಮ ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಮೂಲಭೂತ ಕರ್ತವ್ಯವೂ ಆಗಿದೆ ಎಂದರು.

ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಮಾತನಾಡಿ, ಸ್ವಚ್ಛ ಸರ್ವೇಕ್ಷಣಾ ಅಭಿಯಾನದಲ್ಲಿ ಈ ವರ್ಷ ಮೈಸೂರಿಗೆ ಪ್ರಥಮ ಸ್ವಚ್ಛ ನಗರ ನಮ್ಮೊಂದಿಗೆ ಪ್ರಶಸ್ತಿಗೆ ಪ್ರಯತ್ನಿಸಲಾಗುತ್ತಿದ್ದು, ವಿಶ್ವವಿದ್ಯಾನಿಲಯವೂ ಕಾಲೇಜು, ಕ್ಯಾಂಪಸ್ ಅನ್ನು ಸ್ವಚ್ಛವಾಗಿರಿಸಿಕೊಂಡು ಕೈ ಜೋಡಿಸಬೇಕು ಎಂದರು.

ಎಂಎಸ್‌ಡಬ್ಲ್ಯು ವಿಭಾಗದ ಪ್ರಾಧ್ಯಾಪಕಿ ಪ್ರೊ.ಜ್ಯೋತಿ, ನೂರಾರು ವರ್ಷಗಳ ಇತಿಹಾಸವಿರುವ ಮಾನಸಗಂಗೋತ್ರಿಯು ನಮ್ಮೆಲ್ಲರಿಗೂ ವಿದ್ಯೆ ಕಲಿಸಿ ಬದುಕು ರೂಪಿಸಿದೆ. ಅಂತಹ ವಿದ್ಯಾ ದೇಗುಲದ ಆವರಣವನ್ನು ಸ್ವಚ್ಛವಾಗಿರಿಸಿಕೊಳ್ಳುವುದು ನಮ್ಮೆಲ್ಲರ ಜವಾಬ್ದಾರಿ ಎಂದರು.

ಮಹದೇವಮ್ಮ ನಿಧನ



ಮೈಸೂರು, ಏ.7– ಮೈಸೂರಿನ ಶ್ರೀರಾಮ ರಸ್ತೆ ನಿವಾಸಿ ಹಾಗೂ ದಿವಂಗತ ಎ.ಸಿ. ಶಿವಶಂಕರ್ ಅವರ ಪತ್ನಿ ಮಹದೇವಮ್ಮ (ವತ್ಸಲ–85) ಇವರು ವಯೋ ಸಹಜ ಅನಾರೋಗ್ಯದಿಂದ ಇಂದು ನಿಧನರಾದರು.

ಮೃತರು ಪುತ್ರರಾದ ಹೆಸರಾಂತ ಇತಿಹಾಸಕಾರ ಎ.ಎಸ್. ಧರ್ಮೇಂದ್ರಕುಮಾರ್, ಎ.ಎಸ್. ವೀರೇಂದ್ರ ಕುಮಾರ್, ಎ.ಎಸ್. ರವೀಂದ್ರಕುಮಾರ್ ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಮಂಗಳವಾರ) ಬೆಳಗ್ಗೆ 11 ಗಂಟೆಗೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ

ಸ್ವಚ್ಛ ಸರ್ವೇಕ್ಷಣೆ-2024 ; ಮೈಸೂರಲ್ಲಿ ಸ್ವಚ್ಛ ಸರ್ವೇಕ್ಷಣೆ ತಂಡ

ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ತಂಡದಿಂದ ಮೌಲ್ಯಮಾಪನ ಪ್ರಕ್ರಿಯೆ ಆರಂಭ

10 ಮಂದಿ ಒಳಗೊಂಡ ತಂಡದಿಂದ ತ್ಯಾಜ್ಯ ಸಂಗ್ರಹ-ವಿಲೇವಾರಿ, ನೈರ್ಮಲ್ಯ, ನೀರು ನಿರ್ವಹಣೆ ವಿಧಾನದ ಪರಿಶೀಲನೆ

ಮೈಸೂರು,ಏ.7(ಪಿಎಂ)– ಸ್ವಚ್ಛ ಸರ್ವೇಕ್ಷಣೆ 2024ರ ಸಂಬಂಧ ಮೈಸೂರು ನಗರದಲ್ಲಿನ ತ್ಯಾಜ್ಯ ಸಂಗ್ರಹ–ವಿಲೇವಾರಿ ಪ್ರಕ್ರಿಯೆ ಹಾಗೂ ನೈರ್ಮಲ್ಯ ಮತ್ತು ನೀರು ನಿರ್ವಹಣೆಯ ಮೌಲ್ಯಮಾಪನಾ ಪ್ರಕ್ರಿಯೆ ನಡೆಯುತ್ತಿದ್ದು, ಏ.2ರಂದು ಮೈಸೂರಿಗೆ ಆಗಮಿಸಿರುವ ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾದ (ಭಾರತೀಯ ಗುಣಮಟ್ಟ ಮಂಡಳಿ) 10 ಮಂದಿ ಸದಸ್ಯರನ್ನು ಒಳಗೊಂಡ ತಂಡವು ಪ್ರಕ್ರಿಯೆ ಕೈಗೆತ್ತಿಕೊಂಡಿದೆ.



ಸ್ವಚ್ಛ ಸರ್ವೇಕ್ಷಣೆ ದೇಶದಲ್ಲಿ ಫೆ.15ರಿಂದ ಆರಂಭವಾಗಿದ್ದು, ಏಪ್ರಿಲ್ ಅಂತ್ಯದವರೆಗೆ ನಡೆಯಲಿದೆ. ಮೈಸೂರು ಮಹಾನಗರ ಪಾಲಿಕೆಯು ಫೆಬ್ರವರಿಗೂ ಮೊದಲೇ ನಗರದ ಸ್ವಚ್ಛತೆ ಕಾಪಾಡಿ ಉತ್ತಮ ಶ್ರೇಯಾಂಕ ಪಡೆಯಲು ತಯಾರಿ ಆರಂಭಿಸಿತ್ತು. ಎಲ್ಲೆಂದರಲ್ಲಿ ಕಸ ಎಸೆಯುವವರ ವಿರುದ್ಧ ದಂಡಾಸ್ತ್ರದ ಪ್ರಯೋಗದೊಂದಿಗೆ ಒಂದು ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸುವ ಹಂತಕ್ಕೂ ಹೋಗಿತ್ತು.

ಅಲ್ಲದೆ, ನಗರದ ಸ್ವಚ್ಛತೆ ಕಾಪಾಡುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳಿಗೆ ಸಂಬಂಧಿಸಿದಂತೆ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ತಮ್ಮ ಅಧೀನ ಅಧಿಕಾರಿಗಳೊಂದಿಗೆ ಹಲವು ಸುತ್ತಿನ ಸಭೆ ನಡೆಸಿದ್ದಲ್ಲದೆ, ನಗರದ ವಿವಿಧ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದರು. ವಿವಿಧ ಸಂಘ–ಸಂಸ್ಥೆಗಳು, ಎನ್‌ಜಿಓಗಳ ಪ್ರತಿನಿಧಿಗಳ ಸಭೆ ನಡೆಸಿ ಸಲಹೆಗಳನ್ನು ಪಡೆದಿದ್ದರು. ಆ ಮೂಲಕ ಅಗ್ರಸ್ಥಾನ ಅಲಂಕರಿಸಲು ಸಿದ್ಧತೆ ನಡೆಸಲಾಗಿತ್ತು.

ಇದೀಗ ಏ.2ರಂದು ನಗರಕ್ಕೆ ಆಗಮಿಸಿರುವ ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾದ ತಂಡವು ಸಾರ್ವಜನಿಕ ಶೌಚಾಲಯಗಳ ಪರಿಶೀಲನೆ ಜೊತೆಗೆ ಯುಜಿಡಿ ಲೈನ್‌ಗಳು, ಘನ ತ್ಯಾಜ್ಯ ಸಂಗ್ರಹಣೆ, ವಿಲೇವಾರಿ ಪ್ರಕ್ರಿಯೆ ಬಗ್ಗೆ ಪ್ರತಿ ವಾರ್ಡ್‌ನಲ್ಲೂ ಪರಿಶೀಲನೆ ಮಾಡುತ್ತಿದೆ. ಈ ಪ್ರಕ್ರಿಯೆ ಇನ್ನು 10 ದಿನಗಳವರೆಗೆ ಮುಂದುವರೆಯುವ ಸಾಧ್ಯತೆ ಇದೆ ಎಂದು ಪಾಲಿಕೆ ಮೂಲಗಳು ತಿಳಿಸಿವೆ.

ಮಾರ್ಚ್ 25ರಿಂದ ಏ.1ರವರೆಗೆ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಇಬ್ಬರನ್ನು ಒಳಗೊಂಡ ಮತ್ತೊಂದು ತಂಡ ಮೂರು ದಿನಗಳ ಕಾಲ ಮೈಸೂರಿನಲ್ಲಿ ಇದ್ದು, ತ್ಯಾಜ್ಯ ಉತ್ಪಾದನೆ, ನಿರ್ವಹಣೆ ಮತ್ತು ಮರುಬಳಕೆ ಬಗ್ಗೆ ಪರಿಶೀಲನೆ ನಡೆಸಿ ತೆರಳಿತ್ತು. ಈಗ ಕ್ವಾಲಿಟಿ ಕೌನ್ಸಿಲ್ ಆಫ್ ಇಂಡಿಯಾ ತಂಡ ಮೌಲ್ಯಮಾಪನ ಮುಂದುವರೆಸಿವೆ. 2015 ಮತ್ತು 2016ರಲ್ಲಿ ನಡೆದ ಸ್ವಚ್ಛ ಸರ್ವೇಕ್ಷಣೆಯ ಸಮಗ್ರ ವಿಭಾಗದಲ್ಲಿ ಮೈಸೂರು ನಗರ ಸತತ ಎರಡು ಬಾರಿ ದೇಶದ ನಂಬರ್ 1 ಸ್ವಚ್ಛ ನಗರ ಪ್ರಶಸ್ತಿಗೆ ಭಾಜನವಾಗಿ ಇಡೀ ದೇಶದ ಗಮನ ಸೆಳೆದಿತ್ತು. ನಂತರದ ವರ್ಷಗಳಲ್ಲಿ ಶ್ರೇಯಾಂಕದಲ್ಲಿ ಇಳಿಕೆ ಕಂಡಿತ್ತು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಮೈಸೂರು ಮಹಾನಗರ ಪಾಲಿಕೆ ಸಹಾಯಕ ಕಾರ್ಯಪಾಲಕ ಅಭಿಯಂತರರೂ ಆದ ಸ್ವಚ್ಛ ಸರ್ವೇಕ್ಷಣ ನೋಡಲ್ ಅಧಿಕಾರಿ ಕೆ.ಎಸ್.ಮೃತ್ಯುಂಜಯ, ಸ್ವಚ್ಛ ಸರ್ವೇಕ್ಷಣೆಯಲ್ಲಿ ಒಟ್ಟು 12,500 ಅಂಕಗಳನ್ನು ನಿಗದಿಗೊಳಿಸಲಾಗಿದೆ. ಈಗಾಗಲೇ ನಡೆದಿರುವ ಮೊದಲ ಸುತ್ತಿನ ಮೌಲ್ಯಮಾಪನವು 10 ಸಾವಿರ ಅಂಕಗಳಿಗೆ ಸಂಬಂಧಿಸಿದೆ. ಈಗ ನಡೆಯುತ್ತಿರುವ ಮೌಲ್ಯಮಾಪನವು ಉಳಿದ 2,500 ಅಂಕಗಳಿಗೆ ಸಂಬಂಧಿಸಿದೆ. ಪಾಲಿಕೆಯು ಹಲವು ತಿಂಗಳಿಂದ ನಗರದ ಸ್ವಚ್ಛತೆ ಕಾಪಾಡಲು ಸಾಕಷ್ಟು ಪ್ರಯತ್ನ ಹಾಕಿತ್ತು. ನಮ್ಮ ಪ್ರಯತ್ನಕ್ಕೆ ಉತ್ತಮ ಫಲ ದೊರೆಯುವ ವಿಶ್ವಾಸ ಇದೆ ಎಂದು ಹೇಳಿದರು.

ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛಗೊಳಿಸಿದರೆ ಎಫ್‌ಐಆರ್

ಬೆಂಗಳೂರು: ಕರ್ನಾಟಕ ಶಾಲಾ ಶಿಕ್ಷಣ ಇಲಾಖೆಯು ಎಲ್ಲಾ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಿಗೆ ಎಚ್ಚರಿಕೆ ನೀಡಿದ್ದು, ಶೌಚಾಲಯ ಸ್ವಚ್ಛಗೊಳಿಸುವ ಕಾರ್ಯದಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸದಂತೆ ನಿರ್ದೇಶಿಸಿದೆ.

ನಿಯಮ ಉಲ್ಲಂಘಿಸಿದರೆ ಕಾರಣವಾದ ಸಿಬ್ಬಂದಿ ವಿರುದ್ಧ ಎಫ್‌ಐಆರ್ ದಾಖಲಿಸುವುದು ಸೇರಿದಂತೆ ಶಿಸ್ತು ಕ್ರಮಕ್ಕೆ ತೆಗೆದುಕೊಳ್ಳಲಾಗುತ್ತದೆ ಎಂದು ಇಲಾಖೆ ತಿಳಿಸಿದೆ. ಬೇಗೂರು ಪೊಲೀಸ್ ವ್ಯಾಪ್ತಿಯಲ್ಲಿರುವ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳನ್ನು ಶೌಚಾಲಯ ಸ್ವಚ್ಛಗೊಳಿಸುವಂತೆ ಒತ್ತಾಯಿಸಿದ ಘಟನೆಯ ನಂತರ ಈ ಸುತ್ತೋಲೆ ಹೊರಡಿಸಲಾಗಿದೆ. ಮಕ್ಕಳ ವೀಡಿಯೊಗಳು ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆದ ನಂತರ ಈ ವಿಷಯ ಬೆಳಕಿಗೆ ಬಂದಿದೆ. ಸಾಮಾಜಿಕ ಕಾರ್ಯಕರ್ತ ನಾಗೇಶ್ ದೂರು ದಾಖಲಿಸಿದ ನಂತರ ಮಾರ್ಚ್ 29 ರಂದು ಶಾಲಾ ಮುಖ್ಯೋಪಾಧ್ಯಾಯಿನಿ ಮತ್ತು ದೈಹಿಕ ಶಿಕ್ಷಣ ಶಿಕ್ಷಕರ ವಿರುದ್ಧ ಬಾಲ ನ್ಯಾಯ ಕಾಯ್ದೆಯಡಿ ಪೊಲೀಸ್ ಪ್ರಕರಣ ದಾಖಲಿಸಲಾಗಿದೆ.

ಕೇರಳ ಪ್ರವಾಸಿಗ ಕೆಆರ್‌ಎಸ್ ಬೃಂದಾವನ ಗಾರ್ಡನ್‌ನಲ್ಲಿ ಸಾವು

ಇನ್ನಿತರೆ ಪ್ರವಾಸಿಗರ ಹಲ್ಲೆಯಿಂದ ಸಾವಿನ ಶಂಕೆ

ಕೆಆರ್‌ಎಸ್, ಏ.7– ಕೇರಳ ಪ್ರವಾಸಿಗನ ಮೇಲೆ ಇತರೆ ಪ್ರವಾಸಿಗರು ಹಲ್ಲೆ ಮಾಡಿದ್ದರಿಂದ ಆತ ಸಾವನ್ನಪ್ಪಿದ್ದಾನೆ ಎಂದು ಹೇಳಲಾಗಿದ್ದು, ಈ ಘಟನೆ ಕಳೆದ ಏಪ್ರಿಲ್ 3ರಂದು ಕೆಆರ್‌ಎಸ್ ಬೃಂದಾವನ ಗಾರ್ಡನ್‌ನಲ್ಲಿ ಸಂಭವಿಸಿದೆ ಎನ್ನಲಾಗಿದೆ.

ಕೇರಳದ ಇಡುಕ್ಕಿ ಜಿಲ್ಲೆ ನರಿಯಂಪರ ಕಟ್ಟಪ್ಪನ ಟೌನ್ ನಿವಾಸಿ ಜಾರ್ಜ್ ಜೋಸೆಫ್ (64) ಮೃತಪಟ್ಟ ಪ್ರವಾಸಿಗನಾಗಿದ್ದು, ಸಾರ್ವಜನಿಕರ ಹಲ್ಲೆಯಿಂದ ತೀವ್ರವಾಗಿ ಅಸ್ವಸ್ಥಗೊಂಡು, ಪ್ರಜ್ಞಾಹೀನನಾಗಿದ್ದ ಈತ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಸಾಗಿಸುವ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ.

ಕೇರಳದ ಇಡುಕ್ಕಿ ಜಿಲ್ಲೆಯಿಂದ 10 ಮಂದಿ ಏಪ್ರಿಲ್ 3ರಂದು ಕೆಆರ್‌ಎಸ್‌ಗೆ ಟಿಟಿ ವಾಹನದಲ್ಲಿ ಪ್ರವಾಸ ಬಂದಿದ್ದರು. ಅಂದು ಸಂಜೆ ಕೆಆರ್‌ಎಸ್‌ನಲ್ಲಿ ಸಂಗೀತ ಕಾರಂಜಿ ವೀಕ್ಷಿಸುತ್ತಿದ್ದ ವೇಳೆ ಜಾರ್ಜ್ ಜೋಸೆಫ್ ತಮ್ಮ ಸ್ನೇಹಿತರ ಗುಂಪಿನಿಂದ ಚದುರಿ ಬೇರೆ ಕಡೆ ಹೋಗಿದ್ದಾರಂತೆ. ಆದರೆ, ಕೆಲ ಹೊತ್ತಿನಲ್ಲೇ ತೀವ್ರವಾಗಿ ಅಸ್ವಸ್ಥಗೊಂಡು ಟಿಕೆಟ್ ಕೌಂಟರ್ ಬಳಿ ಬಂದು ಕುಸಿದು ಬಿದ್ದಿದ್ದಾನೆ ಎಂದು ಹೇಳಲಾಗಿದೆ. ಈತನನ್ನು ಆಸ್ಪತ್ರೆಗೆ ಸಾಗಿಸಲು ಆಂಬುಲೆನ್ಸ್ ಲಭ್ಯವಾಗದ ಕಾರಣ ಸ್ನೇಹಿತರೇ ತಮ್ಮ ವಾಹನದಲ್ಲಿ ಮೈಸೂರಿನ ಇಎಸ್‌ಐ ಆಸ್ಪತ್ರೆಗೆ ಕರೆದೊಯ್ದಿದ್ದು, ಅಲ್ಲಿನ ವೈದ್ಯರ ಸಲಹೆ ಮೇರೆಗೆ ಜಯದೇವ ಹೃದ್ರೋಗ ಆಸ್ಪತ್ರೆಗೆ ಆಂಬುಲೆನ್ಸ್‌ನಲ್ಲಿ ಕರೆದೊಯ್ದಾಗ ವೈದ್ಯರು ಜಾರ್ಜ್ ಜೋಸೆಫ್ ಅದಾಗಲೇ ಸಾವನ್ನಪ್ಪಿದ್ದಾರೆ ಎಂದು ಘೋಷಿಸಿದ್ದಾರೆ.

ಜಾರ್ಜ್ ಜೋಸೆಫ್ ಅವರು ಯುವತಿಯ ಜೊತೆ ಅಸಭ್ಯವಾಗಿ ವರ್ತಿಸಿದ್ದರಿಂದ ಸಾರ್ವಜನಿಕರು ಹಲ್ಲೆ ಮಾಡಿದ್ದಾರೆ ಎಂದು ಹೇಳಲಾಗಿದೆ. ಅಂದು ಸಂಜೆ 7.42ರಲ್ಲಿ ಸ್ನೇಹಿತರು ಜಾರ್ಜ್ ಜೋಸೆಫ್ ಮೊಬೈಲ್‌ಗೆ ಕರೆ ಮಾಡಿದಾಗ ಆತ ತನ್ನ ಜೊತೆ ಯಾರೋ ಗಲಾಟೆ ಮಾಡುತ್ತಿದ್ದಾರೆ ಎಂದು ಹೇಳಿದ್ದಾನೆ. ಅದಾದ 6 ನಿಮಿಷದ ಬಳಿಕ ಮತ್ತೆ ಸ್ನೇಹಿತರು ಕರೆ ಮಾಡಿದಾಗ ಬೇರೆ ಯಾರೋ ಕರೆ ಸ್ವೀಕರಿಸಿ ಟಿಕೆಟ್ ಕೌಂಟರ್ ಬಳಿ ಬರುವಂತೆ ತಿಳಿಸಿದ್ದಾರೆ. ಈ ಅಂಶಗಳನ್ನು ಗಮನಿಸಿದಾಗ ಜಾರ್ಜ್ ಜೋಸೆಫ್ ಮೇಲೆ ಹಲ್ಲೆ ನಡೆದಿರಬಹುದು ಎಂಬುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಅದಕ್ಕೆ ಪೂರಕವೆಂಬಂತೆ ಏಪ್ರಿಲ್ 4ರಂದು ಬೆಳಗ್ಗೆ ಕೆಆರ್‌ಎಸ್ ಠಾಣೆ ಪೊಲೀಸರಿಗೆ ದೂರು ಸಲ್ಲಿಸಿರುವ ಜಾರ್ಜ್ ಜೋಸೆಫ್ ಸ್ನೇಹಿತ ಕೆ.ಎಸ್. ಅನಿಲ್‌ಕುಮಾರ್, ತಾವು ಟಿಕೆಟ್ ಕೌಂಟರ್ ಬಳಿ ಹೋದಾಗ ಅಲ್ಲಿ ನೆಲದ ಮೇಲೆ ಜಾರ್ಜ್ ಜೋಸೆಫ್ ಮಲಗಿದ್ದರು. ಅವರಿಗೆ ಪ್ರಜ್ಞೆ ಇರಲಿಲ್ಲ. ಅವರ ಎಡಭಾಗದ ಕಣ್ಣಿನ ಹುಬ್ಬಿನ ಬಳಿ ಪೆಟ್ಟಾಗಿತ್ತು. ಮೂಗು ಮತ್ತು ತುಟಿ ಹತ್ತಿರ ರಕ್ತ ಬರುತ್ತಿತ್ತು. ಹೀಗಾಗಿ ಜಾರ್ಜ್ ಜೋಸೆಫ್ ಸಾವಿನ ಬಗ್ಗೆ ನಮಗೆ ಅನುಮಾನವಿದೆ ಎಂದು ತಿಳಿಸಿದ್ದಾರೆ. ಅಲ್ಲದೇ ತಾವು 7.42 ರಲ್ಲಿ ಕರೆ ಮಾಡಿದಾಗ ಯಾರೋ ನನ್ನ ಜೊತೆ ಗಲಾಟೆ ಮಾಡುತ್ತಿದ್ದಾರೆ ಎಂದು ಜಾರ್ಜ್ ಜೋಸೆಫ್ ಹೇಳಿದ್ದನ್ನೂ ಸಹ ಉಲ್ಲೇಖಿಸಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆ ಪೊಲೀಸರು ಬಿಎನ್‌ಎಸ್‌ಎಸ್ 194(3) (4)ರಂತೆ ಯುಡಿಆರ್ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ. ಜಾರ್ಜ್ ಜೋಸೆಫ್‌ನ ಸಾವು ಹೇಗೆ ಸಂಭವಿಸಿದೆ ಎಂಬುದು ತನಿಖೆಯಿಂದ ತಿಳಿಯಬೇಕಾಗಿದೆ ಎಂದು ಪೊಲೀಸರು ಎಫ್‌ಐ ಆರ್‌ನಲ್ಲಿ ನಮೂದಿಸಿದ್ದಾರೆ.

ನಾಳೆಯಿಂದ ಬೇಸಿಗೆ ಶಿಬಿರ

ಮೈಸೂರು, ಏ.7(ಜಿಎ)– ಚಿತ್ರಭೂಮಿ ಇತ್ಯಾದಿ ವೇದಿಕೆ ವತಿಯಿಂದ ಏ.9 ರಿಂದ ಮೇ 9ರವರೆಗೆ ಜೆ.ಪಿ.ನಗರದ ಮಹರ್ಷಿ ಶಾಲೆಯಲ್ಲಿ ಮಕ್ಕಳಿಗಾಗಿ ಬೇಸಿಗೆ ಶಿಬಿರ ಆಯೋಜಿಸಲಾಗಿದೆ ಎಂದು ನಟ ಆದಿ ಲೋಕೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1ನೇ ತರಗತಿ ಮಕ್ಕಳಿಂದ 19ನೇ ವಯಸ್ಸಿನವರೆಗಿನವರು ಈ ಶಿಬಿರದಲ್ಲಿ ಪಾಲ್ಗೊಳ್ಳಬಹುದು. ಶಿಬಿರದಲ್ಲಿ ನೃತ್ಯ, ಜನಪದ ಗೀತೆ, ಕೆತ್ತನೆ, ಆಭರಣ ತಯಾರಿಕೆ, ನಟನೆ, ರಂಗಭೂಮಿ ಪರಿಚಯ, ವಿಸ್ತಾರ ಹಾಗೂ ಎಲ್ಲ ಆಯಾಮಗಳ ತರಬೇತಿ ನೀಡಲಾಗುವುದು ಎಂದರು. ಮಾಹಿತಿಗೆ ದೂ. 94825 20369, 72047 84874 ಸಂಪರ್ಕಿಸುವಂತೆ ಕೋರಿದರು. ಗೋಷ್ಠಿಯಲ್ಲಿ ರಂಗಕರ್ಮಿ ದೀಪಕ್, ಮಹೇಂದ್ರ ಮಹೇಂದ್ರ ಇನ್ನಿತರರಿದ್ದರು.

ಮೈಸೂರಲ್ಲಿ ಹೈ ಲೈಫ್ ಫ್ಯಾಷನ್ ಶಾಪಿಂಗ್ ಉತ್ಸವಕ್ಕೆ ಚಾಲನೆ

ಮೈಸೂರು, ಏ.7(ಜಿಎ)–ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈಲೈಫ್ ಸಂಸ್ಥೆ ಆಯೋಜಿಸಿರುವ ಭಾರತೀಯ ಫ್ಯಾಷನ್ ಕುರಿತ ಎರಡು ದಿನಗಳ ಶಾಪಿಂಗ್ ಉತ್ಸವವನ್ನು ಅದ್ದೂರಿಯಾಗಿ ಉದ್ಘಾಟಿಸಲಾಯಿತು.

ಏ.7 ಮತ್ತು 8 ರಂದು ನಡೆಯುವ ಈ ಎರಡು ದಿನಗಳ ಶಾಪಿಂಗ್ ಪ್ರದರ್ಶನ ಮತ್ತು ಮಾರಾಟ ಉತ್ಸವವು ಅತ್ಯುತ್ತಮ ವಧುವಿನ ಉಡುಪು, ಆಭರಣಗಳು ಮತ್ತು ಪರಿಕರಗಳನ್ನು ಒಟ್ಟುಗೂಡಿಸುತ್ತದೆ, ಇದು ಭಾರತೀಯ ಫ್ಯಾಷನ್‌ನ ಅತ್ಯುತ್ತಮತೆಯನ್ನು ಪ್ರದರ್ಶಿಸುತ್ತದೆ. ಈ ಪ್ರದರ್ಶನದಲ್ಲಿ ಲೆಹೆಂಗಾಗಳು, ಸೀರೆಗಳು, ಆಧುನಿಕ ನಿಲುವಂಗಿಗಳು ಮತ್ತು ವ್ಯಾಪಕ ಶ್ರೇಣಿಯ ಅತ್ಯುತ್ತಮ ಆಭರಣಗಳ ವಿಶೇಷ ಸಂಗ್ರಹಗಳನ್ನು ಒಳಗೊಂಡಿದೆ. ವಧುಗಳು ಪ್ರತಿಯೊಂದು ಶೈಲಿ ಮತ್ತು ಆದ್ಯತೆಗೆ ಅನುಗುಣವಾಗಿ ಸಂಗ್ರಹಿಸಲಾದ ವಿವಿಧ ರೀತಿಯ ಉನ್ನತ–ಮಟ್ಟದ ವಿನ್ಯಾಸಕ ಉಡುಗೆ ಮತ್ತು ಪರಿಕರಗಳನ್ನು ಅನ್ವೇಷಿಸಬಹುದು.

ಈ ವೇಳೆ ಹೈ ಲೈಫ್ ಬ್ರೈಡ್ಸ್‌ನ ಸಹ ಆಯೋಜಕಿ ಶೋಮಿಕಾ ಎಸ್.ರಾವ್ ಮಾತನಾಡಿ, ಹೈ ಲೈಫ್ ಬ್ರೈಡ್ಸ್ ಎಂಬುದು ಸಂಪ್ರದಾಯ ಮತ್ತು ಆಧುನಿಕತೆಗಳು ಒಟ್ಟಿಗೆ ಸೇರುವ ಅತ್ಯುತ್ತಮ ವಧುವಿನ ಫ್ಯಾಷನ್ ಅನ್ನು ಪ್ರದರ್ಶಿಸುವ ವೇದಿಕೆಯಾಗಿದೆ.




ಮೈಸೂರಿನ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಹೈಲೈಫ್ ಸಂಸ್ಥೆ ಆಯೋಜಿಸಿರುವ ಭಾರತೀಯ ಫ್ಯಾಷನ್ ಕುರಿತ ಎರಡು ದಿನಗಳ ಶಾಪಿಂಗ್ ಉತ್ಸವವನ್ನು ಅದ್ದೂರಿಯಾಗಿ ಉದ್ಘಾಟಿಸಲಾಯಿತು.

ಮೈಸೂರು ವಧುಗಳ ಸಾರವನ್ನು ಪ್ರತಿಬಿಂಬಿಸುವ ವಿಶಿಷ್ಟ ಸಂಗ್ರಹವನ್ನು ಒಟ್ಟುಗೂಡಿಸಲು ನಾವು ಶ್ರಮಿಸಿದ್ದೇವೆ. ಮೈಸೂರಿನಲ್ಲಿ ಈ ಪ್ರದರ್ಶನವನ್ನು ಆಯೋಜಿಸಲು ನಾವು ಉತ್ಸುಕರಾಗಿದ್ದೇವೆ. ನಗರವು ಯಾವಾಗಲೂ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಹೊಂದಿದೆ ಮತ್ತು ಭಾರತೀಯ ವಿವಾಹಗಳ ಸೊಬಗು ಮತ್ತು ಸೊಬಗನ್ನು ಆಚರಿಸುವ ಕಾರ್ಯಕ್ರಮವನ್ನು ತರಲು ನಾವು ಹೆಮ್ಮೆಪಡುತ್ತೇವೆ ಎಂದರು.

ಪ್ರದರ್ಶನ ಮತ್ತು ಮಾರಾಟ ಬೆಳಗ್ಗೆ 10 ಗಂಟೆಯಿಂದ ರಾತ್ರಿ 9ರವರೆಗೆ ಮೇಳ ನಡೆಯಲಿದೆ. ಪ್ರವೇಶ ಉಚಿತವಿದ್ದು, ಮೈಸೂರಿಗರು ಸದುಪಯೋಗ ಪಡೆದುಕೊಳ್ಳಿ ಎಂದರು. ಪ್ರದರ್ಶನದಲ್ಲಿ ಕಲಿಸು ಫೌಂಡೇಶನ್‌ನ ಯೋಜನಾ ಮುಖ್ಯಸ್ಥೆ ಕೆ.ಎಸ್.ನಾಗಶ್ರೀ, ಲೇಖಕಿ ಸುಜಾತಾ ರಾಜ್‌ಪಾಲ್, ಕಲಾವಿದೆ ಶಾಂತಲಾ ಅನಂತ್, ಚಾರ್ಟರ್ಡ್ ಅಕೌಂಟೆಂಟ್ ಸಿ.ಆರ್.ಜಯಶ್ರೀ, ಎಂಯುಎ ಕಲಾವಿದೆ ಪೂಜಾ ಶ್ರೀ, ಉಡುಪಿ ಕಿಚನ್‌ನ ಸಂಸ್ಥಾಪಕಿ ಪದ್ಮಾವತಿ ಎಸ್.ಭಟ್, ದರ್ಪಣ್ ಮೇಕಪ್ ಸ್ಟುಡಿಯೋದ ಸಂಸ್ಥಾಪಕಿ ಹೇಮಾ ಎಸ್ ದರ್ಪನ್, ವುಮೆನ್ ವಿಥ್ ವಿಂಗ್ಸ್‌ನ ಸಂಸ್ಥಾಪಕಿ ವಿನುತರಾವ್, ಜಿಎಸ್‌ಎಸ್–ಎ ಹೆಲ್ತ್ & ವೆಲ್ನೆಸ್ ಡಿಜಿಟಲ್ ಪ್ಲಾಟ್‌ಫಾರ್ಮ್‌ನಲ್ಲಿ ಸಿಒಒ ರೂಪಶ್ರೀ ಮತ್ತಿತರರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

8.04.2025 ಮಂಗಳವಾರ, ಮಳೆ ನಕ್ಷತ್ರ: ರೇವತಿ 31.03.2025ರಿಂದ 12.04.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 3.00ರಿಂದ 4.30ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಕುತ್ತಿಗೆ ಹಾಗೂ ಬೆನ್ನುನೋವಿಗೆ ಆಕ್ಯೂಪಂಕ್ಚರ್ ಮತ್ತು ಯೋಗ ಶಿಬಿರ, ಅಧಿಕ ರಕ್ತದೊತ್ತಡ ಮತ್ತು ಬೊಜ್ಜು ನಿವಾರಣಾ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9ರಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ, ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10 ಗಂಟೆಗೆ.

■ **ವ್ಯವಸ್ಥಾಪಕರು:** ಹೈ ಲೈಫ್ ಎಕ್ಸ್‌ಪೋ, ಸ್ಥಳ: ರಾಡಿಸನ್ ಬ್ಲೂ ಪ್ಲಾಜಾ ಹೋಟೆಲ್, ಮೈಸೂರು, ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ.

■ **ಅಂತರರಾಷ್ಟ್ರೀಯ ಲಯನ್ಸ್ ಜಿಲ್ಲೆ 317 ಜಿ:** ಪ್ರಾಂತೀಯ ಸಮ್ಮೇಳನ, ಮುಖ್ಯ ಅತಿಥಿಗಳು: ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ಲಯನ್ ಪಿ. ದೇವೇಗೌಡ, ಭಾಷಣಕಾರರು ಹಾಗೂ ಸನ್ಮಾನಿತರು: ಡಾ. ಕೆ.ಎಲ್. ಹರೀಶ್, ಡಾ. ಮೋನಿಕಾ ಭಾಸ್ಕರ್ ಕೆ., ಲಯನ್ ಅಮರಭವಾನಿ ವಿ., ಲಯನ್ ಭಾಸ್ಕರಾನಂದ ಕೆ.ಆರ್, ಸ್ಥಳ: ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣ, ಜೆ.ಪಿನಗರ, ಬೆಳಗ್ಗೆ 9ರಿಂದ.

■ **ರಾಮೋತ್ಸವ ಮಂಡಲಿ ಚಾರಿಟಬಲ್ ಟ್ರಸ್ಟ್:** ದ್ವಂದ ಗಾಯನ ಹೆಚ್.ಎಂ. ಲಕ್ಷ್ಮಿ, ಪ್ರೇರಣ, ಪ್ರವೀಣ್, ಭುವನ್, ವಿದುಷಿ ಕಾಂಚನ ಸಹೋದರಿಯರು, ವಯಲಿನ್: ವಿದ್ವಾನ್ ಕೇಶವ್ ಮೋಹನ್‌ಕುಮಾರ್, ಮೃದಂಗ: ವಿದ್ವಾನ್ ಎ. ರಾಧೇಶ್, ಘಟಂ: ವಿದ್ವಾನ್ ಶಮಿತ್‌ಗೌಡ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ, ಸಂಜೆ 5.15ಕ್ಕೆ.

■ **ಶ್ರೀ ಸೀತಾರಾಮ ದೇವಾಲಯ:** ಶರಣಾಗತಿ ಶಾಸ್ತ್ರ ಶ್ರೀ ರಾಮಾಯಣ ಪ್ರವಚನ, ಡಾ. ಜಿ.ವಿ. ನರಸಿಂಹನ್ ಅವರಿಂದ, ಸ್ಥಳ: ಶ್ರೀ ಸೀತಾರಾಮ ದೇವಾಲಯ, ಸಿದ್ಧಾರ್ಥನಗರ, ಸಂಜೆ 6ಕ್ಕೆ.

■ **ಶ್ರೀ ಚಾಮುಂಡೇಶ್ವರಿ ದೇವಸ್ಥಾನ:** ರಜನಿಕಾಂತ್ ತಂಡದವರಿಂದ ಆರ್ಕೆಸ್ಟ್ರಾ ಮತ್ತು ಭಕ್ತಿಗೀತೆಗಳು, ಸ್ಥಳ: ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಬೋಗಾದಿ, ಸಂಜೆ 6ಕ್ಕೆ.

■ **ಶ್ರೀ ರಾಮಾಭ್ಯುದಯ ಮಹಾಸಭಾ:** ಶಾಸ್ತ್ರೀಯ ಸಂಗೀತ, ವಿದ್ವಾನ್ ವಿಷ್ಣುದೇವ್ ನಂಬೂದರಿ ಅವರಿಂದ ಪಿಟೀಲು: ಸಿ.ಎನ್. ಅನುರೂಪ್, ಮೃದಂಗ: ಡಾ. ಪಾಲಕ್ಕಾಡ್ ಆರ್. ಜಯಕೃಷ್ಣನ್, ಘಟಂ: ಶ್ರೀ ನಿಧಿ ಕೌಂಡಿನ, ಸ್ಥಳ: ಶ್ರೀಮತಿ ಆಲಮ್ಮನ ಛತ್ರ, ಕುಂಚಿಟಿಗರ ಸಂಘ, ಸಮಯ: ಸಂಜೆ 6.30ಕ್ಕೆ.

■ **ಶ್ರೀರಾಮ ಸೇವಾ ಮಂಡಲಿ:** ಭಕ್ತಿಗೀತೆಗಳು, ವಿದುಷಿ ಶ್ರೀಮತಿ ಚಾಂದಿನಿ ಗರ್ತಿಕೆರೆ ಮತ್ತು ವೃಂದದವರಿಂದ ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.


ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಶ್ರದ್ಧೆಯ ಶಿಲ್ಪ ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, 6.50–ರೈತರಿಗೆ ಸಲಹೆ, 7.15 –ಕಾದಂಬರಿ ವಿಹಾರ: ಎಂ.ಆರ್.ಶ್ರೀನಿವಾಸಮೂರ್ತಿಯವರ ರಂಗಣ್ಣನ ಕನಸಿನ ದಿನಗಳು, ಕಾದಂಬರಿಯ ಬಾನುಲಿ ಓದು. ಪ್ರಸ್ತುತಿ: ಉಮೇಶ್. ಎಸ್. ಎಸ್, 8.30 ಯೋಗ ಕುರಿತ ವಿಶೇಷ ಸರಣಿ, ಮಹಾಯೋಗ, 8.35–ಕರೆಗೊಂದು ಗೀತೆ – ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00ಕರ್ನಾಟಕ ಶಾಸ್ತ್ರೀಯ ಸಂಗೀತ: ಮೈಸೂರು ಎಸ್.ರಾಜಲಕ್ಷ್ಮೀ–ವೀಣಾವಾದನ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಕಥೆಯಲ್ಲಿದೆ ಉತ್ತರ, ಪ್ರಸ್ತುತಿ: ಪ್ರಭುಸ್ವಾಮಿ ಮಳಿಮಠ್ ಹಾಗೂ ಕಾರ್ತಿಕ್. ಎಂ.ಎಸ್, 12.05 ವನಿತಾ ವಿಹಾರ, 12.35–ದೇವರನಾಮ, 12.45–ಕನ್ನಡದಲ್ಲಿ ಭಾಷಣ –ದಿಲೀಪ್. ಎನ್. ಕೆ ಅವರಿಂದ ಸಣ್ಣ ಕಥೆ ದೊಡ್ಡ ಸಂಪಿಗೆಯ ತಿರುವು, 1.00–ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, UMANG ಕುರಿತು ಪ್ರದೀಪ್ ಅವರಿಂದ ಮಾಹಿತಿ, 1.20–ಭಾವಗೀತೆಗಳು: ಸುನಂದಾ ದಿಲೀಪ್, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ : ಮೈಸೂರು ಹರೀಶ್ ಪಾಂಡವ್ –ಸ್ಯಾಕ್ಸೋಫೋನ್, ವಾದನ, 4.00–ಕಥಾಕಾಲಕ್ಷೇಪ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮಣ್ಣು ಹಾಗೂ ನೀರಿನ ಸಂರಕ್ಷಣೆ ಕುರಿತು ಉಪಕೃಷಿ ನಿರ್ದೇಶಕರಾದ ಡಾ.ಜಿ.ಹೆಚ್.ಯೋಗೀಶ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್ ಸಾಪ್ತಾಹಿಕ ಸಂಚಿಕೆ ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ : ಹಿಮಾಂಗ್ ಶ್ರೀ ಬಿಸ್‌ವಾಸ್, ಸಂತೂರ್ ವಾದನ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಎಸ್. ವಿಜಯರಾಘವನ್ ವೀಣಾ ವಾದನ 10.00 ಚೈತ್ರವನ ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ ಪ್ರಸ್ತುತಿ : ಡಾ. ಎ.ಎಸ್. ಶಂಕರನಾರಾಯಣ, 10.30–ಸವಿನೆನಪು ಹಳೆಯ ಕನ್ನಡ ಚಿತ್ರಗೀತೆಗಳು

ಕೆ.ಆರ್.ನಗರದಲ್ಲಿ ಇಂದು

■ **ಶ್ರೀರಾಮ ಸೇವಾ ಸಮಿತಿ ಕೆ.ಆರ್.ನಗರ:** ಹಾಡುಗಾರಿಕೆ: ಕು|| ವೈಭವಿ ಅವರಿಂದ, ಮೃದಂಗ: ವಿದ್ವಾನ್ ಚಂದನ್‌ಕುಮಾರ್, ಸ್ಥಳ: ಶ್ರೀರಾಮ ಸೇವಾ ಸಮಿತಿ, ಕೆ.ಆರ್.ನಗರ.




ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 8 ಮಂಗಳವಾರ 2025



ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 348 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಬಿಜೆಪಿ ಜನಾಕ್ರೋಶ ಯಾತ್ರೆ

ಮುಖ್ಯಮಂತ್ರಿ ತವರು ಜಿಲ್ಲೆ ಮೈಸೂರಿಂದ ಚಾಲನೆ



ಮೈಸೂರಲ್ಲಿ ಸೋಮವಾರ ನಡೆದ 'ಜನಾಕ್ರೋಶ ಯಾತ್ರೆ'ಯಲ್ಲಿ ಬಿಜೆಪಿ ನಾಯಕರು ಹಾಗೂ ಸಾವಿರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಮೈಸೂರು, ಏ.7(ಎಸ್‌ಬಿಡಿ)– ಅಗತ್ಯ ವಸ್ತುಗಳ ಬೆಲೆ ಏರಿಕೆ ಹಿನ್ನೆಲೆಯಲ್ಲಿ ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ಬಿಜೆಪಿ ರಾಜ್ಯಾದ್ಯಂತ ನಡೆಸುತ್ತಿರುವ 'ಜನಾಕ್ರೋಶ ಯಾತ್ರೆಗೆ ಸೋಮವಾರ ಮೈಸೂರಿನಲ್ಲಿ ಚಾಲನೆ ದೊರಕಿದೆ.

ಕಾಂಗ್ರೆಸ್ ಸರ್ಕಾರ ಬೆಲೆ ಏರಿಕೆ, ಮುಸ್ಲಿಂ ಓಲೈಕೆ, ದಲಿತರ ಹಣ ಲೂಟಿ ಮಾಡಿದೆ ಎಂದು ಆರೋಪಿಸಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ನೇತೃತ್ವದಲ್ಲಿ ನಾಲ್ಕು ಹಂತಗಳಲ್ಲಿ ರಾಜ್ಯಾದ್ಯಂತ 'ಜನಾಕ್ರೋಶ ಯಾತ್ರೆ' ಶೀರ್ಷಿಕೆಯಡಿ ಕೈಗೊಂಡಿರುವ ಹೋರಾಟವನ್ನು ಮುಖ್ಯಮಂತ್ರಿಗಳ ತವರು ಜಿಲ್ಲೆಯಿಂದಲೇ ಆರಂಭಿಸಲಾಗಿದೆ. ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಅವರು ಪಕ್ಷದ ನಾಯಕರೊಂದಿಗೆ ಚಾಮುಂಡಿ ಬೆಟ್ಟಕ್ಕೆ ತೆರಳಿ ದೇವಿಗೆ ಪೂಜೆ ಸಲ್ಲಿಸಿದ ನಂತರ ನಗರದ ಅಶೋಕ ರಸ್ತೆ ನೆಹರೂ ವೃತ್ತದಲ್ಲಿ 'ಜನಾಕ್ರೋಶ ಯಾತ್ರೆ'ಗೆ ವಿಧ್ಯುಕ್ತ ಚಾಲನೆ ನೀಡಿದರು. ಅಲ್ಲಿಂದ ಪುರಭವನದವರೆಗೆ ಪ್ರತಿಭಟನಾ ಮೆರವಣಿಗೆಯಲ್ಲಿ ತೆರಳಿ, ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಸಮಾವೇಶದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಲಾಯಿತು.

ಹಲವು ನಾಯಕರು ಭಾಗಿ: ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ್, ವಿಧಾನ ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ■6ನೇ ಪುಟಕ್ಕೆ

ಕಾಂಗ್ರೆಸ್ ಸರ್ಕಾರ ಕಿತ್ತುಹಾಕೋಣ; ನಮ್ಮ ಹೋರಾಟ ಬೆಂಬಲಿಸಿ

ಸಾರ್ವಜನಿಕರಲ್ಲಿ ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮನವಿ

ಮೈಸೂರು, ಏ.7(ಎಸ್‌ಬಿಡಿ)– ರಾಜ್ಯದ ಕಾಂಗ್ರೆಸ್ ಸರ್ಕಾರದ ವಿರುದ್ಧ ನಡೆಸುತ್ತಿರುವ ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಲು ಪಕ್ಷದ ಎಲ್ಲಾ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಬೆಂಬಲ ನೀಡಬೇಕೆಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ಮನವಿ ಮಾಡಿದರು.



ಪುರಭವನದ ಬಳಿ ಡಾ.ಬಿ.ಆರ್. ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ಬಳಿಕ ಅಶೋಕ ರಸ್ತೆಯಲ್ಲಿ ಜನಾಕ್ರೋಶ ಯಾತ್ರೆ ವಾಹನವೇರಿ ಮಾತನಾಡಿದ ಅವರು, ಭ್ರಷ್ಟ ಕಾಂಗ್ರೆಸ್ ಸರ್ಕಾರದ ಜನವಿರೋಧಿ ಆಡಳಿತದ ಬಗ್ಗೆ ಸಾರ್ವಜನಿಕರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಪಕ್ಷದ ರಾಜ್ಯಾಧ್ಯಕ್ಷರೊಂದಿಗೆ ಎಲ್ಲಾ ನಾಯಕರೂ ಸೇರಿ ಈ ಹೋರಾಟ ನಡೆಸುತ್ತಿದ್ದಾರೆ. ಎಲ್ಲರೂ ಬೆಂಬಲ ■6ನೇ ಪುಟಕ್ಕೆ

ವಿಜೃಂಭಣೆಯ ವೈರಮುಡಿ ಉತ್ಸವ



ಮೇಲುಕೋಟೆಯಲ್ಲಿ ಸೋಮವಾರ ರಾತ್ರಿ ಲಕ್ಷಾಂತರ ಭಕ್ತಾದಿಗಳ ಸಮ್ಮುಖದಲ್ಲಿ ಭಾರಿ ಭದ್ರತೆ ನಡುವೆ ಶ್ರೀ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ವಿಜೃಂಭಣೆಯಿಂದ ನಡೆಯಿತು. /ವರದಿ ಪುಟ–6

ಡಾ.ಎಂ.ಎ.ಸಲೀಂ ರಾಜ್ಯದ ಮುಂದಿನ ಪೊಲೀಸ್ ಮಹಾ ನಿರ್ದೇಶಕ?

ಬೆಂಗಳೂರು, ಏ.7(ಕೆಎಂಶಿ)– ಸಿಐಡಿಯ ಮಹಾ ನಿರ್ದೇಶಕ ಸಲೀಂ ಅವರನ್ನು ರಾಜ್ಯ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ತರಲು ಸರ್ಕಾರ ಮುಂದಾಗಿದೆ.



ಈ ತಿಂಗಳಾಂತ್ಯಕ್ಕೆ ನಿವೃತ್ತಿ ಆಗಲಿರುವ ಹಾಲಿ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್ ಅವರಿಂದ ತೆರವಾಗಲಿರುವ ಸ್ಥಾನಕ್ಕೆ ಹಿರಿಯ ಪೊಲೀಸ್ ಅಧಿಕಾರಿಗಳಲ್ಲಿ ಪೈಪೋಟಿ ನಡೆದಿದೆ.

ಇದರ ಮಧ್ಯೆ ಅಲೋಕ್ ಮೋಹನ್ ತಮಗೆ ಮೂರು ತಿಂಗಳು ಸೇವಾ ವಿಸ್ತರಣೆ ನೀಡುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದಾರೆ. ಡಿಜಿ–ಐಜಿಪಿ ಹುದ್ದೆ ವಿಷಯದಲ್ಲಿ ಸರ್ಕಾರ ಇದುವರೆಗೂ ಸೇವಾ ವಿಸ್ತರಣೆ ಮಾಡಿದ ನಿದರ್ಶನಗಳಿಲ್ಲ. ಉನ್ನತ ಹುದ್ದೆ ಪಡೆಯಲು ಐವರು ಹಿರಿಯ ಪೊಲೀಸ್ ಅಧಿಕಾರಿಗಳ ನಡುವೆ ಪೈಪೋಟಿ ನಡೆದಿದೆ. 92ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಡಿಜಿ ಪ್ರಶಾಂತ್ ಕುಮಾರ್ ಠಾಕೂರ್ ಹಿರಿಯರು, ಅವರು ಅಧಿಕಾರ ಪಡೆಯಲು ■6ನೇ ಪುಟಕ್ಕೆ

ರಾಜ್ಯದ ಜೊತೆಗೆ ಈಗ ಕೇಂದ್ರದ ಬೆಲೆ ಏರಿಕೆ ಸರದಿ

ಎಲ್‌ಪಿಜಿ ಸಿಲಿಂಡರ್ ಬೆಲೆ 50 ರೂ ಹೆಚ್ಚಳ

ಉಜ್ವಲ ಸಿಲಿಂಡರ್ 500 ರಿಂದ 550; ಹೊರತಾದ ಸಿಲಿಂಡರ್ 803ರಿಂದ 853

ನವದೆಹಲಿ: ರಾಜ್ಯ ಸರ್ಕಾರದ ಬೆಲೆ ಏರಿಕೆಯಿಂದ ಕಂಗೆಟ್ಟಿರುವ ಜನತೆಗೆ ಈಗ ಕೇಂದ್ರ ಸರ್ಕಾರವೂ ಬೆಲೆ ಏರಿಕೆಯ ಬರೆ ಎಳೆದಿದೆ. ಎಲ್ಲಾ ರೀತಿಯ ಎಲ್‌ಪಿಜಿ ಗ್ರಾಹಕರಿಗೆ ದರ ಏರಿಕೆ ಮಾಡಲಾಗಿದೆ. ಅಡುಗೆ ಅನಿಲ ಅಥವಾ ಎಲ್‌ಪಿಜಿ ಬೆಲೆಯನ್ನು ಸಿಲಿಂಡರ್‌ಗೆ 50 ರೂ. ಹೆಚ್ಚಿಸಲಾಗಿದೆ ಎಂದು ಕೇಂದ್ರ ತೈಲ ಸಚಿವ ಹರ್ದೀಪ್‌ಸಿಂಗ್ ಪುರಿ ತಿಳಿಸಿದ್ದಾರೆ.



ಬೆಲೆ ಏರಿಕೆ ಸಬ್ಸಿಡಿ ಮತ್ತು ಸಾಮಾನ್ಯ ವರ್ಗದ ಗ್ರಾಹಕರಿಗೆ ಅನ್ವಯವಾಗಲಿದೆ. ಉಜ್ವಲ ಅಡಿಯಲ್ಲಿ 14.2 ಕೆಜಿ ಎಲ್‌ಪಿಜಿ ಬೆಲೆ 500 ರಿಂದ 550ಕ್ಕೆ ಮತ್ತು ಉಜ್ವಲ ■6ನೇ ಪುಟಕ್ಕೆ

ಶ್ರೀರಂಗಪಟ್ಟಣ ಬಳಿ ಒಂದೇ ಕುಟುಂಬದ ಮೂವರು ಮಕ್ಕಳು ಜಲಸಮಾಧಿ



ಕೆಆರ್‌ಎಸ್, ಏ. 7– ವಿಶ್ವೇಶ್ವರಯ್ಯ ನಾಲೆಯಲ್ಲಿ ಆಟವಾಡುತ್ತಿದ್ದ ವೇಳೆ ಒಂದೇ ಕುಟುಂಬದ ಮೂವರು ಮಕ್ಕಳು ಜಲಸಮಾಧಿಯಾದ ಘಟನೆ ಶ್ರೀರಂಗಪಟ್ಟಣ ತಾಲೂಕು ನಾರ್ತ್ ಬ್ಯಾಂಕ್ ಬಳಿ ಸೋಮವಾರ ಸಂಜೆ ಸಂಭವಿಸಿದೆ. ಮೈಸೂರಿನ ಗೌಸಿಯಾ ನಗರದ ನಿವಾಸಿಗಳಾದ ಸೋನು(17), ಸಿಮ್ರಾನ್(16), ಸಿದ್ದಿಕ್(9) ನಾಲೆಯಲ್ಲಿ ಮುಳುಗಿ ಸಾವನ್ನಪ್ಪಿದವರಾಗಿದ್ದು, ಇವರೆಲ್ಲರೂ ತಮ್ಮ ಕುಟುಂಬಸ್ಥರೊಂದಿಗೆ ಚಿಕ್ಕಾರಹಳ್ಳಿ ಗ್ರಾಮದ ಸಂಬಂಧಿಕರ ಮನೆಗೆ ಬಂದಿದ್ದು ಎಂದು ಹೇಳಲಾಗಿದೆ ಬಿಸಿಲಿನ ತಾಪದಿಂದ ಇಂದು ಸಂಜೆ ಆಟವಾಡಲು ನಾಲೆಗೆ ಇಳಿದ ಮೂವರೂ ಮುಳುಗಿ ಸಾವನ್ನಪ್ಪಿದ್ದಾರೆ.

ಅಗ್ನಿಶಾಮಕ ಸಿಬ್ಬಂದಿ ಹಾಗೂ ಪೊಲೀಸರು ಸ್ಥಳೀಯರ ಸಹಕಾರದೊಂದಿಗೆ ಮಕ್ಕಳ ದೇಹಗಳನ್ನು ನಾಲೆಯಿಂದ ಹೊರ ತೆಗೆದಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇಂದು ದ್ವಿತೀಯ ಪಿಯು ಫಲಿತಾಂಶ

karresults.nic.in, kseab.karnataka.gov.in

ಬೆಂಗಳೂರು, ಏ.7– ಮಾರ್ಚ್ 1 ರಿಂದ ಮಾರ್ಚ್ 20 ರವರೆಗೆ ನಡೆದಿದ್ದ ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ನಾಳೆ (ಮಂಗಳವಾರ) ಪ್ರಕಟವಾಗಲಿದೆ. ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮಂಗಳವಾರ ಮಧ್ಯಾಹ್ನ 12.30ಕ್ಕೆ ಸುದ್ದಿಗೋಷ್ಠಿ ನಡೆಸಿ ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟಿಸಲಿದ್ದಾರೆ. ಬಳಿಕ ಅಂದೇ ಮಧ್ಯಾಹ್ನ 1.30ಕ್ಕೆ ವೆಬ್‌ಸೈಟ್‌ನಲ್ಲಿ ಫಲಿತಾಂಶ ಪ್ರಕಟವಾಗಲಿದ್ದು, ವಿದ್ಯಾರ್ಥಿಗಳು ಇದ್ದಲ್ಲೇ ಆನ್‌ಲೈನ್‌ನಲ್ಲಿ ಫಲಿತಾಂಶ ವೀಕ್ಷಣೆ ಮಾಡಬಹುದಾಗಿದೆ. ಜತೆಗೆ, ಅಂಕಪಟ್ಟಿ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. **karresults. nic.in, kseab.karnataka.gov.in** ಈ ಎರಡು ವೆಬ್‌ಸೈಟ್‌ಗಳಲ್ಲಿ ಫಲಿತಾಂಶ ಲಭ್ಯವಿರಲಿದೆ.

ಪೌರಕಾರ್ಮಿಕರ ಸೇವೆ ಕಾಯಂ

- ಮೇ 1ರಿಂದ ನೀವೆಲ್ಲಾ ಸರ್ಕಾರಿ ನೌಕರರು; ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ
- ಗುತ್ತಿಗೆ ವಾಹನ ಚಾಲಕರ ಹುದ್ದೆಗಳೂ ಕಾಯಂ
- ಪೌರಕಾರ್ಮಿಕರ ಮಹಾಸಂಘದ 25ನೇ ವಾರ್ಷಿಕೋತ್ಸವದಲ್ಲಿ ಮಾಜಿ ಮೇಯರ್ ನಾರಾಯಣ್ ಕೊಂಡಾಡಿದ ಮುಖ್ಯಮಂತ್ರಿಗಳು



ಬೆಂಗಳೂರಿನಲ್ಲಿ ಪೌರಕಾರ್ಮಿಕರ ಮಹಾಸಂಘದ 25ನೇ ವಾರ್ಷಿಕೋತ್ಸವವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಉದ್ಘಾಟಿಸಿದರು.

ಬೆಂಗಳೂರು, ಏ.7(ಕೆಎಂಶಿ)– ಪೌರಕಾರ್ಮಿಕರು ಹಾಗೂ ಸರ್ಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವಾಹನ ಚಾಲಕರ ಹುದ್ದೆ ಕಾಯಂ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಘೋಷಣೆ ಮಾಡಿದ್ದಾರೆ.

ಕಾರ್ಮಿಕರ ದಿನಾಚರಣೆಯಾದ ಮೇ 1ರಿಂದಲೇ ಇವರುಗಳು ಸರ್ಕಾರಿ ನೌಕರರಾಗಿ ನೇಮಕಗೊಳ್ಳಲಿದ್ದಾರೆ. ನೇಮಕಗೊಂಡ ಇವರಿಗೆ ಇತರೆ ನೌಕರರಂತೆ ಎಲ್ಲಾ ಸವಲತ್ತುಗಳನ್ನು ಕಲ್ಪಿಸುವುದಾಗಿ ಮುಖ್ಯಮಂತ್ರಿ ಘೋಷಣೆ ಮಾಡಿದರು.

ಅರಮನೆ ಮೈದಾನದಲ್ಲಿ ನಡೆದ ಪೌರಕಾರ್ಮಿಕರ ಮಹಾಸಂಘದ 25ನೇ ವಾರ್ಷಿಕೋತ್ಸವ ಮತ್ತು ಈ ಸಮುದಾಯದ ಅರಿವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ಮುಖ್ಯಕಾರ್ಯದರ್ಶಿಯಾಗಲಿ, ಪೌರಕಾರ್ಮಿಕರಾಗಲಿ ಯಾವುದೇ ವ್ಯತ್ಯಾಸವಿಲ್ಲ.

ಎಲ್ಲಾ ಸೇವೆಗಳು ಪವಿತ್ರವೇ, ನಿಮ್ಮನ್ನು ಅವಮಾನಕಾರಿಯಾಗಿ ನಡೆಸಿಕೊಳ್ಳುವುದು ಸರಿಯಲ್ಲ. ನಿಮಗೂ ವೃತ್ತಿಗೌರವ, ಘನತೆ ಸಿಗಬೇಕು, ಇದಕ್ಕಾಗಿ ನಿಮ್ಮ ಸೇವೆ ಕಾಯಂ ಮಾಡುವುದಾಗಿ ತಿಳಿಸಿದರು.

ಇನ್ನು ಚಾಲಕರ ಸೇವೆಯನ್ನು ಗುತ್ತಿಗೆಯಿಂದ ತೆಗೆದು ಕಾಯಂ ಮಾಡುವುದಾಗಿ ಹೇಳಿದ ಅವರು, ಪೌರಕಾರ್ಮಿಕರ ಮಕ್ಕಳು ವಿದ್ಯಾವಂತರಾಗಬೇಕು. ಅವರು ಶಿಕ್ಷಣ ಪಡೆದರೆ ಮಾತ್ರ ಸ್ವಾಭಿಮಾನಿಗಳಾಗಲು ಸಾಧ್ಯ.

ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಿ, ಪ್ರತಿಯೊಬ್ಬರೂ ಪ್ರತಿಭಾವಂತರೇ, ಅವರಿಗೆ ಅವಕಾಶ ಸಿಗುವುದಷ್ಟೇ ಮುಖ್ಯ. ಸಮಾಜಮುಖಿಯಡಿ ಅವಕಾಶಗಳು ದೊರೆತರೆ ಅವರ ಪ್ರತಿಭೆ ಹೊರಬರುತ್ತದೆ. ಇದನ್ನು ಗಮನದಲ್ಲಿಟ್ಟುಕೊಂಡು ಉತ್ತಮ ಶಿಕ್ಷಣ ಕೊಡಿಸಿ ಎಂದರು. ಪೌರಕಾರ್ಮಿಕ ಸಮುದಾಯಕ್ಕೆ ನಗದು ರಹಿತ ಆರೋಗ್ಯ ಕಾರ್ಡ್ ನೀಡಲಾಗುವುದು, ಕಾರ್ಮಿಕರ ಸಿಂಧುತ್ವದ ಸಮಸ್ಯೆ ಬಗೆಹರಿಸಲಾಗುವುದು ಎಂದು ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ಪೌರಕಾರ್ಮಿಕರ ಸಂಘಟನೆ ಮತ್ತು ಹೋರಾಟದಲ್ಲಿ ನಾರಾಯಣ್ ಪಾತ್ರ ದೊಡ್ಡದಿದೆ. ಈ ಸಮುದಾಯದಿಂದ ಮೇಯರ್ ಆದವರಲ್ಲಿ ಇವರು ಮೊದಲಿಗರು ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ನಾರಾಯಣ್ ಅವರು ಸರ್ಕಾರದ ಮುಂದೆ ಇಟ್ಟ ಪೌರಕಾರ್ಮಿಕರ ಸಮಸ್ಯೆಗಳಲ್ಲಿ ಹಲವನ್ನು ನಮ್ಮ ಸರ್ಕಾರ ಈಡೇರಿಸಿದೆ. ಪೌರಕಾರ್ಮಿಕರ ಗುತ್ತಿಗೆ ಪದ್ಧತಿ ರದ್ದುಪಡಿಸಿ ಪಾಲಿಕೆಗಳಿಂದಲೇ ಸಂಬಳ ಪಾವತಿಸುವ ವ್ಯವಸ್ಥೆ ಜಾರಿಗೆ ತಂದಿದ್ದೇ ನಾವು. ಮೈಸೂರಿನಲ್ಲಿ 524 ಮನೆಗಳನ್ನು ಕೊಡಿಸುವಲ್ಲಿ, ಪೌರಕಾರ್ಮಿಕರಿಗೆ ಗೃಹಭಾಗ್ಯ ಕಲ್ಪಿಸಿ ಒಂದು ಮನೆಗೆ 6.5 ಲಕ್ಷ ರೂ. ಕೊಡುತ್ತಿರುವುದು ನಮ್ಮ ಸರ್ಕಾರ ಮಾತ್ರ. ಪೌರಕಾರ್ಮಿಕರ ಸಂಬಳವನ್ನು 7 ಸಾವಿರದಿಂದ 17 ಸಾವಿರಕ್ಕೆ ಏರಿಸಿದ್ದು ಇದೇ ಸಿದ್ದರಾಮಯ್ಯ ಎಂದರು.

ನೀವೆಲ್ಲಾ ಈಗ ಕಷ್ಟಪಟ್ಟು ಶುಚಿತ್ವದ ಕೆಲಸ ಮಾಡುತ್ತಿದ್ದೀರಿ. ನಿಮ್ಮ ಮಕ್ಕಳೂ ಇದೇ ಕೆಲಸ ಮಾಡಬಾರದು, ನಿಮ್ಮ ಮಕ್ಕಳು ಇತರೆ ಕೆಲಸಗಳಿಗೆ ಹೋಗಬೇಕು. ಆ ರೀತಿ ನೀವು ಬೆಳೆಯಬೇಕು. ಸಮಾಜದ ಮುಖ್ಯವಾಹಿನಿಗೆ ಬರಬೇಕು.

ಪ್ರತೀ ವರ್ಷ ಒಂದು ಸಾವಿರ ಪೌರಕಾರ್ಮಿಕರನ್ನು ವಿದೇಶ ಪ್ರವಾಸಕ್ಕೆ ಕಳುಹಿಸಲಾಗುತ್ತಿದೆ. ಪೌರಕಾರ್ಮಿಕ ಸಮುದಾಯವೂ ವಿಶ್ವ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದರು.

ನಕ್ಕರೆ ಅದೇ ಸ್ವರ್ಗ

ಗಂಡ : ದೇವರು ನಿನಗೆ ಎರಡು ಕಣ್ಣು ಕೊಟ್ಟಿದ್ರೂ ಅಕ್ಕಿಯಲ್ಲಿ ಇರೋ ಕಲ್ಲು ಆರಿಸಲಿಕ್ಕೆ ಆಗೋಲ್ವಾ?

ಹೆಂಡತಿ : ದೇವರು ಒಂದಲ್ಲ, ಎರಡಲ್ಲಾ, ಮೂವತ್ತೆರಡು ಹಲ್ಲುಗಳು ಕೊಟ್ಟಿದ್ರೂ ಅಗಿಯೋಕೆ ಆಗಿಲ್ವಾ?

ಮೈಸೂರು ಮಿತ್ರ

ಮಂಗಳವಾರ, 8 ಏಪ್ರಿಲ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಸಾಲ ಪಡೆಯುವ ಪ್ರಕ್ರಿಯೆ ಎಲ್ಲಿ ಪ್ರಾರಂಭವಾಗುವುದೋ ಅಲ್ಲಿ ಸ್ನೇಹ ಸಂಬಂಧಕ್ಕೆ ಪೂರ್ಣ ವಿರಾಮ ಹಾಕಿದಂತೆಯೇ ಸರಿ.

– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಾಲಿದ್ದಾಗ ಹೋಳಿಗೆ ಮಾಡು, ಬಿಸಿಲು ಬಿದ್ದಾಗ ಹಪ್ಪಳ ಮಾಡು

ನಿಮ್ಮ ಪತ್ರಗಳು

ವಿವಿಗಳ ಆರ್ಥಿಕ ದುಸ್ಥಿತಿ

ಮಾನ್ಯರೆ,

ತನ್ನ ನಿವೃತ್ತ ನೌಕರರಿಗೆ ಪಿಂಚಣಿ ನೀಡಲು ಕೂಡ ಮುಂದಿನ ದಿನಗಳಲ್ಲಿ ಕಷ್ಟವಾಗಬಹುದು ಎಂಬ ಆತಂಕವನ್ನು ಮೈಸೂರು ವಿಶ್ವವಿದ್ಯಾಲಯದ ಕುಲಪತಿಯವರು ಇತ್ತೀಚೆಗೆ ವ್ಯಕ್ತಪಡಿಸಿರುವುದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ.

ಮೈಸೂರು ವಿವಿ ಸೇರಿದಂತೆ ಅನೇಕ ವಿಶ್ವವಿದ್ಯಾನಿಲಯಗಳ ಆರ್ಥಿಕ ಸ್ಥಿತಿ ಶೋಚನೀಯವಾಗಿದೆ. ರಾಜ್ಯದಲ್ಲಿ ಜಿಲ್ಲೆಗೊಂದರಂತೆ ವಿಶ್ವ ವಿದ್ಯಾನಿಲಯಗಳು ಸ್ಥಾಪಿತಗೊಂಡ ನಂತರ ಪರಿಸ್ಥಿತಿ ಮತ್ತಷ್ಟು ಬಿಗಡಾಯಿಸಿದೆ. ಇದೊಂದು ಅವೈಜ್ಞಾನಿಕ ನಡೆಯಾಗಿದ್ದು, ಆರ್ಥಿಕ ಸಮಸ್ಯೆಗಳಷ್ಟೇ ಅಲ್ಲದೆ ಇನ್ನೂ ಹತ್ತು ಹಲವಾರು ಗಂಭೀರ ಸಮಸ್ಯೆಗಳನ್ನು ಸೃಷ್ಟಿಸಿದೆ. ಅನೇಕ ವಿಶ್ವವಿದ್ಯಾಲಯಗಳಿಗೆ, ತಮ್ಮ ಆರ್ಥಿಕ ಸಂಪನ್ಮೂಲಗಳನ್ನು ತಾವೇ ರೂಢಿಸಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಕೆಲವು ವಿಶ್ವ ವಿದ್ಯಾನಿಲಯಗಳಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಅನುದಾನ ದೊರೆಯುತ್ತಿದ್ದರೂ ಅವು ಸಾಕಾಗದೆ, ವಿವಿಗಳು ಹೆಣಗಾಡುತ್ತಿವೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಪ್ರಾರಂಭಿಸಲಾಗಿದ್ದ 9 ವಿಶ್ವವಿದ್ಯಾನಿಲಯಗಳನ್ನು ಮುಚ್ಚಬೇಕೆಂಬ ಹಾಲಿ ರಾಜ್ಯ ಸರ್ಕಾರದ ಪ್ರಸ್ತಾವನೆಗೆ ಸಾಕಷ್ಟು ವಿರೋಧ ಕಂಡು ಬಂದ ಹಿನ್ನೆಲೆಯಲ್ಲಿ ಇವುಗಳ ಅಳಿವು ಮತ್ತು ಉಳಿವಿನ ಬಗ್ಗೆ ವರದಿ ನೀಡಲು ರಾಜ್ಯ ಸರ್ಕಾರ ಸಂಪುಟ ಉಪಸಮಿತಿ ರಚಿಸಿ, ತನ್ನ ಜವಾಬ್ದಾರಿಯಿಂದ ಸದ್ಯದ ಮಟ್ಟಿಗೆ ಪಾರಾಗಿದೆ. ಅದೇನೇ ಇರಲಿ, ಜ್ಞಾನ ಕಾಶಿಗಳಂತಿರುವ ವಿಶ್ವವಿದ್ಯಾನಿಲಯಗಳಿಗೆ ಇಂತಹ ದುಸ್ಥಿತಿ ಬಂದಿರುವುದು ಶೋಚನೀಯ. ವಿಶ್ವವಿದ್ಯಾನಿಲಯಗಳು ರಾಜ್ಯ ಸರ್ಕಾರದ ಅಡಿಯಲ್ಲಿ ಬರುವುದರಿಂದ, ರಾಜ್ಯ ಸರ್ಕಾರ ಇಂತಹ ವಿಶ್ವವಿದ್ಯಾನಿಲಯಗಳ ಪುನಶ್ಚೇತನಕ್ಕೆ ಶೀಘ್ರ ಗಮನಹರಿಸುವುದು ಒಳ್ಳೆಯದು.

–ಕೆ.ವಿ.ವಾಸು, ವಕೀಲರು –ನೋಟರಿ, ವಿವೇಕಾನಂದನಗರ, ಮೈಸೂರು.

ಇದು ಪಾಲಿಕೆಗೆ ಕಾಯಕ ಭಾರವಲ್ಲವೇ?

ಮಾನ್ಯರೆ,

ಪ್ರವೇಶ ಪರೀಕ್ಷೆಗಳು, ಪಿಯುಸಿ ಪರೀಕ್ಷೆಗಳು (NEET, CET, COMED-K, ಮುಂತಾದವು) ಬಂತೂ ಅಂದರೆ ನಗರದಲ್ಲಿ ಇರುವ ಪರೀಕ್ಷಾ ಕೇಂದ್ರಗಳ ಸಮೀಪದಲ್ಲಿ ನೂರಾರು ಪದವಿ ಪೂರ್ವ ಕಾಲೇಜುಗಳ, ಪಾಠ–ಹೇಳಿಕೊಡುವ (Allen/Akash/Base ಮುಂತಾದವು) ಬಳಗದವರು ವಿದ್ಯಾರ್ಥಿಗಳನ್ನು (ಅಭ್ಯರ್ಥಿಗಳನ್ನು) ತಮ್ಮ ತಮ್ಮ ಟ್ಯುಟೋರಿಯಲ್ ಕೇಂದ್ರಗಳತ್ತ ಆಕರ್ಷಿಸುವ ಸಲುವಾಗಿ ವರ್ಣಮಯ ಜಾಹೀರಾತು ಚೀಟಿಗಳು, ಬುಕ್ಲೆಟ್ಟುಗಳು, ಬ್ರೋಷರುಗಳನ್ನು ಪರೀಕ್ಷೆಗೆ ಬಂದಂತಹ ಯುವಜನರಿಗೆ 'ಕೇಜಿಗಟ್ಟಲೆ' ಕಾಗದಗಳ ರೂಪದ ಹೊರೆಯನ್ನು ವಿತರಿಸುತ್ತಾರೆ.

ಆ ಅಭ್ಯರ್ಥಿ/ಮಕ್ಕಳು ಏನು ಮಾಡುತ್ತವೆ ನೋಡಿ. ಆ ಮಾಹಿತಿ ಚೀಟಿಗಳನ್ನು ಬಿಡಿಸಿಯೂ ನೋಡರು. ಅಲ್ಲಿಯೆ ರಸ್ತೆಗೋ ಚರಂಡಿಗೋ ತೂದು ಎಸೆದುಬಿಡುವರು! ಅವುಗಳಲ್ಲಿ ಅವರಿಗೆ ಆಸಕ್ತಿ ಹುಟ್ಟುವುದೇ ಇಲ್ಲ. ಇದು ಮಹಾ–ದಂಡವಲ್ಲವೇ?

ಇದರಿಂದ ತೊಂದರೆಯಾಗುವುದು ಮಹಾನಗರಪಾಲಿಕೆಯ ಸಿಬ್ಬಂದಿಗೆ. ನೋಡನೋಡುತ್ತಲೇ ಕಸದ ಗುಪ್ಪೆಯಾಗುವ ಆ ಕಾಗದ–ತ್ಯಾಜ್ಯಗಳ ನಿರ್ವಹಣೆ ಜವಾಬ್ದಾರಿ ಮಹಾನಗರ ಪಾಲಿಕೆಯದು!

(ಒಂದು ಮುಖ್ಯ ಪ್ರವೇಶ ಪರೀಕ್ಷೆ, "NEET/ನೀಟ್" ಎಂಬುದು ಮುಂಬರುವ ಮೇ ತಿಂಗಳ 4ರಂದು ಜರುಗಲಿದೆ. ಆಗ ವೀಕ್ಷಿಸಬಹುದು ದಿಢೀರ್–ತ್ಯಾಜ್ಯ–ಉತ್ಪತ್ತಿ) ಪಾಲಿಕೆಯ ಆಯುಕ್ತರು ಈ ಕುರಿತು ಚಿಂತಿಸಬೇಕು. ಈ ಪರಿಯ ಚೀಟಿ/ಬುಕ್ಕುಗಳನ್ನು ಹಂಚುವುದನ್ನು 'ಆಜ್ಞೆಯ' ಮೂಲಕ ನಿಷೇಧಿಸಬಹುದೆ ಎಂದು ಆಲೋಚಿಸಬೇಕೆಂದು ಕೋರುತ್ತೇನೆ. (ಅವರ ಸಿಬ್ಬಂದಿಯ ಮೇಲೆ ಕಾಯಕದ ಹೊರೆ ತಗ್ಗೀತು!) ಕಾಗದ ವಿತರಣೆಯ ಬದಲು, ಸದ್ದು ಮಾಡದ 'ಪ್ರಮೋಷನ್–ವಾಹನಗಳನ್ನು,' ನಿಲ್ಲಿಸಿಕೊಂಡು, ಬರಿಯ ಬಣ್ಣಬಣ್ಣದ (ಡಿಜಿಟಲ್–ವಿಡಿಯೋ) ಫಲಕಗಳನ್ನು ಪ್ರದರ್ಶಿಸಲು ಅನುಮತಿ ನೀಡಬಹುದಷ್ಟೆ.

–ಡಿವಿಎಂ ಪ್ರಕಾಶ್, ಗೋಕುಲ ರಸ್ತೆ, ಮೈಸೂರು.

ಮಾನಸಿಕ, ದೈಹಿಕ ಹಿಂಸೆ ನೀಡಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದು

ಮಾನ್ಯರೆ,

ಹಕ್ಕಿಪಿಕ್ಕಿ ಜನಾಂಗದ, ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬನನ್ನು ಅರೆ ಬೆತ್ತಲೆ ಮಾಡಿ ಅಡಿಕೆ ಮರಕ್ಕೆ ಕಟ್ಟಿ ಕೆಂಪು ಇರುವೆ ಮತ್ತು ಕೆಂಪು ಗೊದ್ದಗಳಿಂದ, ಆತನ ಮೈಯನ್ನು ಕಚ್ಚಿಸಿ, ಚಿತ್ರಹಿಂಸೆಯನ್ನು ಕೊಟ್ಟಿರುವ ವರದಿ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಅಪ್ತಾಘನಹಳ್ಳಿಯಲ್ಲಿ ನಡೆದಿರುವುದಾಗಿ ಮಾಧ್ಯಮಗಳು ವರದಿ ಮಾಡಿವೆ.

ಆ ಹಳ್ಳಿಯ ಅಪ್ರಾಪ್ತ ವಯಸ್ಸಿನ ಬಾಲಕನೊಬ್ಬ ಊರಿನಲ್ಲಿ ಕಳ್ಳತನ ಮಾಡುತ್ತಿದ್ದ ಎಂದು ಆರೋಪಿಸಿ ಈ ಯುವಕನಿಗೆ ಅದೇ ಊರಿನ ಕೆಲವು ವಿಕೃತ ಮನಸ್ಸಿನ ಯುವಕರು ಈ ರೀತಿ ಚಿತ್ರ ಹಿಂಸೆ ನೀಡಿರುವುದು, ಅನಾಗರಿಕರ ಲಕ್ಷಣ, ಈತ ಕಳ್ಳತನ ಮಾಡುತ್ತಿದ್ದರೇ, ಪೊಲೀಸರಿಗೆ ದೂರು ನೀಡಬಹುದಿತ್ತು, ಆದರೆ ಮಾನಸಿಕ ಮತ್ತು ದೈಹಿಕವಾಗಿ ಹಿಂಸೆ ನೀಡಿರುವುದು ನಾಗರಿಕ ಸಮಾಜ ತಲೆ ತಗ್ಗಿಸುವಂತದ್ದು, ಇವತ್ತಿನ ಕಾಲಘಟ್ಟದಲ್ಲೂ, ಗ್ರಾಮೀಣ ಪ್ರದೇಶದಲ್ಲಿ ಇಂತಹ ಘಟನೆಗಳು ನಡೆಯುತ್ತಲೇ ಇವೆ, ಅಲ್ಲೊಂದು–ಇಲ್ಲೊಂದು ಇಂತಹ ಪ್ರಕರಣಗಳು ಮಾತ್ರ ಬೆಳಕಿಗೆ ಬರುತ್ತಿವೆ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ.

ರಾತ್ರಿ ವೇಳೆ ವಾಹನ ಸಂಚಾರ ರದ್ದಾಗಲಿ

ಮಾನ್ಯರೆ,

ಬಂಡಿಪುರ ಹುಲಿ ಸಂರಕ್ಷಿತ ಪ್ರದೇಶದ ಮೂಲಕ ರಾತ್ರಿಯ ವೇಳೆಯಲ್ಲಿ ವಾಹನ ಸಂಚಾರದ ವ್ಯವಸ್ಥೆಗೆ ಬೇಡಿಕೆಗೆ ಕುರಿತು, ಸಂಚಾರಕ್ಕೆ ಅವಕಾಶ ಕಲ್ಪಿಸಬಾರದು.

ಈ ಸುಂದರವಾದ ಅಭಯಾರಣ್ಯದಲ್ಲಿ ಅನೇಕ ಜಾತಿಯ ಪ್ರಾಣಿ ಪಕ್ಷಿಗಳು ನೆಲೆಸಿರುವ ಹಿನ್ನೆಲೆಯಲ್ಲಿ ರಾತ್ರಿಯ ವೇಳೆಯಲ್ಲಿ ರಸ್ತೆಯಲ್ಲಿ ಓಡಾಡುತ್ತಿರುತ್ತವೆ. ಇದನ್ನು ಗಮನಿಸಿ ಈಗಾಗಲೇ ವಾಹನ ಸಂಚಾರಕ್ಕೆ ಸಂಬಂಧಿಸಿದಂತೆ ಅನೇಕ ಕಾನೂನುಗಳನ್ನು ಜಾರಿಗೆ ತಂದಿದ್ದರು ಸಹ ಆಗಾಗಿ ಮದ್ಯಪಾನ, ಧೂಮಪಾನ ಮಾಡಿ ವಾಹನ ಚಾಲನೆ ಮಾಡುವವರು ಹೆಚ್ಚಾಗಿದ್ದಾರೆ. ಹಾಗೂ ಈ ರಸ್ತೆಯಲ್ಲಿ ಹಗಲಿನಲ್ಲಿ ಪ್ರಾಣಿಗಳಿಗೆ ಅಪಘಾತಗಳಾಗಿದ್ದು, ಇಂತಹ ಸಂದರ್ಭದಲ್ಲಿ ರಾತ್ರಿಯ ವೇಳೆ ಸಂಚರಿಸುವಾಗ ಪ್ರಾಣಿ ಪಕ್ಷಿಗಳಿಗೆ ಇನ್ನಷ್ಟು ಸಂಕಷ್ಟ ಎದುರಾಗಬಹುದು. ನಾಡಿನಲ್ಲಿ ಮನುಷ್ಯರಂತೆಯೇ ಪ್ರಾಣಿ ಪಕ್ಷಿಗಳು ಕೂಡ ನಮ್ಮಂತೆಯೇ, ಆದ್ದರಿಂದ ರಾಜಕೀಯ ಲಾಭಕ್ಕಾಗಿ ಅಥವಾ ಯಾವುದಾದರೂ ಒತ್ತಾಯಕ್ಕೆ ಮಣಿದು ಈ ರಸ್ತೆಯಲ್ಲಿ ರಾತ್ರಿಯ ವೇಳೆ ಸಂಚಾರ ಮಾಡುವುದು ಸರಿಯಾದ ಕ್ರಮವಲ್ಲ.

–ನಾಗೇಶ್, ಮಾನಸಗಂಗೋತ್ರಿ, ಮೈಸೂರು



ಡಾ. ಗುಬ್ಬಿಗೂಡು ರಮೇಶ್


ದೀಪ ಸಾಲು

ಒಲವೇ ಜೀವನ ಸಾಕ್ಷಾತ್ಕಾರ...

ಯಾವಾಗಲೂ ಸಂತಸದ ಸಂಗತಿಗಳನ್ನೇ ಬರೆಯಬೇಕೆಂದು ಮನಸ್ಸು ಬಯಸುತ್ತದೆ ನಿಜ; ಆದರೆ ಈ ಜೀವನ ಬಿಡಬೇಕಲ್ಲ. ಸಂತಸದ ಒಳಗೆಯೇ ಕಾಲು ಮಡಚಿ ಮಲಗಿರುವ ದುಮ್ಮಾನದ ಸಂಗತಿಗಳನ್ನು ಬಿಡಿಸುವವರು ಯಾರು? ಇವತ್ತಿನ ನನ್ನ ಆದ್ಯತೆ ಮದುವೆ ಎಂಬ ಮೂರಕ್ಷರದ ವಿಷಯ. ಮದುವೆ ಮಾಡಿ ನೋಡು, ಮನೆ ಕಟ್ಟಿನೋಡು ಎಂಬ ಗಾದೆ ಮಾತು ಹುಟ್ಟಿ ಕೊಳ್ಳಲು ಕಾರಣ ಇದೊಂಥರಾ ಜವಾಬ್ದಾರಿಯ ಕೆಲಸ. ಮದುವೆ ಮಾಡುವುದೂ ಜವಾಬ್ದಾರಿಯೇ. ಜೊತೆಗೆ ಹೆಗಲು ಕೊಡಲಿಕ್ಕೆ ಸಿದ್ಧವಾಗಬೇಕಾದ ಜೋಡಿಗೂ ಅದು ಜವಾಬ್ದಾರಿಯೇ. ಕೆಲವರು ಕಲ್ಯಾಣ ಮಂಟಪದಲ್ಲಿ, ಇನ್ನು ಮತ್ತೆ ಕೆಲವರು ದೇವಸ್ಥಾನದಲ್ಲಿ, ಕೆಲವರು ಪೊಲೀಸ್ ಸ್ಟೇಷನ್ನಿನಲ್ಲಿ ಹೀಗೆ ಮದುವೆ ಎಂಬ ಮೂರಕ್ಷರಕ್ಕೆ ಜೊತೆಯಾಗುತ್ತಾರೆ. ಹೀಗೆ ಮದುವೆ ಎನ್ನುವ ಮೂರಕ್ಷರದ ಪದ ಅವರು ಸಂಧಿಸಿದ ಜಾಗ ಯಾವುದೂ ಅಂತ ನೋಡದೇ ಹೊಸ ದಾಂಪತ್ಯಕ್ಕೆ ಕಾಲಿಡಲು ಠಸ್ಸೆ ಒತ್ತಿ ಕಳಿಸುತ್ತದೆ. ಅಲ್ಲಿಗೆ ಮದುವೆಯ ಕತೆ ಮುಗೀತು. ಸಾಲ ಸೋಲ ಮಾಡಿ ಮದುವೆ ಮಾಡಿದವರೂ ದಾಂಪತ್ಯಕ್ಕೆ ಅಡಿಯಿಡುತ್ತಾರೆ. ಪ್ರೀತಿಸಿ ಓಡಿಹೋಗಿ ಮದುವೆಯಾದವರೂ ದಾಂಪತ್ಯಕ್ಕೆ ಅಡಿಯಿಡುತ್ತಾರೆ. ಮದುವೆಗೂ ಮುನ್ನ ಅವರು ಜೊತೆಯಾಗುವುದಕ್ಕೆ ಹತ್ತಾರು ಲೆಕ್ಕಾಚಾರಗಳು ಜೊತೆಯಾಗಿ ಅವರನ್ನು ಒಂದು ಮಾಡಿರುತ್ತದೆ. ಈ ಮದುವೆ ಎನ್ನುವ ಮೂರಕ್ಷರ.

ಒಲವೇ ಜೀವನ ಸಾಕ್ಷಾತ್ಕಾರ ಎನ್ನುತ್ತಿದ್ದ ಸಿನಿಮಾ ಕಾಲ ಈಗ ಮುಗಿದಿದೆ. ನೀವು ಗಮನಿಸಿ ಅರೇಂಜ್ ಮ್ಯಾರೇಜುಗಳಲ್ಲಿ ಎಲ್ಲವೂ ಮಾತುಕತೆಗಳ ಮೂಲಕವೇ ಇತ್ಯರ್ಥವಾದರೂ ಹುಡುಗ ಹುಡುಗಿಯ ಒಪ್ಪಿಕೊಳ್ಳುವಿಕೆಯಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳು ಇರುತ್ತವೆ. ಅಂದರೆ ವಾಸ್ತವವಾಗಿ ಇದು ಚೆಂದಕ್ಕೆ ಸಂಬಂಧಿಸಿದ ವಿಷಯ. ಹುಡುಗ ನೋಡಲು ಸ್ವಲ್ಪ ಅಷ್ಟಕ್ಕಷ್ಟೇ ಎನಿಸಿದರೂ ಹುಡುಗಿ ತುಂಬ ಸುಂದರವಾಗಿರುತ್ತಾಳೆ. ಕೆಲವೊಮ್ಮೆ ಹುಡುಗಿ ಸುಮಾರಾಗಿದ್ದು ಹುಡುಗ ಅಪರೂಪದ ಚೆಲುವನಾಗಿರುತ್ತಾನೆ. ಆದರೂ ಮದುವೆಗಳಾಗುತ್ತವೆ. ಕಾರಣ ತುಂಬಾ ಸಿಂಪಲ್ಲು, ಹುಡುಗನ ಒಳ್ಳೆ ಕೆಲಸ, ಅಥವಾ ಹುಡುಗಿಯ ಮನೆಯವರ ಆಸ್ತಿಪಾಸ್ತಿ ಯಾವುದೋ ಒಂದು ಕಣ್ಣಿಗೆ ಬಿದ್ದು ಸ್ವಲ್ಪ ಅಪರ ತಪರ ಇರೋ ಜೋಡಿಗಳೂ ಕೂಡ ಜೀವನ ಎನ್ನುವ ಈ ಮದುವೆ ಶಾಸ್ತ್ರದಲ್ಲಿ ಒಂದಾಗಿ ಬಿಡುತ್ತವೆ. ಅದೇ ಪ್ರೀತಿ ಮಾಡಿ ದಾಂಪತ್ಯಕ್ಕೆ ಕಾಲಿಡುವ ಜೋಡಿಗಳಲ್ಲಿ ಬಹು ಪಾಲು ಹುಡುಗ ಹುಡುಗಿಯರಿಗೆ, ಈ ಒಲವೇ ಜೀವನ ಲೆಕ್ಕಾಚಾರ ಗಳು ವರ್ಕೌಟ್ ಆಗಿರುವುದಿಲ್ಲ. ಬಹುಪಾಲು ಹುಡುಗರು ಆ ಹುಡುಗಿಯ ಚೆಂದಕ್ಕೋ, ಅವಳ ಮಾತಿಗೋ, ಅವಳ ಟ್ಯಾಲೆಂಟಿಗೋ ಮರುಳಾಗಿ ಪ್ರೀತಿಸಿಬಿಟ್ಟಿರುತ್ತಾರೆ. ಹುಡುಗ ಚೆನ್ನಾಗಿ ಬೈಕ್ ಓಡಿಸು ತ್ತಾನೆಂತಲೂ, ಸ್ವಲ್ಪ ಜಿಮ್ ಬಾಡಿಯಲ್ಲಿ ತುಂಬಾ ಮ್ಯಾನುಯಲ್ ಆಗಿ ಕಾಣಿಸುತ್ತಾನೆಂತಲೋ ಅಥವಾ ತನ್ನ ಬಗ್ಗೆ ವಿಪರೀತ ತಲೆಕೆಡಿಸಿಕೊಂಡಿದ್ದಾನೆ ಎಂತಲೋ ಯಾವುದೋ ಒಂದು ಕಾರಣಕ್ಕೆ ಪ್ರೀತಿಸಿಬಿಡುತ್ತಾರೆ. ಆ ಪ್ರೀತಿ ಮದುವೆಯಲ್ಲೇ ಕೊನೆಯಾಗುತ್ತದೆಂಬ ಗ್ಯಾರಂಟಿ ಇಲ್ಲ. ಕಾರಣ ಪ್ರೀತಿಸುವ ಆ ಹುಡುಗ–ಹುಡುಗಿಯರಿಗೆ ಹಣಕಾಸು, ಜಾತಿ ಭ್ರಾಂತಿ, ಯಾವ ಲೆಕ್ಕಾಚಾರಗಳೂ ಇರುವುದಿಲ್ಲ. ಪರಸ್ಪರ ಅವರು ಜೊತೆಯಾಗಬೇಕು. ಮದುವೆ ಎಂಬ ಮೂರಕ್ಷರದ ಸೀಲು ಅವರ ದಾಂಪತ್ಯ ಜೀವನದ ಮೊದಲ ಹಾಳೆಯ ಮೇಲೆ ಒತ್ತಿಕೊಳ್ಳಬೇಕು. ಹಾಗೆ ಒಪ್ಪಿಸಿ ಮದುವೆಯಾದವರು ಒಪ್ಪಿಸದೇ ಮದುವೆಯಾದವರು ಸಂತಸ ಸಾಂಗತ್ಯದಲ್ಲೇ ಜೀವನ ಕಟ್ಟಿಕೊಳ್ಳಲು ಹೆಣಗುತ್ತಾರೆ. ಆದರೆ ಕೆಲವೊಮ್ಮೆ ಅವರ ಸಂತಸದ ಸಂಗತಿಗಳು ದುಮ್ಮಾನದ ದುರಂತಗಳಾಗಿ ಮಾರ್ಪಾಟಾಗುತ್ತವೆ. ಮಗಳು ಮನೆಬಿಟ್ಟು ಓಡಿಹೋಗಿ ಮದುವೆಯಾದಳು ಎನ್ನುವ ಕಾರಣಕ್ಕೆ ಒಮ್ಮೆ ಚಿಕ್ಕಬಳ್ಳಾ ಪುರ ಜಿಲ್ಲೆಯಲ್ಲಿ ಅಪ್ಪ ಅಮ್ಮ ಇಬ್ಬರೂ ಮರಕ್ಕೆ ನೇಣು ಹಾಕಿಕೊಂಡು ಸತ್ತ ಹೃದಯ ವಿದ್ರಾವಕ ಘಟನೆ ವರದಿಯಾಗಿದ್ದು ಅದನ್ನು ನೋಡಿ ಎಲ್ಲರ ಮನಕಲಕಿದ ಘಟನೆ ನಮಗೆ ಗೊತ್ತಿದೆ. ಯಾರು ಎಷ್ಟೇ ಹೇಳಿದರೂ ಮಧ್ಯಮ ವರ್ಗದವರ ಮನಸ್ಥಿತಿ ಮಾತ್ರ ತುಂಬಾ ಸಂಕೀರ್ಣ ವಾಗಿ ಯೋಚಿಸುತ್ತಿರುತ್ತದೆ. ಮದುವೆ ಎಂಬ ಈ ಮೂರಕ್ಷರದ ಪದ ಅರಮನೆಯಿಂದ ನೆರೆಮನೆಯವರೆಗೆ ಇಂಥಾ ಏನೇನೋ ದುರಂತ ಧಾವಂತಗಳನ್ನು ಸೃಷ್ಟಿಸಿ ಹೋಗಿದೆ. ಜಗತ್ತಿನ ವಿವಾಹ ಪೂರ್ವ, ವಿವಾಹೋತ್ತರ ಸಂಗತಿಗಳ ಬಗ್ಗೆ ಬರೆಯುತ್ತಾ ಹೋದರೆ ದೊಡ್ಡ ಚರಿತ್ರೆಯೇ ಆದೀತು. ಆದರೆ, ಜೀವ ಜಗತ್ತು ಇಂದಿಗೂ ಸದಾ ಅರ್ಥಪೂರ್ಣವಾಗಿ ಸಾರ್ಥಕಗೊಳ್ಳುತ್ತಿರುವುದು ಮದುವೆ ಮನೆಯಿಂದ ಹೊರಟ ವಾಲಗದ ಸದ್ದಿನಂತೆ ಸುಖದಾಂಪತ್ಯದಲ್ಲಿ.

ಬಹಳ ಹಿಂದೆ ಟಿ.ವಿ ಚಾನೆಲ್‌ವೊಂದರಲ್ಲಿ ಆದರ್ಶ ದಂಪತಿಗಳು ಅಂತ ಕಾರ್ಯಕ್ರಮವೊಂದು ಪ್ರಸಾರವಾಗುತ್ತಿತ್ತು. ಅದೊಂದು ಟೈಂಪಾಸ್ ಎಂಟರ್‌ಟೈನ್‌ಮೆಂಟಿನಂತೆ ಕಾಣುತ್ತಿತ್ತೇ ವಿನಃ ಆದರ್ಶ ಯಾವುದು? ದಾಂಪತ್ಯ ಯಾವುದು? ಗೊತ್ತೇ ಆಗುತ್ತಿರಲಿಲ್ಲ. ಜನ ಮನದಲ್ಲಿ ಆದರ್ಶದಾಂಪತ್ಯ ಅನ್ನೋ ಪದ ಈಗಲೂ ಇದೆ. ನಿತ್ಯ ಬಳಸುತ್ತಿರುತ್ತೇವೆ. ಅದು ದೊಡ್ಡ ವೈವಾಹಿಕ ನೀತಿ ಸಂಹಿತೆಯಂತೆ ಕಾಣುವುದರಿಂದ ಅದರ ಬಗ್ಗೆ ಚರ್ಚೆ ಅನಗತ್ಯ. ನಮಗಿಂದು ನಿಜಕ್ಕೂ ಬೇಕಿರುವುದು ಆದರ್ಶಕ್ಕಿಂತ ಅನ್ಯೋನ್ಯತೆ. ಅನ್ಯೋನ್ಯತೆ ಇರುವ ದಾಂಪತ್ಯಕ್ಕೆ ಆಯಸ್ಸು ಜಾಸ್ತಿ. ಪರಸ್ಪರ ಅರ್ಥವಂತಿಕೆಗಳೇ ಅವರ ದಾಂಪತ್ಯವನ್ನು ಕೈಹಿಡಿದು ನಡೆಸುತ್ತಿರುತ್ತವೆ. ಅದಕ್ಕೆ ವಯಸ್ಸಿನ ಹಂಗಿಲ್ಲ. ಆಗ ತಾನೆ ಮದುವೆಯಾದ ಗಗನಸಖಿ ಕೆಲಸ ಮಾಡುವ ಹುಡುಗಿ ಕೂಡ ವಿಮಾನದಲ್ಲಿ ವಿಶ್ವವನ್ನೇ ಸುತ್ತಿ ಬಂದರೂ, ಮನೆಗೆ ಬಂದ ಕೂಡಲೇ ತನ್ನ ದಾಂಪತ್ಯಗೀತೆಗೆ ಪಲ್ಲವಿಯಾಗುತ್ತಾಳೆ. ಬೆಳ್ಳಂಬೆಳಗ್ಗೆ ತುಳಸಿಗಿಡಕ್ಕೆ ನೀರೆರೆದು ಕೆನ್ನೆಗೆ ಅರಿಶಿನ ತೋರಿಸಿ ಕಾಫಿ ಲೋಟದೊಂದಿಗೆ ಗಂಡನಿಗೆ ಮುಖ ತೋರಿಸುವ ಹುಡುಗಿ ತನ್ನ ದಿನದ ದಾಂಪತ್ಯ ಗೀತೆಗೆ ಪಲ್ಲವಿ ಹಾಡುತ್ತಾಳೆ. ವಾರಾಂತ್ಯದಲ್ಲಿ ತನ್ನ ಕುಟುಂಬದ ಜೊತೆ ಖುಷಿಯ ನಶೆಗಾಗಿ ಜೀನ್ಸು, ಟೀಶರ್ಟು, ಮಿಡಿಯೊಂದಿಗೆ ಕರಾವಳಿಯ ಕಡಲಕಿನಾರೆಯಲ್ಲಿ ವೀಕೆಂಡ್ ಮೋಜಿಗೆ ಮೈಯ್ಯಾನಿಸುತ್ತಾಳೆ. ಒಟ್ಟಾರೆ ಹೊಸ ತಲೆಮಾರಿನ ಹುಡುಗರೂ ಅನ್ಯೋನ್ಯ ದಾಂಪತ್ಯದ ಸವಿರುಚಿಗೆ ಒಗ್ಗಿಕೊಂಡವರಿದ್ದಾರೆ. ಪ್ರತಿ ಯೊಂದು ವಾದಕ್ಕೂ ಒಂದು ಅಪವಾದವಿರುವಂತೆ, ಕಟ್ಟಿಕೊಂಡ ಮೂರೇ ತಿಂಗಳಿಗೆ ದೇಹಭಾಷೆಯ ಚಟ ಮುಗಿಸಿ ಕೋರ್ಟಿನ ಅಂಗಳದಲ್ಲಿ ವಿಚ್ಛೇದನಕ್ಕಾಗಿ ಕಟಕಟೆ ಹತ್ತಿದವರೂ ಇದ್ದಾರೆ. ಆದರೆ ಮುಖ್ಯ ವಾಹಿನಿಯ ಲೆಕ್ಕಕ್ಕೆ ಅವರು ತಾಳೆಯಾಗುವುದಿಲ್ಲ.



> “ಯಾರು ಎಷ್ಟೇ ಹೇಳಿದರೂ ಮಧ್ಯಮ ವರ್ಗದವರ ಮನಸ್ಥಿತಿ ಮಾತ್ರ ತುಂಬಾ ಸಂಕೀರ್ಣವಾಗಿ ಯೋಚಿಸುತ್ತಿರುತ್ತದೆ. ಮದುವೆ ಎಂಬ ಈ ಮೂರಕ್ಷರದ ಪದ ಅರಮನೆಯಿಂದ ನೆರೆಮನೆಯವರೆಗೆ ಇಂಥಾ ಏನೇನೋ ದುರಂತ ಧಾವಂತಗಳನ್ನು ಸೃಷ್ಟಿಸಿ ಹೋಗಿದೆ. ಜಗತ್ತಿನ ವಿವಾಹಪೂರ್ವ, ವಿವಾಹೋತ್ತರ ಸಂಗತಿಗಳ ಬಗ್ಗೆ ಬರೆಯುತ್ತಾ ಹೋದರೆ ದೊಡ್ಡ ಚರಿತ್ರೆಯೇ ಆದೀತು. ಆದರೆ, ಜೀವ ಜಗತ್ತು ಇಂದಿಗೂ ಸದಾ ಅರ್ಥಪೂರ್ಣವಾಗಿ ಸಾರ್ಥಕಗೊಳ್ಳುತ್ತಿರುವುದು ಮದುವೆ ಮನೆಯಿಂದ ಹೊರಟ ವಾಲಗದ ಸದ್ದಿನಂತೆ ಸುಖದಾಂಪತ್ಯದಲ್ಲಿ.

ಒಲವೇ ಜೀವನ ಲೆಕ್ಕಾಚಾರದ ಈ ಕಾಲದಲ್ಲಿ ಇಷ್ಟೆಲ್ಲಾ ಒತ್ತಡಗಳ ನಡುವೆಯೂ ಅನ್ಯೋನ್ಯ ದಾಂಪತ್ಯಗಳು ಮೇಳವಿಸಿವೆ. ಬದುಕಿನ ಮುಂಜಾನೆಯಲ್ಲಿ ದುಡಿದು ತಂದು ಅಕ್ಕರೆ ಆಶ್ರಯ ನೀಡಿದ ಪತಿ ಬದುಕಿನ ಸಂಧ್ಯಾ ಕಾಲದಲ್ಲಿ ವಿಚಿತ್ರ ಕಾಯಿಲೆಗಳಿಗೆ ಒಳಗಾಗಿ ಅಶಕ್ತನಾಗಿ ಹೋದಾಗಲೂ ಆತನಿಗೆ ಊರುಗೋಲಾಗಿ ನಿಂತು ತಾನು ದುಡಿದು ಕೈಹಿಡಿದು ನಡೆಸಿದ ಅರ್ಧಾಂಗಿಯರಿದ್ದಾರೆ. ನಮ್ಮ ಮೈಸೂರಿನ ಪ್ರತಿಭಾವಂತ ಕಲಾವಿದ ರೇಣುಕಾಪ್ರಸಾದ್ ಇಂಥದೊಂದು ಅನ್ಯೋನ್ಯ ದಾಂಪತ್ಯಕ್ಕೆ ಉದಾಹರಣೆ. ಇನ್ನೂ ಇಂತಹ ಅನೇಕ ಉದಾಹರಣೆಗಳು ನಮ್ಮ ಮುಂದಿವೆ. ಅಂದರೆ ಒಲವು ಜೀವನದ ಲೆಕ್ಕಾಚಾರ ಎಂದು ಲೆಕ್ಕ ಹಾಕಿಕೊಂಡೇ ಮದುವೆ ಎಂಬ ಮೂರಕ್ಷರದ ಮೊಹರು ಬಿದ್ದ ಮೇಲೂ ಬದುಕು ತನ್ನ ಲೆಕ್ಕಾಚಾರದ ಕಾಗುಣಿತವನ್ನು ಬದಲಾಯಿಸಿ ಕೊಂಡು ಒಲವಿನ ಕಡೆಗೇ ಓಡುವು ದನ್ನು ನೋಡಿದರೆ, ದಾಂಪತ್ಯ ಗೀತೆ ಎಲ್ಲಾ ಕಾಲಕ್ಕೂ ಎಲ್ಲಾ ಜೀವಕ್ಕೂ ಎಲ್ಲಾ ದೇಶಕ್ಕೂ ಕಷ್ಟಸುಖಗಳಲ್ಲೂ ಹಂಚಿಕೊಳ್ಳುವ ಅಮೃತವನ್ನೇ ಸೃಷ್ಟಿಸುತ್ತದೆ. ಕವಿ ಕೆ.ಎಸ್. ನರಸಿಂಹಸ್ವಾಮಿಯವರು ತಾವು ಬರೆದ ಗೀತೆಗಳನ್ನು ದಾಂಪತ್ಯಗೀತೆಗಳು ಎಂತಲೇ ಒಪ್ಪಿಕೊಳ್ಳುತ್ತಾರೆ. ಅವರು ಬರೆದುದೆಲ್ಲ ಪ್ರೇಯಸಿಯ ಮೇಲೋ, ಗೆಳತಿಯ ಮೇಲೋ ಅಲ್ಲ, ಶುದ್ಧ ದಾಂಪತ್ಯದ ಮೇಲೆ! ರಸಋಷಿ ಕುವೆಂಪು, ವರಕವಿ ದ.ರಾ. ಬೇಂದ್ರೆ ಇವರೆಲ್ಲಾ ಬರೆದ ಭಾವಗೀತೆಯ ಪಲ್ಲವಿ ಚರಣಗಳ ತುಂಬೆಲ್ಲಾ ಅನ್ಯೋನ್ಯ ದಾಂಪತ್ಯದ ಅನುಭವದ ಸಾರವೇ ಸಾಲುಗಳಾಗಿ ಕಳೆಗಟ್ಟುತ್ತಿ ದ್ದವು. ಕೇವಲ ಬರೆಯಬೇಕೆಂಬ ತುರಿಕೆಗಾಗಿ ಬರೆದ ಸಾಲುಗಳಂತೆ ಅವು ಸೃಷ್ಟಿಯಾಗಲಿಲ್ಲ. ಯಾಕೆ? ಎಂದರೆ ಅನ್ಯೋನ್ಯ ದಾಂಪತ್ಯ ಅಲ್ಲಿ ಗರಿಕೆಯಂತೆ ಚಿಗುರುತ್ತಿತ್ತು. ಹಾಗಾಗಿಯೇ ಅನ್ಯೋನ್ಯ ದಾಂಪತ್ಯದ ಸೊಗಸು, ಆದರ್ಶ ದಾಂಪತ್ಯಕ್ಕಿಂತ ಮಿಗಿಲಾಗಿ ಕಾಣುತ್ತಿತ್ತು.

ಹಾಗೆ ನೋಡಿದರೆ ಧರ್ಮ, ಅರ್ಥ, ಕಾಮ, ಮೋಕ್ಷಗಳೆಲ್ಲಾ ತಾರ್ಕಿಕವಾಗಿ ಚರ್ಚಿಸಲ್ಪಡುತ್ತವೆ ನಿಜ. ಆದರೆ ಸುಖ ದಾಂಪತ್ಯದಲ್ಲಿ ಅನ್ಯೋನ್ಯತೆ ಎನ್ನುವ ಪದಭಾಷೆ ವ್ಯಕ್ತಿತ್ವದ ಆಂತರಿಕ ಸೌಂದರ್ಯವನ್ನು ಹೆಚ್ಚಿಸುತ್ತದೆ. ಮದುವೆಗೆ ಮುನ್ನ ಬಾಹ್ಯ ಸೌಂದರ್ಯಕ್ಕೆ ಮಾರುಹೋದ ಮನಸ್ಸು ಮದುವೆಯ ನಂತರ ಆಂತರಿಕ ಸೌಂದರ್ಯದ ಕಡೆಗೇ ವಾಲುತ್ತದೆ. ಹಾಗೆ ವಾಲುವ ಸಂಸಾರಗಳಲ್ಲಿ ಮಾತ್ರ ಅನ್ಯೋನ್ಯ ದಾಂಪತ್ಯದ ಗೀತೆ ಹುಟ್ಟುತ್ತದೆ. ಇತ್ತೀಚೆಗೆ ಶುದ್ಧ ಮನಸ್ಸಿನ ವ್ಯಕ್ತಿಗಳಲ್ಲಿ ವಾಟ್ಸಪ್, ಫೇಸ್ಬುಕ್ ಮುಂತಾದ ಸಾಮಾಜಿಕ ಜಾಲತಾಣಗಳಲ್ಲಿ ಕೂಡ ಇಂಥದೊಂದು ಸಾತ್ವಿಕ ಚರ್ಚೆ ಶುರುವಾಗಿದೆ.

ನೋಡಿ! ಒಮ್ಮೊಮ್ಮೆ ಸೌಂದರ್ಯವೇ ಮುಖ್ಯವಾಗಿದ್ದುದ್ದು ಮುಂದೆ ಅದೇ ಅಮುಖ್ಯವಾಗಿ ಹೋಗುತ್ತದೆ ಎಂಬುದಕ್ಕೆ ಇಲ್ಲೊಂದು ಘಟನೆಯಿದೆ. ಆತ ಅಪ್ರತಿಮ ಸೌಂದರ್ಯಾರಾಧಕ. ಆಕೆಯ ಸುರಿಯುವ ಚೆಲುವನ್ನು ನೋಡಿ ಆಕೆಯ ಸೌಂದರ್ಯಕ್ಕೆ ಮಾರು ಹೋಗಿ ಆಕೆಯನ್ನು ಮದುವೆಯಾದ. ಆಕೆಯೂ ಸೌಂದರ್ಯದ ಖನಿ. ಆತ ಆಕೆಯನ್ನು ಮದುವೆಯಾಗಲು ಕಾರಣವೇ ಆಕೆಯ ಸೌಂದರ್ಯ. ತನ್ನ ಗಂಡ ತನ್ನ ರೂಪಕ್ಕೆ ಸೋತು ಮದುವೆಯಾಗಿದ್ದಾನೆನ್ನುವ ಸತ್ಯ ಆಕೆಗೂ ಗೊತ್ತಿತ್ತು. ಅಲ್ಲಿಯವರೆಗೂ ಅವರದು ಸುಖೀ ದಾಂಪತ್ಯ. ಅನ್ಯೋನ್ಯ ದಾಂಪತ್ಯದಲ್ಲಿ ಸುಖವನ್ನು ಸೂರೆ ಮಾಡಿ ಬಾಳಿದ ದಂಪತಿಗಳು. ಸರ್ವಜ್ಞ ಹೇಳಿದಂತೆ ಇಚ್ಛೆಯನ್ನರಿವ ಸತಿಯಿದ್ದಡೆ ಸ್ವರ್ಗಕ್ಕೇ ಕಿಚ್ಚು ಹಚ್ಚುವಂತೆ ಬಾಳುತ್ತಿದ್ದ ಸಂಸಾರ. ವಿಧಿಯಾಟ ಯಾರನ್ನೂ ಬಿಟ್ಟಿದ್ದಲ್ಲ. ಒಂದು ದಿನ ರಾತ್ರಿ ಮಲಗಿ ಬೆಳಿಗ್ಗೆ ಏಳುವಷ್ಟರಲ್ಲಿ ಆಕೆಯ ಸುಂದರ ಮುಖದ ಮೇಲೆ ಬಿಳೀ ಮಚ್ಚೆಯೊಂದು ಕಾಣಿಸಿಕೊಂಡಿತು. ಮೊದಮೊದಲು ಇದೇನೋ ಸನ್‌ಬರ್ನ್ ಇರಬೇಕು ಬಿಡು, ಡಾಕ್ಟರ್‌ಗೆ ತೋರಿಸೋಣವೆಂದು ಹೊರಟ ಸುಖೀ ದಾಂಪತ್ಯದ ದಂಪತಿಗಳಿಗೆ ವೈದ್ಯರ ಬಳಿ ಶಾಕ್ ಒಂದು ಕಾದಿತ್ತು ಸದ್ದಿಲ್ಲದೆ ಅವರ ನೆಮ್ಮದಿ ಕೆಡಿಸುವ ಕೆಟ್ಟ ಸುದ್ದಿ ಅದು. ಆಕೆಗೆ ಬಿಳೀ ತೊನ್ನು ಶುರುವಾಗಿತ್ತು. ಮುಖದ ಮೇಲೆಲ್ಲಾ ಅದು ಹೆಚ್ಚಾಗ ತೊಡಗಿತ್ತು. ಹೆಂಡತಿಯ ಮನಸ್ಸಿನಲ್ಲಿ ಸುನಾಮಿಯಂತೆ ದುಃಖ ಉಮ್ಮಳಿಸುತ್ತಿತ್ತು. ಕಾರಣ ಇಷ್ಟೆ ತನ್ನ ಗಂಡ ತನ್ನ ರೂಪವನ್ನು ಮೆಚ್ಚಿಯೇ ಮದುವೆಯಾದವನು. ಇನ್ನು ಅವನ ಮನಸ್ಸು ಬೇರೆಲ್ಲಾ ದರೂ ಹೊರಳಬಹುದೆ? ಅಥವಾ ತನ್ನ ಬಗ್ಗೆ ಆತನಿಗೆ ತಿರಸ್ಕಾರ ಹುಟ್ಟಬಹುದೆ ಎಂಬ ಭಾವನೆಗಳ ತಾಕಲಾಟದಲ್ಲಿ ಆಕೆ ತೊಯ್ದು ಹೋಗುತ್ತಿದ್ದಳು. ಹೆಂಡತಿಯ ಆ ತಾಕಲಾಟ ಗಂಡನಿಗೆ ಗೊತ್ತಾಗಲು ಬಹಳ ಸಮಯ ಬೇಕಾಗಲಿಲ್ಲ. ಗಂಡ ಆಕೆಯ ರೂಪಕ್ಕೆ ಸೋತವನು ನಿಜ; ಆದರೆ ಮದುವೆಯೆಂಬ ಮುದ್ರೆಯೊತ್ತಿದ ಮೇಲೆ ಶುದ್ಧ ಅನ್ಯೋನ್ಯ ದಾಂಪತ್ಯದ ಸೆಳಕು ಅವನಲ್ಲಿ ಚಿಗುರೊಡೆದಿತ್ತು. ಪ್ರೀತಿಯ ಜಾಗದಲ್ಲಿ ಆತನಿಗೆ ವಾತ್ಸಲ್ಯ ಬೆಳೆದಿದೆ. ಆದರೂ ಆಕೆ ಮಾನಸಿಕ ಖಿನ್ನತೆಯಿಂದ ಬಳಲುತ್ತಾಳೆ. ತನ್ನ ಸೌಂದರ್ಯ ಹಾಳಾದ ಮೇಲೆ ಪತಿ ಎಲ್ಲಿ ದೂರವಾಗಿಬಿಡುತ್ತಾನೋ ಎಂಬ ಆತಂಕದಲ್ಲೇ ಕೊರಗಿ ದಿನದೂಡುತ್ತಾಳೆ. ದುರಂತವೆಂದರೆ ಕೆಲಸ ಮುಗಿಸಿ ಮನೆಗೆ ಬರುವ ಮಾರ್ಗ ಮಧ್ಯದಲ್ಲಿ ಅನಿರೀಕ್ಷಿತವಾಗಿ ಆಕೆಯ ಪತಿ ಅಪಘಾತಕ್ಕೀಡಾಗುತ್ತಾನೆ. ಅಪಘಾತದಲ್ಲಿ ಕಣ್ಣು ಕಳೆದುಕೊಳ್ಳುತ್ತಾನೆ. ಆದರೂ ಅವರಿಬ್ಬರ ಅನ್ಯೋನ್ಯ ದಾಂಪತ್ಯಕ್ಕೆ ಇದಾವುದೂ ಕೊರತೆ ಆಗುವುದಿಲ್ಲ. ನಾವೆಲ್ಲರೂ ಸಮಯದಗೊಂಬೆಗಳು ಯಾವುದು ಎಲ್ಲಿ ಯಾವಾಗ ಏನು ಸಂಭವಿಸುತ್ತದೆಂಬುದು ಯಾರಿಗೆ ಗೊತ್ತು? ಎಲ್ಲವೂ ಸಮಯಕ್ಕೆ ಮಾತ್ರ ಗೊತ್ತು. ಪತಿ ಕಣ್ಣಿನ ದೃಷ್ಟಿ ಕಳೆದುಕೊಂಡ ಮೇಲೆ ತನ್ನ ಬಿಳಿತೊನ್ನಿನ ಮುಖದ ಸಮಸ್ಯೆ ಅಷ್ಟಾಗಿ ಬಾಧಿಸಲಾರದು ಎಂದುಕೊಂಡ ಆಕೆ ಸಮಾಧಾನವಾಗಿರುತ್ತಾಳೆ. ಆದರೆ ದುರದೃಷ್ಟ ಆಕಸ್ಮಿಕವಾಗಿ ಮಹಡಿ ಮೆಟ್ಟಿಲಿನಿಂದ ಜಾರಿ ಬಿದ್ದು ಆಕೆ ಪ್ರಾಣಬಿಡುತ್ತಾಳೆ. ಸಂಸ್ಕಾರವೆಲ್ಲಾ ಮುಗಿದ ಮೇಲೆ ನೆಂಟರಿಷ್ಟರು, ಆತ್ಮೀಯರು ಎಲ್ಲಾ ಸೇರಿ ಗಂಡನಿಗೆ ಸಮಾಧಾನ ಹೇಳಿ ಕುರುಡ ನಾದ ಅವನ ಕೈಗೆ ವಾಕಿಂಗ್ ಸ್ಟಿಕ್ ಕೊಡುತ್ತಾರೆ. ಪರಮಾಶ್ಚರ್ಯ ವೆಂದರೆ ಕೈಗೆ ಕೊಟ್ಟ ವಾಕಿಂಗ್‌ಸ್ಟಿಕ್‌ಅನ್ನು ಅಲ್ಲೇ ಮಡಚಿಟ್ಟು ಕನ್ನಡಕ ತೆಗೆದಿಟ್ಟು ಹೆಂಡತಿಯ ಭಾವಚಿತ್ರದ ಬಳಿಗೆ ಆತ ಸರಾಗವಾಗಿ ನಡೆದೇ ಹೋಗುತ್ತಾನೆ. ಹೆಂಡತಿಯ ಪ್ರೀತಿ ಅವಳ ಸೌಂದರ್ಯ ಎರಡನ್ನೂ ಕಣ್ತುಂಬಿಸಿ ಕೊಳ್ಳುತ್ತಾನೆ. ಅಲ್ಲಿದ್ದವರೊಬ್ಬರು ನಿನಗೆ ಕಣ್ಣು ಕಾಣುತ್ತಿದೆಯಾ? ಎಂದು ಕೇಳುತ್ತಾರೆ. ಹಿಂದಕ್ಕೆ ತಿರುಗಿದ ಆತ ನನಗೇನಾಗಿದೆ ನಡೆದದ್ದು ಚಿಕ್ಕ ಅಪಘಾತ. ನನ್ನ ಕಣ್ಣುಗಳು ಚೆನ್ನಾಗಿಯೇ ಇವೆ. ಆದರೆ ಕಣ್ಣಿಲ್ಲದವನಂತೆ ಇಷ್ಟು ದಿನ ನಾನೇ ನಟಿಸಿದೆ. ಕಾರಣ ನನ್ನ ಹೆಂಡತಿಯ ಮನಸ್ಸಿಗೆ ನಾನು ನಿತ್ಯ ಅವಳನ್ನು ನೋಡು ತ್ತಿಲ್ಲವೆಂಬ ಭಾವನೆ ಬಂದು ಅವಳು ಮೊದಲಿನಂತೆ ಸುಖವಾಗಿರಲಿ ಎಂದು ಹಾಗೆ ನಟಿಸಿದೆ ಅಷ್ಟೆ. ಅನ್ಯೋನ್ಯ ದಾಂಪತ್ಯ ಸವಿಯೆಂದರೆ ಇದೇ ಅಲ್ಲವೇ!

ಒಮ್ಮೆ ರಿಯಾಲಿಟಿ ಶೋ ಒಂದರಲ್ಲಿ ನಮ್ಮ ಕ್ರೇಜಿಸ್ಟಾರ್ ರವಿಚಂದ್ರನ್ ಅವರನ್ನು ಒಂದು ಪ್ರಶ್ನೆ ಕೇಳಿದರು. ಅಷ್ಟೊಂದು ಜನ ಸುಂದರವಾದ ಹೀರೋಯಿನ್‌ಗಳ ಜೊತೆ ನಟಿಸಿರುವ ನಿಮಗೆ ನಿಮ್ಮ ಫೇವರಿಟ್ ಹೀರೋಯಿನ್ ಯಾರು? ಅಂತ. ಅದಕ್ಕೆ ರವಿಚಂದ್ರನ್ ಹೇಳಿದ ಮಾತೇನು ಗೊತ್ತ? ಎಷ್ಟೇ ಸುಂದರಿಯರ ಜೊತೆ ನಾನು ನಟಿಸಿದ್ದರೂ ನನ್ನ ಫೇವರಿಟ್ ಹೀರೋಯಿನ್ ಮಾತ್ರ ಯಾವಾಗಲೂ ನನ್ನ ಹೆಂಡತಿ ಅಂತ. ಎಷ್ಟೋ ಸಲ ಸುಂದರ ಪುರುಷರಿಗೆ ಅವರಷ್ಟೇ ಸುಂದರಿಯರಾದ ಪತ್ನಿಯರು ಸಿಕ್ಕುವುದಿಲ್ಲ. ಸುಂದರಿ ಯಾದ ಹೆಣ್ಣು ಮಕ್ಕಳಿಗೆ ಅವರಷ್ಟೇ ಸುಂದರವಾದ ವರಗಳೂ ಸಿಕ್ಕಿರುವುದಿಲ್ಲ. ಆದರೂ ಅನ್ಯೋನ್ಯ ದಾಂಪತ್ಯ ಅವರನ್ನು ಸುಖ ಮಯವಾಗಿ ತೂಗಿದೆ. ಕರ್ನಾಟಕದ ರಾಜಕಾರಣದಲ್ಲಿ, ಸಾಂಸ್ಕೃತಿಕ ಲೋಕದಲ್ಲಿ, ಸಿನಿಮಾ, ಸಾಹಿತ್ಯ, ಸಂಗೀತ, ಕ್ರೀಡೆ, ವ್ಯಾಪಾರ ಉದ್ಯಮಗಳಲ್ಲಿ ಆಕಾಶದೆತ್ತರಕ್ಕೂ ಕೀರ್ತಿವಂತರಾಗುವಂತೆ ಮಾಡಿದೆ. ಬಾಹ್ಯ ಸೌಂದರ್ಯವಿಲ್ಲದಿದ್ದಾಗ್ಯೂ ಆತ್ಮಸೌಂದರ್ಯ, ಅನ್ಯೋನ್ಯ ದಾಂಪತ್ಯ ಗೆದ್ದಿದೆ. ಬಹಳಷ್ಟು ಹೆಸರುಗಳನ್ನು ನಾನಿಲ್ಲಿ ಬರೆಯಬೇಕಿಲ್ಲ. ಮೀಸೆಯಲ್ಲೇ ನಗಬೇಡಿ ಬಹುಪಾಲು ಸೆಲೆಬ್ರಿಟಿಗಳು ನಿಮಗೂ ಗೊತ್ತು ಏನಂತೀರಿ?

ಡೀಸೆಲ್ ಬೆಲೆ ಏರಿಕೆ ಖಂಡಿಸಿ

ಏ.14ರ ಮಧ್ಯರಾತ್ರಿಯಿಂದ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಲಾರಿ ಮುಷ್ಕರ

ಮೈಸೂರು, ಏ.7(ಜಿಎ)– ರಾಜ್ಯ ಸರ್ಕಾರ ಡೀಸೆಲ್ ಬೆಲೆಯನ್ನು ಇಳಿಸುವುದು ಸೇರಿದಂತೆ ಲಾರಿ ಮಾಲೀಕರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಏ.14ರ ಮಧ್ಯರಾತ್ರಿಯಿಂದಲೇ ರಾಜ್ಯಾದ್ಯಂತ ಅನಿರ್ದಿಷ್ಟಾವಧಿ ಲಾರಿಗಳ ಮುಷ್ಕರಕ್ಕೆ ಕರೆ ನೀಡಲಾಗಿದ್ದು, 6 ಲಕ್ಷ ಲಾರಿಗಳು ರಸ್ತೆಗೆ ಇಳಿಯುವುದಿಲ್ಲ ಎಂದು ಫೆಡರೇಷನ್ ಆಫ್ ಕರ್ನಾಟಕ ಸ್ಟೇಟ್ ಲಾರಿ ಓನರ್ಸ್ ಅಂಡ್ ಏಜೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷರಾದ ಡಾ.ಜಿ.ಆರ್. ಷಣ್ಮುಗಪ್ಪ ಹೇಳಿದರು.



ಮೈಸೂರಿನಲ್ಲಿ ಲಾರಿಗಳ ಮುಷ್ಕರ ಕುರಿತು ಸಭೆ ನಡೆಸಲಾಯಿತು.

ಮೈಸೂರಿನಲ್ಲಿ ಮೈಸೂರು ಜಿಲ್ಲಾ ಲಾರಿ ಮಾಲೀಕರ ಸಂಘದ ವತಿಯಿಂದ ಮೈಸೂರು ಸಿಟಿ ಗೂಡ್ಸ್ ಲಾರಿ ಓನರ್ ಅಸೋಸಿಯೇಷನ್ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ಮುಷ್ಕರ ಕುರಿತು ಮಾತನಾಡಿದ ಅವರು, ರಾಜ್ಯ ಸರ್ಕಾರ 6 ತಿಂಗಳ ಒಳಗೆ ಲೀಟರ್ ಡೀಸೆಲ್‌ಗೆ 5 ರೂ. ಹೆಚ್ಚಳ ಮಾಡಲಾಗಿದೆ. ಇದರಿಂದ ಲಾರಿ ಮಾಲೀಕರಿಗೆ ಹೊರೆಯಾಗಿದೆ. ನಾವು ಯಾವುದೇ ಕಾರಣಕ್ಕೂ ಇದನ್ನು ಒಪ್ಪುವುದು ಸಾಧ್ಯವಿಲ್ಲದ ಕಾರಣಕ್ಕಾಗಿ ಏ.14ರ ಮಧ್ಯರಾತ್ರಿಯಿಂದಲೇ ಅಗತ್ಯ ವಸ್ತುಗಳಾದ ಹಾಲು, ತರಕಾರಿ ವಾಹನ ಹೊರತು ಪಡಿಸಿ, ರಾಜ್ಯಾದ್ಯಂತ ಲಾರಿಗಳ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಲಾಗಿದೆ ಎಂದರು.

ರಾಜ್ಯದಲ್ಲಿ ಲಾರಿ ಮಾಲೀಕರು ಆತ್ಮ ಹತ್ಯೆ ಮಾಡಿಕೊಳ್ಳುವ ಸಂದರ್ಭ ಬಂದಿದೆ. ದೇಶದ ಯಾವುದೇ ರಾಜ್ಯದಲ್ಲೂ ಸ್ಟೇಟ್ ಹೈವೆ ರಸ್ತೆಗಳಿಗೆ ಟೋಲ್ ಇರುವುದಿಲ್ಲ. ಆದರೇ, ರಾಜ್ಯದಲ್ಲಿ ಸ್ಟೇಟ್ ಹೈವೆ ರಸ್ತೆಗಳಿಗೆ ಸುಣ್ಣ, ಬಣ್ಣ ಹೊಡೆದು ಟೋಲ್ ಸಂಗ್ರಹ ಮಾಡುತ್ತಿರುವುದು ಅನ್ಯಾಯ ಇದು ತಪ್ಪಬೇಕು. ದೇಶದಾದ್ಯಂತ 1928 ಕಮರ್ಷಿಯಲ್ ಟ್ಯಾಕ್ಸ್ ಚೆಕ್‌ಪೋಸ್ಟ್‌ಗಳು ಇದ್ದವು. ಜಿಎಸ್‌ಟಿ ಬಂದ ನಂತರ ಎಲ್ಲ ಚೆಕ್ ಪೋಸ್ಟ್‌ಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆಗೆದುಹಾಕಿದವು. 14 ರಾಜ್ಯಗಳಲ್ಲಿ ಬಾರ್ಡರ್ ಆರ್‌ಟಿಓ ಚೆಕ್ ಪೋಸ್ಟ್ ಇರುವುದಿಲ್ಲ. ಆದರೆ, ನಮ್ಮ ರಾಜ್ಯದಲ್ಲಿ ಮಾತ್ರ ಬಾರ್ಡರ್ ಆರ್‌ಟಿಓ ಚೆಕ್ ಪೋಸ್ಟ್ ನಿರ್ಮಿಸಿ ಲಾರಿ ಮಾಲೀಕರಿಗೆ ಕಿರುಕುಳ ನೀಡಲಾಗುತ್ತಿದೆ. ಸರ್ಕಾರ ಕೂಡಲೇ ಇಂತಹ ಬಾರ್ಡರ್ ಆರ್‌ಟಿಓ ಚೆಕ್‌ಪೋಸ್ಟ್‌ಗಳನ್ನು ತೆಗೆದುಹಾಕಬೇಕು ಎಂದರು.

ಅಲ್ಲದೇ ಲಾರಿ ಮಾಲೀಕರಿಗೆ ಫೈನಾನ್ಸಿಯರ್‌ಗಳ ಕಿರುಕುಳ ಹೆಚ್ಚಾಗಿದೆ. ಕಿರುಕುಳದಿಂದ ಮಾಲೀಕರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಒದಗಿದೆ. ಕೂಡಲೇ ಸರ್ಕಾರ ಕಿರುಕುಳದಿಂದ ತಪ್ಪಿಸಬೇಕು. ಅಲ್ಲದೇ ಲಾರಿ ಚಾಲಕರಿಗೆ ಭವಿಷ್ಯದಲ್ಲಿ ಅವರು ನಿವೃತ್ತರಾದರೆ ಅಥವಾ ಮೃತರಾದರೆ ಅವರಿಗೆ ತಲಾ 30 ರಿಂದ 40 ಲಕ್ಷ ಪರಿಹಾರ ವಿತರಿಸಬೇಕು. ಈ ಎಲ್ಲ ಬೇಡಿಕೆಗಳನ್ನು ಈಡೇರಿಸುವ ತನಕ ಪ್ರತಿಭಟನೆ ಹಿಂಪಡೆಯುವುದಿಲ್ಲ ಎಂದರು.


ಸಭೆಯಲ್ಲಿ ಮೈಸೂರು ಗೂಡ್ಸ್ ಶೆಡ್ ಲಾರಿ ಮಾಲೀಕರ ಸಂಘದ ಅಧ್ಯಕ್ಷ ಅಬ್ದುಲ್ ಖಾದರ್ ಷಾಹೀದ್, ಜಿಲ್ಲಾ ಲಾರಿ ಮಾಲೀಕರ ಸಂಘದ ಕೋದಂಡರಾಮು, ಸ್ವಾಮಿ, ಅಕ್ರಂ, ಅನಿಲ್, ಶಂಕರ್, ಪ್ರಕಾಶ್, ಅಸ್ಗರ್ ಮತ್ತಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581/1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಜನಾಕ್ರೋಶ ಯಾತ್ರೆಯಲ್ಲಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ನಾಯಕರ ವಾಕ್ಸಮರ

ರಾಜ್ಯದ ಜನತೆ ಪಾಲಿಗೆ ಈ ಸರ್ಕಾರ ಸತ್ತಂತಿದೆ



ಮೈಸೂರು, ಏ.7(ಎಂಕೆ)– ಮನುಷ್ಯತ್ವ ಹಾಗೂ ಜನಪರ ಕಾಳಜಿ ಇಲ್ಲದ ಜನ ವಿರೋಧಿ ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆ ಪಾಲಿಗೆ ಬದುಕಿದ್ದು ಸತ್ತಂತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಆಕ್ರೋಶ ವ್ಯಕ್ತಪಡಿಸಿದರು.

ಜನಾಕ್ರೋಶ ಯಾತ್ರೆಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ 20 ತಿಂಗಳಲ್ಲಿ ಹಾಲಿನ ದರ 9 ರೂ. ಜಾಸ್ತಿಯಾಗಿದೆ. ಪೆಟ್ರೋಲ್–ಡೀಸೆಲ್ ದರ 7 ರೂ. ಜಾಸ್ತಿಯಾಗಿದೆ. ಅಗತ್ಯ ವಸ್ತುಗಳ ಬೆಲೆ ಗಗನಕ್ಕೇರಿದೆ. ಬಸ್ ಟಿಕೆಟ್ ದರ ಜಾಸ್ತಿಯಾಗಿರುವುದಲ್ಲದೆ ಗ್ರಾಮೀಣ ಪ್ರದೇಶಗಳಿಗೆ ಸಾರಿಗೆ ಬಸ್‌ಗಳೇ ಬರುತ್ತಿಲ್ಲ. ಬಡವರಿಗಾಗಿರುವ ಸರ್ಕಾರಿ ಆಸ್ಪತ್ರೆಗಳಲ್ಲಿಯೂ ಚಿಕಿತ್ಸಾ ದರಗಳನ್ನು ಹೆಚ್ಚಿಸಿರುವ ಮನುಷ್ಯತ್ವ, ಜನಪರ ಕಾಳಜಿ ಇಲ್ಲದ ರಾಜ್ಯ ಕಾಂಗ್ರೆಸ್ ಸರ್ಕಾರ ಜನತೆ ಪಾಲಿಗೆ ಬದುಕಿದ್ದು ಸತ್ತಂತೆ ಎಂದು ಕಿಡಿಕಾರಿದರು.

ಅಧಿಕಾರಕ್ಕೆ ಬರುವ ಮುನ್ನ ಅಹಿಂದ ಎನ್ನುತ್ತಿದ್ದ ಸಿದ್ದರಾಮಯ್ಯ, ಅಧಿಕಾರ ಬಂದ ಕೂಡಲೇ ಅಹಿಂದ ಸಮುದಾಯಗಳನ್ನು ಮರೆತು ಅಲ್ಪಸಂಖ್ಯಾತ ಸಮುದಾಯದ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಅಲ್ಪಸಂಖ್ಯಾತರ ನಾಯಕರಾಗುತ್ತಿರುವ ಸಿದ್ದರಾಮಯ್ಯ ಅವರಿಂದ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ವಿಧಾನಸೌಧದಲ್ಲಿ ಕುಳಿತು ಅಧಿಕಾರವನ್ನು ಮಜಾ ಮಾಡುತ್ತಿರುವ ಈ ರಾಜ್ಯ ಸರ್ಕಾರಕ್ಕೆ ಜನರ ಜವಾಬ್ದಾರಿ ಇಲ್ಲ. ಆದ್ದರಿಂದ ಇಂತಹ ಜನವಿರೋಧಿ, ಹಿಂದೂ ವಿರೋಧಿ ರಾಜ್ಯ ಕಾಂಗ್ರೆಸ್ ಸರ್ಕಾರದ ಮುಖವಾಡ ಕಳಚಲು ಜನಾಕ್ರೋಶ ಯಾತ್ರೆ ಹಮ್ಮಿಕೊಂಡಿದ್ದೇವೆ ಎಂದರು.

ಚುನಾವಣೆ ಬಂದಾಗ ಜನರ ಮುಂದೆ ಕಪಟನಾಟಕವಾಡುವ ಕಾಂಗ್ರೆಸ್ ಪಾರ್ಟಿ, ಅಧಿಕಾರಕ್ಕೆ ಬಂದ ಮೇಲೆ ಎಲ್ಲವನ್ನೂ ಮರೆತು ಹೈಕೋರ್ಟ್ ಆದೇಶ ಇದ್ದರೂ ಬಂಡಿಪುರದಲ್ಲಿ ರಾತ್ರಿ ವೇಳೆ ವಾಹನಗಳ ಸಂಚಾರಕ್ಕೆ ಅವಕಾಶ ಕೊಡುತ್ತಿದೆ. ಇದೆಲ್ಲದರ ವಿರುದ್ಧ, ರಾಜ್ಯದ ಜನರ ಪರವಾಗಿ ಬಿಜೆಪಿ ಹೋರಾಟ ಮಾಡುತ್ತಿದ್ದು, ಎಲ್ಲರೂ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರ ತೊಲಗಿಸಲು ಕೈ ಜೋಡಿಸಬೇಕು ಎಂದು ಹೇಳಿದರು.

– ಬಿ.ವೈ.ವಿಜಯೇಂದ್ರ

ಕಳ್ಳ–ಮಳ್ಳರ ಬೀದಿಗೆಳೆಯುವ ಕೆಲಸ ಜನಾಕ್ರೋಶದಿಂದ ನಡೆಯುತ್ತಿದೆ: ಆರ್.ಅಶೋಕ್



ಮೈಸೂರು, ಏ.7(ಎಂಕೆ)– ಕಳ್ಳ–ಮಳ್ಳರನ್ನು ಬೀದಿಗೆಳೆಯುವ ಕೆಲಸವನ್ನು ಬಿಜೆಪಿ ಜನಾಕ್ರೋಶ ಯಾತ್ರೆ ಮೂಲಕ ಮಾಡುತ್ತಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ವಾಗ್ದಾಳಿ ನಡೆಸಿದರು.

ಬಜೆಟ್‌ನಲ್ಲಿ ಟ್ಯಾಕ್ಸ್ ಪ್ರಸ್ತಾಪಿಸದೆ, ಹಿಂಬಾಗಿಲಿನಿಂದ ತೆರಿಗೆ ಹಾಕುತ್ತಿರುವ ಸಿದ್ದರಾಮಯ್ಯ, ಬೆಲೆ ಏರಿಕೆ ಮೂಲಕ ರಾಜ್ಯದ ಜನರನ್ನು ಸೊಳ್ಳೆ–ತಿಗಣೆಯಂತೆ ಕಾಡುತ್ತಿದ್ದಾರೆ. ಸಿದ್ದರಾಮಯ್ಯ ಸೊಳ್ಳೆ, ಡಿ.ಕೆ.ಶಿವಕುಮಾರ್ ತಿಗಣೆ ರೀತಿ ಬಡವರ ರಕ್ತ ಹೀರುತ್ತಿದ್ದಾರೆ. ಟೋಪಿ ಹಾಕದ ಸಿದ್ದರಾಮಯ್ಯ ಮಾಡುವ ಕೆಲಸ ಮಾತ್ರ ಟೋಪಿ ಹಾಕಿದವರಿಗೆ. ಹಿಂದೂ ಕಂಟ್ರಾಕ್ಟರ್‌ಗಳಿಗೆ 4 ಪರ್ಸೆಂಟ್ ಕಟ್ ಮಾಡಿ ಮುಸ್ಲಿಂ ಮರಿಗೆ ನೀಡಿದ್ದಾರೆ. ಸಂಸದೆ ಪ್ರಿಯಾಂಕ ವಡೆ... ಅಲ್ಲ.. ವಾದ್ರಾ... ನಮ್ಮ ಕಾಡಿನ ಪ್ರಾಣಿಗಳ ಬಲಿ ಕೇಳುತ್ತಿದ್ದಾರೆ. ಪರಿಸರ ನಾಶಕ್ಕೆ ಮುಂದಾಗುತ್ತಿದ್ದಾರೆ. ಟೋಪಿಗಾಗಿ ಏನೇನೂ ಬೇಕೋ ಅದೆಲ್ಲವನ್ನೂ ಮಾಡುತ್ತಿದ್ದಾರೆ ಎಂದು ಲೇವಡಿ ಮಾಡಿದರು. ವಕ್ಫ್ ಬಿಲ್ ಜಾರಿಯಾಗದಿದ್ದರೆ, ಮುಂದೆ ಚಾಮುಂಡಿಬೆಟ್ಟವೂ ನಮ್ಮದೆ, ಮೈಸೂರು ಅರಮನೆಯೂ ನಮ್ಮದೇ ಎನ್ನುತ್ತಿದ್ದರು. ಇದಕ್ಕಾಗಿ ಪ್ರಧಾನಿ ಮೋದಿಯವರಿಗೆ ಜೈ ಎನ್ನಬೇಕು. ಮೋದಿ ಲಕ್ಷಾಂತರ ರೈತರಿಗೆ, ದೇವಸ್ಥಾನಗಳಿಗೆ ವರದಾನವಾಗಿ ವಕ್ಫ್ ಕಾಯ್ದೆ ತಂದಿದ್ದಾರೆ. ಈ ಜನಾಕ್ರೋಶ ಉದ್ದೇಶ 14 ಸೈಟ್ ಕಳ್ಳ ಮತ್ತು ಬೆಂಗಳೂರನ್ನು ಲೂಟಿ ಮಾಡಲು ಮುಂದಾಗಿರುವ ಮಳ್ಳನನ್ನು ಬೀದಿಗೆಳೆಯುವ, ಬಣ್ಣ ಬಯಲು ಮಾಡುವ ಹೋರಾಟ ಮಾಡುತ್ತಿದ್ದೇವೆ. ಇದು ಬಿಜೆಪಿ ಹೋರಾಟವಲ್ಲ. ಜನರ ಹೋರಾಟ ಎಂದರು.

ಪಿಎಸ್‌ಐ ವಿ.ಆರ್.ಶಬರೀಶ್‌ಗೆ ಮುಖ್ಯಮಂತ್ರಿಗಳ ಚಿನ್ನದ ಪದಕ ಪ್ರದಾನ



ಮೈಸೂರು,ಏ.7(ಪಿಎಂ)– ಬೆಂಗಳೂರಿನ ಕೋರಮಂಗಲದ ಕೆಎಸ್‌ಆರ್‌ಪಿ ಕವಾಯತು ಮೈದಾನದಲ್ಲಿ ಇತ್ತೀಚೆಗೆ ನಡೆದ ಪೊಲೀಸ್ ಧ್ವಜ ದಿನಾಚರಣೆಯಲ್ಲಿ ಮೈಸೂರಿನ ಮೇಟಗಳ್ಳಿ ಪೊಲೀಸ್ ಠಾಣೆಯ ಎಸ್‌ಐ ವಿ.ಆರ್.ಶಬರೀಶ್ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಗಳ ಚಿನ್ನದ ಪದಕ ಪ್ರದಾನ ಮಾಡಿದರು.

ವಿ.ಆರ್.ಶಬರೀಶ್ ಅವರು ಪೊಲೀಸ್ ಇಲಾಖೆಯಲ್ಲಿ ಉತ್ತಮ ತನಿಖಾಧಿಕಾರಿಯಾಗಿ ಅಪರಾಧ ಪ್ರಕರಣಗಳನ್ನು ಪತ್ತೆಹಚ್ಚುವ ಮೂಲಕ ಹಿರಿಯ ಅಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇವರು ತೋರಿದ ಅಸಾಧಾರಣ ನೈಪುಣ್ಯತೆ, ಪ್ರಾಮಾಣಿಕತೆ, ದಕ್ಷತೆಗೆ 2022ನೇ ಸಾಲಿನ ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಶಿಫಾರಸು ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ.ಪರಮೇಶ್ವರ್ ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳು ಇದ್ದರು.

ಎಎಸ್‌ಐಗೆ ಅಭಿನಂದನೆ...



ಮುಖ್ಯಮಂತ್ರಿಗಳ ಚಿನ್ನದ ಪದಕಕ್ಕೆ ಭಾಜನರಾದ ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಎಎಸ್‌ಐ ಎಂ.ನಾರಾಯಣ ಅವರನ್ನು ಲಿಂಗಾಂಬುದಿಪಾಳ್ಯದ ನಾಗರಿಕರು ಸನ್ಮಾನಿಸಿ, ಅಭಿನಂದಿಸಿದರು. ಮುಖಂಡರಾದ ಲಿಂಗಾಂಬುದಿಪಾಳ್ಯದ ಮಹದೇವು, ಪುಟ್ಟಣ್ಣ, ರಾಜಣ್ಣ, ನಾರಾಯಣ ಇತರರು ಚಿತ್ರದಲ್ಲಿದ್ದಾರೆ.

ರಾಜ್ಯ ಸರ್ಕಾರ ಕಾಂಗ್ರೆಸ್ ವರಿಷ್ಠರು, ಕೇರಳಕ್ಕೆ ಅನುಕೂಲವಾಗುವಂತೆ ನಡೆಯುತ್ತಿದೆ: ಯದುವೀರ್



ಮೈಸೂರು, ಏ.7(ಎಂಕೆ)– ರಾಜ್ಯ ಕಾಂಗ್ರೆಸ್ ಸರ್ಕಾರ ವಿದ್ಯಾಸಂಸ್ಥೆಗಳನ್ನು ಮುಚ್ಚುವ ತೀರ್ಮಾನ ಮಾಡಿದ್ದು, ತಮ್ಮ ಪಕ್ಷದ ವರಿಷ್ಠರಿಗೆ ಮತ್ತು ಕೇರಳಕ್ಕೆ ಅನುಕೂಲವಾಗುವಂತೆ ನಡೆದುಕೊಳ್ಳುತ್ತಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ದೂರಿದರು.

ಬಿಜೆಪಿ ಜನಾಕ್ರೋಶ ಯಾತ್ರೆಯಲ್ಲಿ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಅವರು, ಮೈಸೂರು ಶಿಕ್ಷಣ ಕ್ಷೇತ್ರವಾಗಿದ್ದು, ಮೈಸೂರು ವಿವಿಯಲ್ಲಿ ಪಿಂಚಣಿದಾರರಿಗೆ ಪಿಂಚಣಿ ಕೊಡಲು ಹಣವಿಲ್ಲ. ಅನುದಾನ ನೀಡದೆ ಅನೇಕ ನೌಕರರಿಗೆ ಸಂಬಳ ಕೊಡುವ ಶಕ್ತಿ ಇಲ್ಲದಂತಾಗಿದೆ. ಕೊಡಗು ವಿವಿಯನ್ನು ಮುಚ್ಚುತ್ತಾರಂತೆ, ಅಲ್ಲದೆ ಹಾಸನ, ಮಹಾರಾಣಿ ಕ್ಲಸ್ಟರ್ ಸೇರಿದಂತೆ ಎಲ್ಲಾ ವಿದ್ಯಾಸಂಸ್ಥೆಗಳನ್ನು ಮುಚ್ಚಲು ಈ ರಾಜ್ಯ ಸರ್ಕಾರ ನಿರ್ಧಾರ ಮಾಡಿದೆ ಎಂದು ಆರೋಪಿಸಿದರು. ಮೈಸೂರು ಏರ್‌ಪೋರ್ಟ್ ಅಭಿವೃದ್ಧಿಗೆ ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ಅವಧಿಯಲ್ಲಿ ಕೊಟ್ಟಿದ್ದ 300 ಕೋಟಿ ರೂ.ಗಳನ್ನೇ ರೀ ಪ್ಯಾಕೇಜ್ ರೀತಿಯಲ್ಲಿ ಕೊಟ್ಟಿರುವಂತೆ ತೋರಿಸಿಕೊಳ್ಳಲು ಘೋಷಣೆ ಮಾಡಿದ್ದಾರೆಯೇ ಹೊರತು ಯಾವುದೇ ಹೊಸ ಅನುದಾನ ಕೊಟ್ಟಿಲ್ಲ. ಭೂ ಸ್ವಾಧೀನ ಅಗತ್ಯವಿರುವ ಇನ್ನೂ 100 ಕೋಟಿ ರೂ.ಗಳ ಪಾಲು ಕೇಂದ್ರ ಸರ್ಕಾರದ್ದು ನಮ್ಮದಲ್ಲ ಎನ್ನುತ್ತಿದ್ದಾರೆ. ಕೊಡಗಿಗೆ ಅವಶ್ಯವಾದ ರೈಲ್ವೆ ಮಾರ್ಗ ನಿರ್ಮಾಣ ಯೋಜನೆಯನ್ನು ನಿರಾಕರಿಸಿದ್ದಾರೆ. ಆದ್ದರಿಂದ ಈ ಭ್ರಷ್ಟ ಕಾಂಗ್ರೆಸ್ ಸರ್ಕಾರವನ್ನು ತೊಲಗಿಸಿ ರಾಜ್ಯದಲ್ಲಿ ಕೇಸರಿ ಧ್ವಜ ಹಾರಿಸೋಣ ಎಂದು ಕರೆ ನೀಡಿದರು.

ವಿಧಾನಸಭೆಯನ್ನ ದುರ್ಬಳಕೆ ಮಾಡಿಕೊಳ್ಳುತ್ತಿದೆ: ಸದಾನಂದಗೌಡ



ಮೈಸೂರು ಏ.7(ಎಂಕೆ)– ಲಜ್ಜೆಗೆಟ್ಟ ಸಿದ್ದರಾಮಯ್ಯ ಅವರ ಸರ್ಕಾರ ವಿಧಾನಸಭೆಯನ್ನು ಸಂಪೂರ್ಣವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದ್ದು, ತೆರಿಗೆ ಮೂಲಕ ರಾಜ್ಯದ ಜನತೆ ಬಳಿ ಇರುವುದೆಲ್ಲವನ್ನು ಲೂಟಿ ಮಾಡುತ್ತಿದೆ ಎಂದು ಮಾಜಿ ಮುಖ್ಯಮಂತ್ರಿ ಸದಾನಂದಗೌಡ ವಾಗ್ದಾಳಿ ನಡೆಸಿದರು. ಪ್ರಜಾತಂತ್ರ ವ್ಯವಸ್ಥೆಯಲ್ಲಿ ವಿಧಾನಸೌಧ ಅತ್ಯಂತ ಪವಿತ್ರ ಸ್ಥಳ. ವಿಧಾನಸಭೆಯ ಒಳಗೆ ರಾಜ್ಯದ ಜನರ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದೇ ಮೂಲ ಮಂತ್ರ. ಆದರೆ ಈ ಲಜ್ಜೆಗೆಟ್ಟ ಸಿದ್ದರಾಮಯ್ಯ ಅವರ ಸರ್ಕಾರ ವಿಧಾನಸಭೆಯನ್ನು ಸಂಪೂರ್ಣವಾಗಿ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಪ್ರಶ್ನಿಸಿದರೆ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡುತ್ತಿದೆ ಎಂದು ಟೀಕಿಸಿದರು.

ಭ್ರಷ್ಟ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದ ಮುಡಾ ಹಗರಣ, ವಕ್ಫ್ ಹಗರಣ, ಗುತ್ತಿಗೆದಾರರಿಂದ ಹಣ ಲೂಟಿ, ಹಸುವಿನ ಕೆಚ್ಚಲು ಕೊಯ್ಯುವ ಅನಾಗರಿಕ ವರ್ತನೆ, ಬ್ಯಾಂಕ್‌ಗಳ ಲೂಟಿಯನ್ನು ಕಂಡಿದ್ದೇವೆ. ಇತಿಹಾಸದಲ್ಲಿ ಅಲ್ಲಾವುದ್ದೀನ್ ಖಿಲ್ಜಿ, ಮಹಮದ್ ಬಿನ್ ತುಘಲಕ್ 60–70 ಪರ್ಸೆಂಟ್ ಟ್ಯಾಕ್ಸ್ ಹಾಕಿ ಜನರನ್ನು ಲೂಟಿ ಮಾಡುತ್ತಿದ್ದರು. ಅವರನ್ನು ಸಹ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಮೀರಿಸಿದೆ. ಜನರ ದಿನನಿತ್ಯದ ಜೀವನಕ್ಕೆ ಬರೆ ಎಳೆದಿದೆ. ಬೀಸುವ ಗಾಳಿಯನ್ನು ಬಿಟ್ಟು ಎಲ್ಲಾ ಅಗತ್ಯ ವಸ್ತುಗಳಿಗೆ ತೆರಿಗೆ ವಿಧಿಸಿದ ಕೀರ್ತಿ ಸಿದ್ದರಾಮಯ್ಯ ಅವರ ಸರ್ಕಾರಕ್ಕೆ ಸಲ್ಲುತ್ತದೆ ಎಂದು ಕಿಡಿಕಾರಿದರು.

ಹಾಗಾಗಿ ರಾಜ್ಯ ಬಿಜೆಪಿ ಪ್ರಜಾತಂತ್ರ ವ್ಯವಸ್ಥೆಯ ಮಾಲೀಕರಾದ ಜನತೆ ಜೊತೆ ಮಾತನಾಡಲು ಬಂದಿದೆ. ಕಾಂಗ್ರೆಸ್ ಸರ್ಕಾರದಿಂದ ಆಕ್ರೋಶಭರಿತರಾಗಿರುವ ಜನರ ಪರವಾಗಿ ಕೆಲಸ ಮಾಡಲು ಬಂದಿದ್ದೇವೆ. ದುರಾಡಳಿತಕ್ಕೆ ಕೊನೆ ಹಾಡಿ, ಭಾರತೀಯ ಜನತಾ ಪಾರ್ಟಿ ಸರ್ಕಾರ ಮತ್ತೆ ಕರ್ನಾಟಕದಲ್ಲಿ ಬರಬೇಕು. ಇದಕ್ಕಾಗಿ ಪ್ರತಿಯೊಬ್ಬರು ಕೈಜೋಡಿಸಬೇಕು ಎಂದು ಕರೆ ನೀಡಿದರು.

ಬೆಂಗಳೂರಿನ ಅಪಾರ್ಟ್‌ಮೆಂಟ್‌ನಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಟೆಕ್ಕಿ ಶವ ಪತ್ತೆ

ಬೆಂಗಳೂರು: ಸೋಮವಾರ ನಗರದ ಚಿಕ್ಕಬಾಣಾವರದಲ್ಲಿರುವ ತಮ್ಮ ಫ್ಲಾಟ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಸಂತ್ರಸ್ತ ಪ್ರಶಾಂತ್ ನಾಯರ್ ಟೆಕ್ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಅವರ ಪತ್ನಿ ಪೂಜಾ ನಾಯರ್ ಕೂಡ ಸಾಫ್ಟ್‌ವೇರ್ ಎಂಜಿನಿಯರ್ ಆಗಿದ್ದಾರೆ. ಅವರು 12 ವರ್ಷಗಳ ಹಿಂದೆ ವಿವಾಹವಾಗಿದ್ದರು ಮತ್ತು ಅವರಿಗೆ ಎಂಟು ವರ್ಷದ ಮಗಳಿದ್ದಾಳೆ.

ಬೆಂಗಳೂರು ಉತ್ತರ ವಿಭಾಗದ ಉಪ ಪೊಲೀಸ್ ಆಯುಕ್ತ (ಡಿಸಿಪಿ) ಸೈದುಲು ಅದಾವತ್ ಮಾತನಾಡಿ, ತಮ್ಮ ಪತ್ನಿಯಿಂದ ಯಾವುದೇ ಚಿತ್ರಹಿಂಸೆ ಅನುಭವಿಸಿದ ಯಾವುದೇ ದೂರುಗಳಿಲ್ಲ ಮತ್ತು ಒಂದು ವರ್ಷದ ಹಿಂದೆಯೇ ಅವರು ಬೇರ್ಪಟ್ಟಿದ್ದರು ಎಂದು ಹೇಳಿದ್ದಾರೆ.

ಪ್ರಶಾಂತ್ ನಾಯರ್ ಅವರ ತಂದೆ ಎಂಎನ್ ಕುಟ್ಟಿ ಪೊಲೀಸರಿಗೆ ನೀಡಿದ ದೂರಿನಲ್ಲಿ, ತಮ್ಮ ಮಗ ಮತ್ತು ಪೂಜಾ ನಡುವೆ ಭಿನ್ನಾಭಿಪ್ರಾಯವಿತ್ತು. ಅವರಿಬ್ಬರು ಸ್ವಲ್ಪ ಸಮಯದಿಂದ ಪ್ರತ್ಯೇಕವಾಗಿ ವಾಸಿಸುತ್ತಿದ್ದರು. ಶುಕ್ರವಾರ ಆತ ತನ್ನ ಪತ್ನಿಯೊಂದಿಗೆ ಜಗಳವಾಡಿದ್ದನು. ನಂತರ ತಾನು ಫೋನ್ ಮೂಲಕ ಆತನನ್ನು ಸಂಪರ್ಕಿಸಲು ಪ್ರಯತ್ನಿಸಿದೆ. ನನ್ನ ಕರೆಗಳಿಗೆ ಉತ್ತರಿಸದ ಕಾರಣ, ಮನೆಗೆ ತೆರಳಿ ನೋಡಿದಾಗ ಆತ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದುಕೊಂಡಿರುವುದು ಕಂಡುಬಂದಿದೆ ಎಂದಿದ್ದಾರೆ.

ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ...




ಬಿಜೆಪಿ 'ಜನಾಕ್ರೋಶ ಯಾತ್ರೆ ಪ್ರತಿಭಟನಾ ಮೆರವಣಿಗೆ ಪುರಭವನದ ಬಳಿ ಮುಕ್ತಾಯವಾದ ಬಳಿಕ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು. ಮಾಜಿ ಸಿಎಂ ಡಿ.ವಿ.ಸದಾನಂದಗೌಡ, ಮಾಜಿ ಡಿಸಿಎಂ ಡಾ.ಸಿ.ಎನ್.ಅಶ್ವಥ್‌ನಾರಾಯಣ್, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಸಂಸದ ಯದುವೀರ್, ಮಾಜಿ ಶಾಸಕರಾದ ಎಲ್.ನಾಗೇಂದ್ರ, ನಿರಂಜನ್‌ಕುಮಾರ್, ಎಸ್.ಬಾಲರಾಜ್ ಮತ್ತಿತರರಿದ್ದರು.

ಮುಕ್ತ ವಿವಿಯಲ್ಲಿ ಐಎಎಸ್–ಕೆಎಎಸ್‌ಗೆ ತರಬೇತಿ

ಮೈಸೂರು,ಏ.7(ಪಿಎಂ)– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿಯನ್ನು ಮೈಸೂರಿನ ಕೇಂದ್ರ ಕಚೇರಿಯಲ್ಲಿ ಹಮ್ಮಿಕೊಳ್ಳಲಾಗುತ್ತಿದೆ. ಆಸಕ್ತರು ಏ.9ರೊಳಗೆ ಬೆಳಗ್ಗೆ 10ರಿಂದ ಸಂಜೆ 4.30ರ ಅವಧಿಯಲ್ಲಿ ದೂ.ಸಂ. 0821–2515944, 9964760090 ಮೂಲಕ ನೋಂದಣಿ ಮಾಡಿಕೊಳ್ಳಬಹುದು ಎಂದು ವಿವಿ ಕುಲಸಚಿವ ಪ್ರೊ.ಕೆ.ಬಿ.ಪ್ರವೀಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿದ್ದರಾಮಯ್ಯ ಸರ್ಕಾರದ ಸಾಧನೆ ಭ್ರಷ್ಟಾಚಾರ, ದುರಾಡಳಿತ, ಸ್ವಜನಪಕ್ಷಪಾತ: ಗೋವಿಂದ್ ಕಾರಜೋಳ



ಮೈಸೂರು, ಏ.7(ಎಂಕೆ)– ಎರಡು ವರ್ಷದ ಸಿದ್ದರಾಮಯ್ಯ ಅವರ ಸರ್ಕಾರದ ಸಾಧನೆ 60 ಪರ್ಸೆಂಟ್ ಭ್ರಷ್ಟಾಚಾರ, ಸ್ವಜನಪಕ್ಷಪಾತ, ದುರಾಡಳಿತ ಎಂದು ಸಂಸದ ಗೋವಿಂದ್ ಎಂ. ಕಾರಜೋಳ ದೂರಿದರು. ಎರಡು ವರ್ಷದಲ್ಲಿ 3400 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 790 ಬಾಣಂತಿಯರು ಸರ್ಕಾರಿ ಆಸ್ಪತ್ರೆಗಳಲ್ಲಿ ಸಾವನ್ನಪ್ಪಿದ್ದಾರೆ. 1100 ಶಿಶುಗಳ ಮರಣವಾಗಿದೆ. 50 ಮಂದಿ ಅಕ್ಕ–ತಂಗಿಯ ಮೇಲೆ ಲೈಂಗಿಕ ದೌರ್ಜನ್ಯ ಮತ್ತು ಕೊಲೆಯಾಗಿದೆ. 12 ಮಂದಿ ಅಧಿಕಾರಿಗಳು ಇವರ ಭ್ರಷ್ಟಾಚಾರಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. 10 ಜನ ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಂಡಿದ್ದೇ ಎರಡು ವರ್ಷದ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಸಾಧನೆಯಾಗಿದೆ ಎಂದು ಗುಡುಗಿದರು.

ಸಂವಿಧಾನ ವಿರೋಧಿ ಆಡಳಿತ, ತುಷ್ಟೀಕರಣ ರಾಜಕಾರಣವನ್ನು ಕಾಂಗ್ರೆಸ್ ಸರ್ಕಾರ ಮಾಡುತ್ತಿದೆ. ಜಾತಿ–ಧರ್ಮಗಳ ಮಧ್ಯೆ ವಿಷ ಬೀಜ ಬಿತ್ತುವ ಕಾಂಗ್ರೆಸ್ ನೀತಿಯನ್ನು ಖಂಡಿಸಿ, ನರೇಂದ್ರ ಮೋದಿಯವರು ದಲಿತ ಮುಸಲ್ಮಾನರ ಕಲ್ಯಾಣಕ್ಕಾಗಿ ವಕ್ಫ್ ಆಸ್ತಿಯಿಂದ ಬರುವ ಆದಾಯವನ್ನು ಬಳಕೆ ಮಾಡಲು ಯೋಜನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು.

ಸಿದ್ದರಾಮಯ್ಯರಿಗೆ ಉಳಿದಿರುವುದು ಇನ್ನು 220 ದಿನಗಳು ಮಾತ್ರ:




ಮೈಸೂರು, ಏ.7(ಎಂಕೆ)– ಅಧಿಕಾರದಾಸೆಯಲ್ಲಿರುವ ರಾಜ್ಯ ಕಾಂಗ್ರೆಸ್ ಸರ್ಕಾರ, ಬೆಲೆ ಏರಿಕೆ ಮೂಲಕ ರಾಜ್ಯದ ಜನತೆಯಲ್ಲಿ ಚಿಂತೆ ತಂದಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಧಿಕಾರ ಕಳೆದುಕೊಳ್ಳುವ ಭಯ ಶುರುವಾಗಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಹೇಳಿದರು.

ಸಿದ್ದರಾಮಯ್ಯ ಅವರಿಗೆ ಉಳಿದಿರುವುದು ಇನ್ನೂ 220 ದಿನಗಳು ಮಾತ್ರ, ಎರಡೂವರೆ ವರ್ಷಕ್ಕೆ ಸಿಎಂ ಸ್ಥಾನಕ್ಕೆ ಅಗ್ರಿಮೆಂಟ್ ಆಗಿರುವಂತೆ ನ.20ರವರೆಗೆ ಹೇಗಾದರೂ ಕುರ್ಚಿ ಉಳಿಸಿಕೊಳ್ಳುವ ಚಿಂತೆಯಲ್ಲಿದ್ದಾರೆ. ಡಿಕೆಸಿಗೆ ಸಿಎಂ ಆಗಬೇಕೆನ್ನುವ ಚಿಂತೆಯಾದರೆ, ಮಲ್ಲಿಕಾರ್ಜುನ ಖರ್ಗೆಗೆ ಸಣ್ಣ ಖರ್ಗೆ(ಪ್ರಿಯಾಂಕ್ ಖರ್ಗೆ)ಯನ್ನು ಡಿಸಿಎಂ ಮಾಡುವ ಚಿಂತೆ. ಪರಮೇಶ್ವರ್‌ಗೆ ಮುಖ್ಯಮಂತ್ರಿಯಾಗುವ ಚಿಂತೆ. ಸತೀಶ್ ಜಾರಕಿಹೋಳಿಗೆ ಕೆಪಿಸಿಸಿ ಅಧ್ಯಕ್ಷರಾಗುವ ಚಿಂತೆ. ಅದೇ ರೀತಿ ರಾಜಣ್ಣನಿಗೆ ಹನಿಟ್ರ್ಯಾಪ್ ಚಿಂತೆಯಾದರೆ, ಕಾಂಗ್ರೆಸ್ ಶಾಸಕರಿಗೆ ನಮ್ಮ ಕ್ಷೇತ್ರಕ್ಕೆ ಅನುದಾನ ಬರುತ್ತಿಲ್ಲವೆಂಬ ಚಿಂತೆಯಾಗಿದೆ. ಇದೆಲ್ಲದರ ನಡುವೆ ಜನರಿಗೆ ಬೆಲೆ ಏರಿಕೆ ಚಿಂತೆಯಾಗಿದ್ದು, ಜನರ ಕಷ್ಟ ಕೇಳುವುದಕ್ಕಾಗಿ ಬಿಜೆಪಿ ಜನಾಕ್ರೋಶ ಸಮಾವೇಶ ಪ್ರಾರಂಭಿಸಿದೆ ಎಂದರು.

ಸರ್ಕಾರದಲ್ಲಿರುವ ಯಾರಿಗೂ ಸಮಾಧಾನವಿಲ್ಲ. ಜನರು ನೆಮ್ಮದಿಯನ್ನೇ ಕಳೆದುಕೊಂಡಿದ್ದಾರೆ. ಅಗತ್ಯ ವಸ್ತುಗಳ ಬೆಲೆ ಏರಿಕೆಯಲ್ಲಿ ಸಿಎಂ ಸಿದ್ದರಾಮಯ್ಯ ಗಿನ್ನಿಸ್ ದಾಖಲೆ ಮಾಡುತ್ತಿದ್ದಾರೆ. 16 ಬಜೆಟ್ ಮಂಡಿಸಿರುವ ಸಿದ್ದರಾಮಯ್ಯ 2 ಲಕ್ಷ ಕೋಟಿ ಸಾಲ ಮಾಡಿ ಎಲ್ಲರ ತಲೆ ಮೇಲೆ ಒಂದೂವರೆ ಲಕ್ಷ ಸಾಲ ಹೊರಿಸಿದ್ದಾರೆ. ಇದನ್ನು ಸದನದಲ್ಲಿ ಪ್ರಶ್ನಿಸಿದ ಬಿಜೆಪಿ ಶಾಸಕರನ್ನು 6 ತಿಂಗಳು ಉಚ್ಚಾಟನೆ ಮಾಡಿದ್ದಾರೆ. ರಾಜ್ಯದಲ್ಲಿ ರೈತರ ಆತ್ಮಹತ್ಯೆ ಹೆಚ್ಚಾಗುತ್ತಲೇ ಇದೆ. ಎಸ್‌ಸಿ, ಎಸ್ಟಿ ಸಮುದಾಯದ ಹಣವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಇದೆಲ್ಲದರಿಂದ ರಾಜ್ಯದ ಜನ ಪಾರಾಗಬೇಕಾದರೆ, ಬಿಜೆಪಿ ಮತ್ತೆ ಅಧಿಕಾರಕ್ಕೆ ಬರಬೇಕು. ಬಿಜೆಪಿ ಅಧಿಕಾರಕ್ಕೆ ಬಂದರೆ ರಾಮರಾಜ್ಯ ತರುತ್ತೇವೆ ಎಂದು ಘೋಷಣೆ ಮಾಡಿದರು.

ಸಿದ್ದರಾಮಯ್ಯ ಸರ್ಕಾರದ ಆಯಸ್ಸು ಜನಾಕ್ರೋಶ ಯಾತ್ರೆಯಿಂದ ಕಡಿಮೆಯಾಗುತ್ತೆ : ಛಲವಾದಿ ನಾರಾಯಣಸ್ವಾಮಿ




ಮೈಸೂರು, ಏ.7(ಎಂಕೆ)– ಕಾಂಗ್ರೆಸ್ ಹೈಕಮಾಂಡ್‌ಗೆ ಕಪ್ಪ ಕಾಣಿಕೆ ಕೊಡುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಈ ಸರ್ಕಾರದ ಆಯಸ್ಸು ಈ ಜನಾಕ್ರೋಶ ಯಾತ್ರೆಯಿಂದ ಕಡಿಮೆಯಾಗಲಿದೆ ಎಂದು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಲೇವಡಿ ಮಾಡಿದರು.

ಜನಾಕ್ರೋಶ ಯಾತ್ರೆಯನ್ನು ಮೈಸೂರು ರಾಜರ ಸನ್ನಿಧಿಯಿಂದ ಪ್ರಾರಂಭ ಮಾಡಿದ್ದೇವೆ. ಮುಖ್ಯಮಂತ್ರಿಗಳು ಕೂಡ ಇದೇ ಊರಿನವರು. ಮೊನ್ನೆ ಒಂದು ವೇದಿಕೆಯಲ್ಲಿ ಮೈಸೂರು ಮಹಾರಾಜರಿಗಿಂತ ಹೆಚ್ಚಿನ ಕಾರ್ಯಗಳನ್ನು ಮಾಡಿದ್ದೇನೆ ಎಂದು ಹೇಳಿಕೊಂಡಿದ್ದಾರೆ. ಹೌದಾ! ಶೇಮ್... ಸಿದ್ದರಾಮಯ್ಯನವರೇ... ಈ ರಸ್ತೆ(ಅಶೋಕ ರಸ್ತೆ) ನೀವು ಮಾಡಿದ್ದೀರಾ... ಕನ್ನಂಬಾಡಿ ನೀವು ಕಟ್ಟಿದ್ದೀರಾ... ಮೈಸೂರು ವಿಶ್ವವಿದ್ಯಾನಿಲಯವನ್ನ ನೀವು ಸ್ಥಾಪನೆ ಮಾಡಿದ್ದೀರಾ... ದಲಿತರಿಗೆ ಹಾಸ್ಟೆಲ್‌ಗಳನ್ನು ನೀವು ತೆರೆದಿದ್ದಿರಾ... ಮಾನ ಮರ್ಯಾದೆ ಇದೆಯಾ ನಿಮಗೆ ಎಂದು ವಾಗ್ದಾಳಿ ನಡೆಸಿದರು.

ಮಾನ ಮರ್ಯಾದೆ ಇದ್ದೋರು ಈ ತರ ಮಾತಾಡೋದಿಲ್ಲ ದೇವರಾಜ ಅರಸು ಅವರಿಗೂ ಹೋಲಿಕೆ ಮಾಡಿಕೊಳ್ಳುತ್ತಿದ್ದೀರಿ. ಆದರೆ ನೀವು ಅವರ ಕಾಲ ದೂಳಿಗೂ ಸಮ ಇಲ್ಲ. ಸೊಬಗಿನ ಮೈಸೂರು ರಾಜ ಮನೆತನ ಕೊಟ್ಟಿರುವಂತಹದ್ದು. ನೀವು 14 ಸೈಟು ಕದ್ದು ತಗೋತಿರಿ. ಕೇಳಿದರೆ, ಬಗ್ಗಲ್ಲ ಬಗ್ಗಲ್ಲ. ಅಂದು ರಾತ್ರೋರಾತ್ರಿ ಬಗ್ಗಿ ವಾಪಸ್ ಕೊಡ್ತಿರಿ... ಕೇಳಿದರೆ ಹೊಸ ಕಾನೂನು ಅಂತೆ. ಅವರ ಹೊಸ ಕಾನೂನು ಪ್ರಕಾರ ಕದಿಯಬಹುದಂತೆ.. ಸಿಕ್ಕಾಕ್ಕೊಂಡು ವಾಪಸ್ ಕೊಟ್ರೆ ಕೇಸ್ ಮಾಡುಂಗಿಲ್ಲವಂತೆ.. ಪಾಪ ಎಂದು ಕಾಲೆಳೆದರು.

ಒಗ್ಗಟ್ಟು ಪ್ರದರ್ಶಿಸಿದ ಬಿಜೆಪಿ ನಾಯಕರು



ಮೈಸೂರು: ಮೈಸೂರಲ್ಲಿ ನಡೆದ ಬಿಜೆಪಿ 'ಜನಾಕ್ರೋಶ ಯಾತ್ರೆ' ಪಕ್ಷದ ನಾಯಕರ ಒಗ್ಗಟ್ಟು ಪ್ರದರ್ಶನಕ್ಕೆ ವೇದಿಕೆಯಾಯಿತು. ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ನಿರಂತರ ವಾಗ್ದಾಳಿ ನಡೆಸುತ್ತಿದ್ದ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಬಣದಲ್ಲಿ ಗುರುತಿಸಿಕೊಂಡಿದ್ದ ಮಾಜಿ ಸಂಸದ ಪ್ರತಾಪ್ ಸಿಂಹ, ಯತ್ನಾಳ್ ಉಚ್ಚಾಟನೆ ಬಗ್ಗೆ ಬೇಸರ ವ್ಯಕ್ತಪಡಿಸಿದ್ದ ಅರವಿಂದ್ ಬೆಲ್ಲದ್, ಯತ್ನಾಳ್ ವರ್ತನೆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡದೆ ತಟಸ್ಥರಾಗಿದ್ದ ಸದಾನಂದಗೌಡರು, ಸಿ.ಟಿ.ರವಿ, ಮುರುಗೇಶ್ ನಿರಾಣಿ ಮತ್ತಿತರರು ಇಂದಿನ ಕಾರ್ಯಕ್ರಮದಲ್ಲಿ ಭಾಗವಹಿಸಿ, ಒಗ್ಗಟ್ಟು ಪ್ರದರ್ಶಿಸಿದರು.



ಬಿಜೆಪಿ 'ಜನಾಕ್ರೋಶ ಯಾತ್ರೆ' ಪ್ರತಿಭಟನಾ ಮೆರವಣಿಗೆ ವೇಳೆ ಮಾಜಿ ಸಂಸದ ಪ್ರತಾಪ್ ಸಿಂಹ ಅವರನ್ನು ಅವರ ಬೆಂಬಲಿಗರು ಹೆಗಲ ಮೇಲೆ ಹೊತ್ತು ಜೈಕಾರ ಹಾಕಿದರು.

ಮೇಲುಕೋಟೆಯಲ್ಲಿ ಅದ್ಧೂರಿ ವೈರಮುಡಿ ಉತ್ಸವ

ವಜ್ರಖಚಿತ ಚೆಲುವನಾರಾಯಣನನ್ನು ಕಣ್ತುಂಬಿಕೊಂಡ ಲಕ್ಷಾಂತರ ಭಕ್ತರು

ಮಂಡ್ಯ,ಏ.7(ಮೋಹನ್‌ರಾಜ್)– ವಿಶ್ವವಿಖ್ಯಾತ ಮೇಲುಕೋಟೆ ಚೆಲುವನಾರಾಯಣಸ್ವಾಮಿಯ ವೈರಮುಡಿ ಉತ್ಸವ ಅದ್ಧೂರಿಯಾಗಿ ನಡೆದಿದ್ದು, ಲಕ್ಷಾಂತರ ಭಕ್ತರು ಉತ್ಸವವನ್ನು ಕಣ್ತುಂಬಿಕೊಂಡರು.

ಮಂಡ್ಯ ಪಾಂಡವಪುರ ತಾಲೂಕಿನಲ್ಲಿರುವ ಐತಿಹಾಸಿಕ ಧಾರ್ಮಿಕ ಕ್ಷೇತ್ರ ಮೇಲುಕೋಟೆಯ ಚಲುವನಾರಾಯಣಸ್ವಾಮಿಯ ವೈರಮುಡಿ ಬ್ರಹ್ಮೋತ್ಸವ ಸೋಮವಾರ ರಾತ್ರಿ 8 ಗಂಟೆ ಸಮಯದಲ್ಲಿ ಆರಂಭವಾಯಿತು. ಮೇಲುಕೋಟೆಯ ರಾಜಬೀದಿಗಳಲ್ಲಿ ವೈಭವೋಪೇರಿತವಾಗಿ ಚೆಲುವನಾರಾಯಣನ ವೈರಮುಡಿ ಉತ್ಸವ ನಡೆಯಿತು. ಈ ಸಂದರ್ಭದಲ್ಲಿ ಭಕ್ತರಿಂದ ಚಲುವನಾರಾಯಣನಿಗೆ ಘೋಷವಾಕ್ಯ ಮೊಳಗಿದವು.

ಲಕ್ಷಾಂತರ ಭಕ್ತರು ಭಾಗಿ: ಮೇಲುಕೋಟೆ ವೈರಮುಡಿ ಉತ್ಸವಕ್ಕೆ ಪ್ರತಿ ಬಾರಿಯೂ ಲಕ್ಷಾಂತರ ಭಕ್ತರು ಆಗಮಿಸುತ್ತಾರೆ. ಈ ಬಾರಿಯೂ ಮಂಡ್ಯ, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಹಾಗೂ ಅಕ್ಕಪಕ್ಕದ ರಾಜ್ಯಗಳಾದ ತಮಿಳುನಾಡು, ಕೇರಳ, ಆಂಧ್ರದಿಂದಲೂ ಸಾವಿರಾರು ಭಕ್ತರು ಆಗಮಿಸಿ, ವೈರಮುಡಿ ಉತ್ಸವವನ್ನು ಕಣ್ತುಂಬಿಕೊಂಡರು. ಆಗಮಿಸುವ ಭಕ್ತರಿಗಾಗಿ ಮಂಡ್ಯ, ಮೈಸೂರು, ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಕಡೆಗಳಿಂದ 150ಕ್ಕೂ ಹೆಚ್ಚು ವಿಶೇಷ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿತ್ತು.

ಆಗಮಿಸುವ ಭಕ್ತರ ವಾಹನಗಳಿಗೆ ದೇವಾಲಯದಿಂದ ಸುಮಾರು ಎರಡು–ಮೂರು ಕಿಲೋ ಮೀಟರ್ ದೂರದಲ್ಲೇ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿತ್ತು. ಭಕ್ತರಿಗೆ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ, ಆಂಬುಲೆನ್ಸ್ ವ್ಯವಸ್ಥೆ, ಪ್ರಸಾದದ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಭಕ್ತಾದಿಗಳಿಗೆ ಮೂಲಸೌಕರ್ಯದ ಸಮಸ್ಯೆಯಾಗದಂತೆ ಜಿಲ್ಲಾಡಳಿತ ಕ್ರಮ ವಹಿಸಿತ್ತು.

ಯಾವುದೇ ಅಹಿತಕರ ಘಟನೆಯಾಗಬಾರದೆಂದು ದೇವಾಲಯದ ಆವರಣದಲ್ಲಿ ನೂರಕ್ಕೂ ಹೆಚ್ಚು ಸಿಸಿ ಕ್ಯಾಮೆರಾಗಳನ್ನು ಅಳವಡಿಸಲಾಗಿತ್ತು. ಒಬ್ಬ ಎಸ್ಪಿ, ಇಬ್ಬರು ಎಎಸ್ಪಿ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮಹಿಳೆಯರ ರಕ್ಷಣೆ, ಕಳ್ಳತನಕ್ಕೆ ಆಸ್ಪದ ಕೊಡದಂತೆ ಪೊಲೀಸರು ಕ್ರಮ ವಹಿಸಿದ್ದರು. ದಕ್ಷಿಣ ವಲಯ ಐಜಿಪಿ ಬೋರಲಿಂಗಯ್ಯ ಸಹ ಭೇಟಿ ನೀಡಿ, ಪರಿಶೀಲನೆ ನಡೆಸಿದರು.



ಮೇಲುಕೋಟೆಯಲ್ಲಿ ವೈಭವೋಪೇರಿತವಾಗಿ ಚೆಲುವನಾರಾಯಣನ ವೈರಮುಡಿ ಉತ್ಸವ ನಡೆಯಿತು.

ಕಂಗೊಳಿಸಿದ ಮೇಲುಕೋಟೆ: ವೈರಮುಡಿ ಉತ್ಸವದ ಹಿನ್ನೆಲೆಯಲ್ಲಿ ಮೇಲುಕೋಟೆಯ ದೇವಾಲಯ ಆವರಣ ಸೇರಿದಂತೆ ಇಡೀ ವಾತಾವರಣ ಕಂಗೊಳಿಸಿತ್ತು. ಅದರಲ್ಲೂ ದೇವಾಲಯದ ಬಳಿ ವಿಶೇಷ ಅಲಂಕಾರ ಜನರ ಕಣ್ಮನ ಸೆಳೆಯಿತು. ಜೊತೆಗೆ ಜನರು ವೈರಮುಡಿ ಉತ್ಸವವನ್ನು ಹತ್ತಿರದಿಂದ ವೀಕ್ಷಿಸಲಿ ಎಂದು ಉತ್ಸವ ಹೋಗುವ ಪ್ರತಿ ಬೀದಿಗಳಲ್ಲಿ ಒಟ್ಟು 9 ಬೃಹತ್ ಪರದೆಗಳನ್ನು ಅಳವಡಿಸಿ, ನೇರ ಪ್ರಸಾರಕ್ಕೆ ಅವಕಾಶ ಮಾಡಿಕೊಡಲಾಗಿತ್ತು.

ಜಕ್ಕನಹಳ್ಳಿಯಿಂದ ಮೇಲುಕೋಟೆವರೆಗೆ 7 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ದೀಪಾಲಂಕಾರ ತೋರಣ ಅಳವಡಿಸಲಾಗಿತ್ತು. ಸುಮಾರು 2 ಕಿಲೋ ಮೀಟರ್ ವರೆಗೂ ವೈವಿಧ್ಯಮಯ ದೀಪಾಲಂಕಾರದಿಂದ ರಾಜಬೀದಿ ಹಾಗೂ ಉತ್ಸವದ ಬೀದಿಗಳು ನಯನ ಮನೋಹರವಾಗಿ ಕಂಗೊಳಿಸುತ್ತಿತ್ತು.

ವೈರಮುಡಿ ಉತ್ಸವದಲ್ಲಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ, ಶಾಸಕರಾದ ಎ.ಬಿ.ರಮೇಶ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಡಿ. ರೇವಣ್ಣ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಜಿಲ್ಲಾಧಿಕಾರಿ ಡಾ.ಕುಮಾರ, ಜಿಪಂ ಸಿಇಓ ಕೆ.ಆರ್.ನಂದಿನಿ ಸೇರಿದಂತೆ ಹಲವು ಮಂದಿ ರಾಜಕಾರಣಿಗಳು, ಅಧಿಕಾರಿಗಳ ವರ್ಗ ಪಾಲ್ಗೊಂಡಿತ್ತು.

ದೇವಾಲಯದ ಆವರಣದಲ್ಲಿ ಆಭರಣಗಳ ಪರ್ಕಾವಣೆ: ಮಂಡ್ಯ ನಗರದ ಜಿಲ್ಲಾ ಖಜಾನೆಯಿಂದ ಆಗಮಿಸಿದ ವೈರಮುಡಿ ಪೆಟ್ಟಿಗೆಯನ್ನು ಜಿಲ್ಲಾಧಿಕಾರಿ ಡಾ.ಕುಮಾರ, ಧಾರ್ಮಿಕ ಮತ್ತು ದತ್ತಿ ಇಲಾಖೆಯ ಅಧಿಕಾರಿಗಳು ಹಾಗೂ ಸ್ಥಾನಿಕ ಅರ್ಚಕರ ಸಮ್ಮುಖದಲ್ಲಿ ಆಭರಣಗಳ ಪರ್ಕಾವಣೆ ಕಾರ್ಯ ನಡೆಯಿತು.

ವಜ್ರಖಚಿತ ವೈರಮುಡಿ, ರಾಜಮುಡಿ, ನಾಗಮಣಿ ಸೇರಿದಂತೆ ಅನೇಕ ಒಡವೆಗಳ ಪರ್ಕಾವಣೆ ಬಿಗಿ ಭದ್ರತೆಯಲ್ಲಿ ನಡೆಯಿತು. ಬಳಿಕ ಆಭರಣಗಳನ್ನು ಚೆಲುವನಾರಾಯಣನಿಗೆ ತೊಡಿಸಿ, ನಂತರ ದೇವಾಲಯದಿಂದ ಉತ್ಸವ ಮೂರ್ತಿಯನ್ನು ರಾತ್ರಿ ಎಂಟು ಗಂಟೆ ನಂತರ ಹೊರಗೆ ತರಲಾಯಿತು.

ಜಿಲ್ಲಾ ಖಜಾನೆಯಿಂದ ಹೊರಟ ವೈರಮುಡಿ: ಧಾರ್ಮಿಕ ಹಾಗೂ ಐತಿಹಾಸಿಕ ಮಹತ್ವ ಸಾರುವ ಮೇಲುಕೋಟೆ ಉತ್ಸವದ ಹಿನ್ನೆಲೆಯಲ್ಲಿ ಸೋಮವಾರ ಮುಂಜಾನೆ ಏಳು ಗಂಟೆ ಸಮಯದಲ್ಲಿ ಮಂಡ್ಯ ನಗರದ ಜಿಲ್ಲಾ ಖಜಾನೆಯಲ್ಲಿ ಸಂಪ್ರದಾಯದಂತೆ ಪೂಜೆ ಸಲ್ಲಿಸಿ ವೈರಮುಡಿಯನ್ನು ಹೊರತೆಗೆಯಲಾಯಿತು. ಜಿಲ್ಲಾಧಿಕಾರಿ ಡಾ.ಕುಮಾರ ಹಾಗೂ ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರು ವೈರಮುಡಿಗಳ ಪೆಟ್ಟಿಗೆಗಳನ್ನು ಹೊತ್ತು ಮೆರವಣಿಗೆಯಲ್ಲಿ ಸಾಗಿದರು.

ಈ ವೇಳೆ ಜಿಪಂ ಸಿಇಓ ಕೆ.ಆರ್.ನಂದಿನಿ, ಎಡಿಸಿ ಶಿವಾನಂದಮೂರ್ತಿ ಸೇರಿದಂತೆ ಹಲವರು ಇದ್ದರು. ಬಳಿಕ ವಾಹನದಲ್ಲಿ ಪೆಟ್ಟಿಗೆ ಇರಿಸಿ ಮೇಲುಕೋಟೆ ಕಡೆಗೆ ಮೆರವಣಿಗೆ ಆರಂಭಿಸಲಾಯಿತು. ಇಲ್ಲಿಂದ ವೈರಮುಡಿಯು ಭಾರಿ ಭದ್ರತೆಯಲ್ಲಿ ನಗರದ ಲಕ್ಷ್ಮಿ ಜನಾರ್ದನ ದೇಗುಲದಲ್ಲಿ ಮೊದಲ ಪೂಜೆ ಸಲ್ಲಿಸಿ, ಬಳಿಕ ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಭದ್ರತಾ ವಾಹನದ ಮೂಲಕ ಶ್ರೀರಂಗಪಟ್ಟಣದ ಬನ್ನಿಮಂಟಪ, ಕಿರಂಗೂರು, ಪಾಂಡವಪುರ, ಹರಳಹಳ್ಳಿ, ಟಿ.ಎಸ್.ಛತ್ರ, ಅಮೃತಿ, ಚಕ್ಕನಹಳ್ಳಿ ಮಾರ್ಗವಾಗಿ ಮೇಲುಕೋಟೆ ತಲುಪಿತು.

ಈ ಸಂದರ್ಭದಲ್ಲಿ ಆಯಾಯ ತಾಲೂಕುಗಳ ಪ್ರವೇಶಿಸಿದಾಗ ಅಲ್ಲಿನ ಅಧಿಕಾರಿಗಳು, ಜನಪ್ರತಿನಿಧಿಗಳು, ಸ್ಥಳೀಯ ಮುಖಂಡರು ಹಾಗೂ ಸಾರ್ವಜನಿಕರು ವೈರಮುಡಿ ಪೆಟ್ಟಿಗೆ ಹೊತ್ತು, ಶ್ರದ್ಧಾಭಕ್ತಿಯಿಂದ ಚೆಲುವನಾರಾಯಣನನ್ನು ಸ್ಮರಿಸಿದರು.

ಪಾನಕ, ಮಜ್ಜಿಗೆ ವಿತರಣೆ: ನಿಗದಿತ ಸ್ಥಳಗಳಲ್ಲಿ ಚೆಲುವನಾರಾಯಣನ ಕಿರೀಟಕ್ಕೆ ಭಕ್ತರು ಪೂಜೆ ಸಲ್ಲಿಸಿದ ಬಳಿಕ ತಾಲೂಕು ಕಚೇರಿ ಆವರಣ, ಸಿದ್ಧಿಮಂಟಪ ಸೇರಿದಂತೆ ಹಲವಾರು ಕಡೆ ಭಕ್ತರು ಮತ್ತು ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ಹಾಗೂ ಕೋಸಂಬರಿ ವಿತರಿಸಲಾಯಿತು.

ವಿಠಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಚುನಾವಣೆ

ವಿ.ಡಿ.ಹರೀಶ್ ತಂಡಕ್ಕೆ ಪ್ರಚಂಡ ಜಯ



ಗೆಲುವು ಸಾಧಿಸಿದ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡುತ್ತಿರುವ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ.ಡಿ. ಹರೀಶ್.

ಕೆ.ಆರ್.ಪೇಟೆ: ತಾಲೂಕಿನ ಬೂಕನಕೆರೆ ಹೋಬಳಿಯ ವಿಠಲಾಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿ ನಿರ್ದೇಶಕರ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್–ಬಿಜೆಪಿ ಮೈತ್ರಿಕೂಟದ ಎಲ್ಲಾ 11 ನಿರ್ದೇಶಕರು ಜಯಗಳಿಸಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ವಿ.ಡಿ.ಹರೀಶ್, ವಿ.ಸಿ.ಪುಟ್ಟಸ್ವಾಮಿಗೌಡ,ವಿ ಎಸ್.ಯೋಗೇಶ್, ಉಮೇಶ್,ಮಹದೇಶ್, ಹಿಂದುಳಿದ ಎ ಮೀಸಲು ಕ್ಷೇತ್ರದಿಂದ ಚಿಕ್ಕೇಗೌಡ, ಬಿಸಿಎಂ ಬಿ.ಆರ್.ಸುರೇಶ್, ಮಹಿಳಾ ಮೀಸಲು ಕ್ಷೇತ್ರದಿಂದ ಇಂದ್ರಮ್ಮ ಸಣ್ಣತಮ್ಮೇಗೌಡ, ಸುಧಾ ಯೋಗೇಶ್, ಪರಿಶಿಷ್ಟಜಾತಿ ಕ್ಷೇತ್ರದಿಂದ ಚಲುವರಾಜು, ಸಾಲಗಾರರಲ್ಲದ ಕ್ಷೇತ್ರದಿಂದ ವಿ.ಆರ್.ಪುಟ್ಟರಾಜು ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ತಾಲೂಕು ಸಹಕಾರ ಅಭಿವೃದ್ಧಿ ಅಧಿಕಾರಿ ಹೆಚ್.ಬಿ.ಭರತ್ ಕುಮಾರ್, ಸಹ ಚುನಾವಣಾ ಅಧಿಕಾರಿಯಾಗಿ ಸಂಘದ ಸಿಇಓ ಎಂ.ಆರ್.ಪ್ರಶಾಂತ್ ಕಾರ್ಯನಿರ್ವಹಣೆ ಮಾಡಿದರು.

ನೂತನವಾಗಿ ಭರ್ಜರಿ ಗೆಲುವು ಸಾಧಿಸಿದ ನಿರ್ದೇಶಕರನ್ನು ಅಭಿನಂದಿಸಿ ಮಾತನಾಡಿದ ಡಿಸಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ವಿ.ಡಿ. ಹರೀಶ್, ನಮ್ಮ ತಂಡದ ಗೆಲುವಿಗೆ ಸಹಕಾರ ನೀಡಿದ ಸಂಘದ ವ್ಯಾಪ್ತಿಯ ಎಲ್ಲಾ ಸಹಕಾರಿ ಧುರೀಣರಿಗೆ, ಶಾಸಕ ಹೆಚ್.ಟಿ. ಮಂಜು, ಮಾಜಿ ಸಚಿವ ನಾರಾಯಣಗೌಡರು ಸೇರಿದಂತೆ ಜೆಡಿಎಸ್–ಬಿಜೆಪಿ ಮುಖಂಡರಿಗೆ ನಾನು ಹೃದಯಸ್ಪರ್ಶಿ ಕೃತಜ್ಞತೆಗಳನ್ನು ಸಲ್ಲಿಸುವುದಾಗಿ ತಿಳಿಸಿದರು.

ನಾನು 15 ವರ್ಷಗಳ ಕಾಲ ಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿ, ಅಧ್ಯಕ್ಷನಾಗಿ ಮಾಡಿರುವ ಪ್ರಾಮಾಣಿಕ ಸೇವೆಯಲ್ಲಿ ಯಾವುದೇ ತಪ್ಪು ಮಾಡಿಲ್ಲ. ಒಂದೇ ಒಂದು ರೂಪಾಯಿ ತಿಂದಿಲ್ಲ. ಚುನಾವಣಾ ಪೂರ್ವದಲ್ಲಿ ಸುಬ್ಬೇಗೌಡ ಮತ್ತು ಸೋಮೇಗೌಡ ಇವರು ಮಾಡಿರುವ ಆರೋಪವನ್ನು ದಾಖಲೆ ಸಮೇತ ಸಾಬೀತು ಮಾಡಿದ್ದಲ್ಲಿ ರಾಜಕೀಯ ನಿವೃತ್ತಿ ಘೋಷಣೆ ಮಾಡುವುದಾಗಿ ಆಕ್ರೋಶ ವ್ಯಕ್ತಪಡಿಸಿ ಸವಾಲು ಹಾಕಿದರು.

ಆಯ್ಕೆಯಾದ ನೂತನ ನಿರ್ದೇಶಕರನ್ನು ಶಾಸಕ ಆಪ್ತ ಸಹಾಯಕ ಅರಳಕುಪ್ಪೆ ಪ್ರತಾಪ್, ಶೈಲೇಂದ್ರ, ಪಟೇಲ್ ವಿ.ಡಿ.ಶಂಕರ್, ವಿ.ಸಿ. ವೆಂಕಟೇಶ್, ರಾಜಶೇಖರ್, ಹೋರಿ ದೇವೇಗೌಡ, ದ್ಯಾವರಸೇಗೌಡ, ಸೋಮಶೇಖರಯ್ಯ, ನಂದರಾಜಯ್ಯ, ವೀರಭದ್ರಯ್ಯ, ವಿ.ಡಿ.ಮೋಹನ್, ಚೇತನಕುಮಾರ್, ವೆಂಕಟೇಶ್, ದೊಡ್ಡನಕಟ್ಟೆ ಕಿರಣ್, ನಾರಾಯಣ್, ಶಾನುಭೋಗ್, ರಾಮು, ಶಿವಶಂಕರೇಗೌಡ, ಗೋವಿಂದೇಗೌಡ, ಐ.ಟಿ.ಸೋಮು, ನಾಗಣ್ಣ, ಚೇತು (ಶ್ರೀಕಂಠೇಗೌಡ), ಎ.ಎಂ ಕುಮಾರ್, ಕೂಡಲಕುಪ್ಪೆ ಗ್ರಾಮ ಪಂಚಾಯತಿ ಲೋಕೇಶ್, ದೂತ ಶಂಕರ್, ದೊಡ್ಡಣ್ಣನ ಶಂಕರ್, ಕಾಪನಹಳ್ಳಿ ನಾಗೇಶ್, ಪಾಪೇಗೌಡ ಮತ್ತಿತರರು ಅಭಿನಂದಿಸಿದರು.

ಶ್ರೀಮಾರಮ್ಮ ದೇವಾಲಯದಲ್ಲಿ ಚಿನ್ನಾಭರಣ, ಹುಂಡಿ ಕಳವು

ಭಾರತೀನಗರ, ಏ.7–ಇಲ್ಲಿಗೆ ಸಮೀಪದ ಮೆಳ್ಳಹಳ್ಳಿಯ ಶ್ರೀಮಾರಮ್ಮ ದೇವಾಲಯದಲ್ಲಿ ದೇವಿಗೆ ಹಾಕಲಾಗಿದ್ದ ಚಿನ್ನಾಭರಣ ಮತ್ತು ದೇವಾಲಯದಲ್ಲಿದ್ದ ಹುಂಡಿಯನ್ನು ಕಳವು ಮಾಡಿರುವ ಘಟನೆ ಜರುಗಿದೆ.

ದುಷ್ಕರ್ಮಿಗಳು ಹುಂಡಿಯಲ್ಲಿ ಸುಮಾರು 1 ಲಕ್ಷ ನಗದು, ಜೊತೆಗೆ ಮಾರಮ್ಮ ದೇವಿಗೆ ಹಾಕಲಾಗಿದ್ದ 700 ಗ್ರಾಂ ಬೆಳ್ಳಿ, 10 ಗ್ರಾಂ ಚಿನ್ನಾಭರಣವನ್ನು ದೋಚಿದ್ದಾರೆ.

ನಂತರ ಕೆ.ಪಿ.ದೊಡ್ಡಿ ಹೊರವಲಯದಲ್ಲಿ ಹಣವನ್ನು ತೆಗೆದುಕೊಂಡು ಹುಂಡಿಯನ್ನು ಬೀಸಾಡಿ ಪರಾರಿಯಾಗಿದ್ದಾರೆ.


ಮೆಡಿಕಲ್ ಸ್ಟೋರ್‌ನಲ್ಲಿ ದುಷ್ಕರ್ಮಿಗಳಿಂದ ಕಳ್ಳತನಕ್ಕೆ ಯತ್ನ: ಭಾರತೀನಗರದ ಶ್ರೀಹರಿ ಮೆಡಿಕಲ್ ಸ್ಟೋರ್‌ನಲ್ಲಿ ಕಳ್ಳತನಕ್ಕೆ ಯತ್ನ ನಡೆಸಿರುವ ಘಟನೆ ಜರುಗಿದೆ.

ಮೆಡಿಕಲ್ ಸ್ಟೋರ್ ಮಾಲೀಕ ಶಂಕರ್ ಎಂದಿನಂತೆ ಬೆಳಗ್ಗೆ ಬಾಗಿಲು ತೆರೆಯಲು ಬಂದಾಗ ಈ ಘಟನೆ ಬೆಳಕಿಗೆ ಬಂದಿದೆ.

ಮೆಡಿಕಲ್ ಸ್ಟೋರ್‌ಗೆ ಹಾಕಲಾಗಿದ್ದ ಬೀಗವನ್ನು ಹೊಡೆದಿದ್ದಾರೆ. ಆದರೆ ರೋಲಿಂಗ್ ಶಟರ್‌ನಲ್ಲಿ ಹಾಕಲಾಗಿದ್ದ ಬೀಗವನ್ನು ಹೊಡೆಯಲು ಆಗದೆ ಸ್ಥಳದಿಂದ ಪರಾರಿಯಾಗಿದ್ದಾರೆ. ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಇವೆರಡೂ ಪ್ರಕರಣಗಳು ದಾಖಲಾಗಿವೆ.

ರಾಜ್ಯ ಸರ್ಕಾರದಿಂದ ನನ್ನ ವಿರುದ್ಧ ದ್ವೇಷ ರಾಜಕಾರಣ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಆರೋಪ



ಮಂಡ್ಯ,ಏ.7– ರಾಜ್ಯ ಸರ್ಕಾರ ನನ್ನ ಮೇಲೆ ಗದಾ ಪ್ರಹಾರ ಮಾಡುತ್ತಿದ್ದು, ಕೇತಗಾನಹಳ್ಳಿಯಲ್ಲಿ ನಾನು ಜಮೀನು ಒತ್ತುವರಿ ಮಾಡಿದ್ದೇನೆಂದು ತನಿಖೆ ನಡೆಸುತ್ತಿದ್ದಾರೆ. ಮಾಜಿ ಮುಖ್ಯಮಂತ್ರಿಯಾಗಿ, ಕೇಂದ್ರ ಮಂತ್ರಿಯಾಗಿ, ಮಾಜಿ ಪ್ರಧಾನಿ ಮಗನಾಗಿ ನಾನು ಒತ್ತುವರಿ ಮಾಡಿಕೊಳ್ಳಬೇಕೇ? ಸರ್ಕಾರ ಯಾವ ತನಿಖೆ ಬೇಕಾದರೂ ಮಾಡಲಿ. ಬೇಕಿದ್ದರೆ ಅಮೇರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕೈಯಲ್ಲೇ ತನಿಖೆ ಮಾಡಿಸಲಿ ನಾನು ತಯಾರಿದ್ದೇನೆ ಎಂದು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಕಿಡಿಕಾರಿದರು.

ಸೋಮವಾರ ತಮ್ಮ ಕಚೇರಿಯಲ್ಲಿ ಜನತಾದರ್ಶನ ಮಾಡುವ ನಗರದ ಪ್ರವಾಸಿ ಮಂದಿರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಮ್ಮ ಕುಟುಂಬದ ವಿರುದ್ಧ ಷಡ್ಯಂತ್ರ ಮಾಡುವ ಮೂಲಕ ನನ್ನನ್ನು ಈ ಪರಿಸ್ಥಿತಿ ತಂದಿದ್ದೀರಿ, ನೀವು ಎಷ್ಟು ಕುಟುಂಬ ಹಾಳು ಮಾಡಿದ್ದೀರಿ. ನಾಡಿನ ಜನತೆ 5 ವರ್ಷದ ಅಧಿಕಾರ ನಿಮಗೆ ಕೊಟ್ಟರೆ ಬೆಲೆ ಏರಿಕೆ ಮಾಡಿ ಲೂಟಿ ಮಾಡುತ್ತಿದ್ದೀರಿ. ನಿಮ್ಮ ಲೂಟಿಯ ಬಗ್ಗೆ ದಾಖಲೆಗಳನ್ನು ಭದ್ರವಾಗಿ ಇಟ್ಟಿದ್ದೇನೆ. ನಾನು ಸಿಎಂ ಆಗಿದ್ದಾಗ ಕೊಟ್ಟ ಕಾರ್ಯಕ್ರಮ ಹೇಗಿತ್ತು. ಈಗ ರಾಜ್ಯದ ಕಥೆ ಏನಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದ ಅವರು, ನೀವು ಎಷ್ಟು ಜನರ ಮನೆ ಹಾಳು ಮಾಡಿದ್ದೀರಿ? ನೀವು ಬಳ್ಳಾರಿಯಲ್ಲಿ ಮಾಡಿರುವ ಅಕ್ರಮದ ಬಗ್ಗೆ ದಾಖಲೆ ಇದೆ. ಮಂಡ್ಯ ಜಿಲ್ಲೆಯ ಜನರು ಮುಂದಿನ ದಿನಗಳಲ್ಲಿ ನಾಡು ಉಳಿಯಬೇಕಾದರೆ ಒಳ್ಳೆಯ ವ್ಯಕ್ತಿಯನ್ನು ಅಧಿಕಾರಕ್ಕೆ ತನ್ನಿ ಎಂದು ಡಿಕೆಶಿ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ದ್ವೇಷದ ರಾಜಕಾರಣ ಈ ಸರ್ಕಾರದಲ್ಲಿ ನಡೆಯುತ್ತಿದೆ. ಅಧಿಕಾರವನ್ನು ದುರುಪಯೋಗ ಮಾಡುತ್ತಿರುವ ದಾಖಲೆ ಇದೆ. ನನ್ನ ವಿರುದ್ಧ ಯುದ್ಧ ಶುರು ಮಾಡಿದ್ದಾರೆ. ಸರ್ಕಾರದ ಅಕ್ರಮಗಳ ಬಗ್ಗೆ ಟನ್ ಗಟ್ಟಲೆ ದಾಖಲೆ ಇದ್ದು, ಕಳೆದ 2008 ರಿಂದ ಇಲ್ಲಿಯವರೆಗೆ ಅಕ್ರಮದ ಬಗ್ಗೆ ಧ್ವನಿ ಎತ್ತಿದ್ದೇನೆ. ನಾನು ಯುದ್ಧ ಸಾರುತ್ತೇನೆ ಅಂತ ಮಾತ್ರ ಹೇಳಿದ್ದು, ಗೃಹ ಸಚಿವ ಪರಮೇಶ್ವರ್ ಬಂದೂಕು ಹಿಡಿದು ಬರ್ತಾರಾ ಅಂತ ಕೇಳುತ್ತಾರೆ. ನಾವು ಸರ್ವಜನಾಂಗದ ಶಾಂತಿ ತೋಟದಿಂದ ಬಂದವರು. ಬಂದೂಕು ಬಳಸುವ ವೃತ್ತಿ ನಮ್ಮದಲ್ಲ ಎಂದರು.

ಕರ್ನಾಟಕ ರಾಜ್ಯ ಸಿಡಿ, ಪೆನ್ ಡ್ರೈವ್ ತಯಾರಿಸುವ ಫ್ಯಾಕ್ಟರಿ ಅಂತ ಮಂತ್ರಿ ಹೇಳುತ್ತಾರೆ. ಈ ಬಗ್ಗೆ ಯಾವ ತನಿಖೆ ಮಾಡಿದ್ದೀರಿ? ಹಳ್ಳ ಹಿಡಿಸಿದ್ದೀರಿ. ನೀಚ ಕೆಲಸ ಮಾಡುವವರು ಯಾರೆಂಬುದು ಇಂತವರು ನನ್ನ ಬಗ್ಗೆ ಲಘುವಾಗಿ ಮಾತನಾಡುತ್ತಾರೆ ಎಂದು ಡಿಕೆಶಿ ವಿರುದ್ಧ ಪರೋಕ್ಷವಾಗ್ದಾಳಿ ನಡೆಸಿದರು.

ಬಿಜೆಪಿ ಜನಾಕ್ರೋಶಯಾತ್ರೆ ವಿಚಾರದ ಬಗ್ಗೆ ಮಾತನಾಡಿ, ಅವರು ಹೋರಾಟ ಮಾಡುತ್ತಿದ್ದಾರೆ. ನಾವು ಬೇರೆ ರೀತಿಯಲ್ಲಿ ಹೋರಾಟ ಮಾಡುತ್ತೇವೆ. ಎರಡೂ ಬಾರಿ ಸಿಎಂ ಆಗಿದ್ದಾಗಲು ಜನಪರ ಯೋಜನೆಯನ್ನು ನಾನು ಕೊಟ್ಟಿದ್ದೇನೆ. ರೈತರ ಸಾಲ ಮನ್ನಾ ಮಾಡಿದ್ದೇನೆ. ಮುಂದೆ ನಾಡಿನ ಜನತೆ ರಾಜ್ಯ ಉಳಿಸುವ ಕೆಲಸ ಮಾಡಿ ಎಂದು ಸರ್ಕಾರಕ್ಕೆ ಸಲಹೆ ನೀಡಿದರು.

ಮೂರನೇ ಪುಟದಿಂದ

ಬಿಜೆಪಿ ಜನಾಕ್ರೋಶ ಯಾತ್ರೆ

ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದ ಗೌಡ, ಮಾಜಿ ಉಪಮುಖ್ಯಮಂತ್ರಿಗಳಾದ ಡಾ.ಸಿ.ಎನ್.ಅಶ್ವತ್ಥ್ ನಾರಾಯಣ್, ಗೋವಿಂದ ಕಾರಜೋಳ, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಚಿವ ಶ್ರೀರಾಮುಲು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಟಿ.ಎಸ್.ಶ್ರೀವತ್ಸ, ಅರವಿಂದ್ ಬೆಲ್ಲದ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ, ಉಪಾಧ್ಯಕ್ಷರಾದ ಮುರುಗೇಶ್ ನಿರಾಣಿ, ರಾಜೇಂದ್ರ, ಬಿಜೆಪಿ ನಗರಾಧ್ಯಕ್ಷ ಎಲ್. ನಾಗೇಂದ್ರ, ಜಿಲ್ಲಾಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಮಾಜಿ ಸಂಸದ ಪ್ರತಾಪ್‌ಸಿಂಹ, ಹಿರಿಯ ವಕೀಲ ಎಸ್. ಅರುಣ್‌ಕುಮಾರ್, ಮಾಜಿ ಮೇಯರ್ ಸಂದೇಶ್‌ಸ್ವಾಮಿ, ರಾಜ್ಯ ಹಿಂದುಳಿದ ಮೋರ್ಚಾ ಅಧ್ಯಕ್ಷ ಆರ್. ರಘು ಕೌಟಿಲ್ಯ ಸೇರಿದಂತೆ ಅನೇಕ ಸ್ಥಳೀಯ ಮುಖಂಡರು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಕಾಂಗ್ರೆಸ್ ವಿರುದ್ಧ ಆಕ್ರೋಶ: ಮೆರವಣಿಗೆ ಮಾರ್ಗದುದ್ದಕ್ಕೂ ಬೃಹತ್ ಕಟೌಟ್‌ಗಳು, ಬಿಜೆಪಿ ಧ್ವಜಗಳನ್ನು ಅಳವಡಿಸಲಾಗಿತ್ತು. ಸಾವಿರಾರು ಕಾರ್ಯಕರ್ತರು ಪಕ್ಷದ ಚಿಹ್ನೆಯುಳ್ಳ ಕೇಸರಿ



ಮೈಸೂರಲ್ಲಿ ನಡೆದ ಬಿಜೆಪಿ 'ಜನಾಕ್ರೋಶ ಯಾತ್ರೆ'ಯಲ್ಲಿ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ಮುಖಂಡರೂ ಆದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಸೇರಿದಂತೆ ಹಲವು ಮುಖಂಡರು, ಕಾರ್ಯಕರ್ತರು ಭಾಗವಹಿಸಿದ್ದರು.

ಟೋಪಿ, ಶಲ್ಯ ಧರಿಸಿ, ಪಕ್ಷದ ಧ್ವಜ ಹಿಡಿದು ಪ್ರತಿಭಟನಾ ಮೆರವಣಿಗೆಯಲ್ಲಿ ಸಾಗಿದರು. 'ಓಲೈಕೆ ಪಿತಾಮಹ ಸಿದ್ದರಾಮಯ್ಯಗೆ ಧಿಕ್ಕಾರ', 'ಕಾಂಗ್ರೆಸ್ ಸರ್ಕಾರದಲ್ಲಿ ಹಾಲು ಹಾಲಾಹಲವಾಗುತ್ತಿದೆ, ಕರೆಂಟ್ ಶಾಕ್ ಹೊಡೆಯುತ್ತಿದೆ', 'ಹೋರಾಟ ಹೋರಾಟ ಕಾಂಗ್ರೆಸ್ ಸರ್ಕಾರ ತೊಲಗುವವರೆಗೂ ಹೋರಾಟ', 'ಅಲ್ಪಸಂಖ್ಯಾತರಿಗೆ ಕಾಂಗ್ರೆಸ್ ಬಹುಮಾನ ಉಳಿದವರಿಗೆ ಪಂಗನಾಮ', ಕಾಂಗ್ರೆಸ್ ಬಂದಿದೆ ಬೆಲೆ ಏರಿಕೆ ಗ್ಯಾರಂಟಿ ತಂದಿದೆ', 'ದಲಿತರಿಗೆ ಕಾಂಗ್ರೆಸ್ ಚೊಂಬು' ಎಂಬಿತ್ಯಾದಿ ಘೋಷಣಾ ಫಲಕಗಳನ್ನು ಪ್ರದರ್ಶಿಸಿ, ರಾಜ್ಯ ಸರ್ಕಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಪಕ್ಷದ ಸಾಂಸ್ಕೃತಿಕ ಪ್ರಕೋಷ್ಠದವರು ಕಾಂಗ್ರೆಸ್ ಸರ್ಕಾರವನ್ನು ಟೀಕಿಸುವ ಗೀಗಿ ಪದಕ್ಕೆ ನೃತ್ಯ ಹಾಗೂ ಕಿರು ನಾಟಕ ಪ್ರದರ್ಶಿಸಿದರು. ಮಾರ್ಗದುದ್ದಕ್ಕೂ ಅಲ್ಲಲ್ಲಿ ಪಟಾಕಿ ಸಿಡಿಸಲಾಯಿತು.

ರಸ್ತೆ ಬಂದ್, ಬಂದೋಬಸ್ತ್: ಜನಾಕ್ರೋಶ ಯಾತ್ರೆ ಹಿನ್ನೆಲೆಯಲ್ಲಿ ಪೊಲೀಸರು ಇರ್ವಿನ್ ರಸ್ತೆ ಸೇರಿದಂತೆ ಅಶೋಕ ರಸ್ತೆ ಸಂಪರ್ಕಿಸುವ ಎಲ್ಲಾ ರಸ್ತೆಗಳಲ್ಲಿ ವಾಹನ ಸಂಚಾರ ನಿರ್ಬಂಧಿಸಿ, ಭಾರೀ ಬಂದೋಬಸ್ತ್ ಮಾಡಿದ್ದರು. ಆದರೆ ಯಾತ್ರೆ ನಿಗದಿತ ಸಮಯಕ್ಕಿಂತ ಸುಮಾರು ಒಂದೂವರೆ ಗಂಟೆ ವಿಳಂಬವಾಗಿದ್ದರಿಂದ ಸಾರ್ವಜನಿಕರಿಗೆ ತೀವ್ರ ತೊಂದರೆ ಉಂಟಾಗಿತ್ತು. ಇರ್ವಿನ್ ರಸ್ತೆ, ಅಶೋಕ ರಸ್ತೆ ಮೂಲಕ ನಗರ ಬಸ್ ನಿಲ್ದಾಣಕ್ಕೆ ತೆರಳುತ್ತಿದ್ದ ಬಸ್‌ಗಳ ಮಾರ್ಗ ಬದಲಾವಣೆ ಮಾಡಿದ್ದರಿಂದ ಪ್ರಯಾಣಿಕರು ಆಯುರ್ವೇದ ಆಸ್ಪತ್ರೆ ಬಳಿಯೇ ಇಳಿದು ಗ್ರಾಮಾಂತರ ಬಸ್ ನಿಲ್ದಾಣಕ್ಕೆ ನಡೆದು ಸಾಗಿದರು.

ಮೇ 3ಕ್ಕೆ ಮುಕ್ತಾಯ: ಇಂದಿನಿಂದ ನಾಲ್ಕು ಹಂತಗಳಲ್ಲಿ ನಡೆಯಲಿರುವ ಜನಾಕ್ರೋಶ ಯಾತ್ರೆ ಮೇ 3 ರಂದು ಸಮಾರೋಪಗೊಳ್ಳಲಿದೆ. ಏ.12 ರವರೆಗೆ ಮೈಸೂರು, ಚಾಮರಾಜನಗರ, ಮಂಡ್ಯ, ಹಾಸನ, ಕೊಡಗು, ಚಿಕ್ಕಮಗಳೂರು, ಮಂಗಳೂರು, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳು, ಏ.15 ರಿಂದ 18 ರವರೆಗೆ ನಿಪ್ಪಾಣಿ, ಬೆಳಗಾವಿ, ಹುಬ್ಬಳ್ಳಿ, ಬಾಗಲಕೋಟೆ, ವಿಜಯಪುರ, ಕಲಬುರಗಿ ಮತ್ತು ಬೀದರ್, ಏ.21 ರಿಂದ 25 ರವರೆಗೆ ದಾವಣಗೆರೆ, ಹಾವೇರಿ, ಗದಗ, ಕೊಪ್ಪಳ, ಯಾದಗಿರಿ, ರಾಯಚೂರು, ಬಳ್ಳಾರಿ, ವಿಜಯನಗರ, ಚಿತ್ರದುರ್ಗ, ತುಮಕೂರು, ಏ.27 ರಿಂದ ಮೇ 3ರವರೆಗೆ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಮಹಾನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಜನಾಕ್ರೋಶ ಯಾತ್ರೆ ನಡೆಯಲಿದೆ.

ನಮ್ಮ ಹೋರಾಟ ಬೆಂಬಲಿಸಿ

ನೀಡುವ ಮೂಲಕ ಈ ಹೋರಾಟವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ದು, ಕಾಂಗ್ರೆಸ್ ಸರ್ಕಾರವನ್ನು ಕಿತ್ತುಹಾಕಬೇಕು ಎಂದರು.

48 ವಸ್ತುಗಳ ಬೆಲೆ ಏರಿಕೆ: ಗೃಹಲಕ್ಷ್ಮೀ ಹಣ ಏಕೆ ಕೊಟ್ಟಿಲ್ಲ ಎಂದು ಪ್ರಶ್ನಿಸಿದರೆ ಸಚಿವರಿಬ್ಬರು ಅದೇನು ಸಂಬಳವಾ ಎಂದು ಮರುಪ್ರಶ್ನೆ ಹಾಕಿದರು. ಹಾಗಾದರೆ ಡೀಸೆಲ್, ಹಾಲಿನ ದರ ಹೆಚ್ಚಳ ಮಾಡಿದ ಕೂಡಲೇ ಅನ್ವಯ ವಾಗಬೇಕಾ ಎಂಬುದಕ್ಕೆ ಉತ್ತರವಿಲ್ಲ. ಜನನ–ಮರಣ ಪ್ರಮಾಣ ಪತ್ರದ ದರವನ್ನೂ ಹೆಚ್ಚಿಸಿದ್ದಾರೆ. ಕಾಂಗ್ರೆಸ್ ಸರ್ಕಾರ ಬಂದ ಮೇಲೆ 48 ವಸ್ತುಗಳ ಬೆಲೆ ಏರಿಕೆ ಮಾಡಲಾಗಿದೆ. ದೇಶದ ಮತ್ತಾವ ರಾಜ್ಯದಲ್ಲೂ ಹೀಗೆ ಆಗಿಲ್ಲ. ಬೆಲೆ ಏರಿಕೆಯಿಂದಲೇ 75 ಸಾವಿರ ಕೋಟಿ ಸಂಗ್ರಹವಾಗುವ ನಿರೀಕ್ಷೆ ಇದೆ ಎನ್ನಲಾಗಿದೆ. ಒಂದು ಕಡೆ ಬೆಲೆ ಏರಿಕೆ, ಮತ್ತೊಂದೆಡೆ ಹಗರಣದಲ್ಲಿ ಮುಳುಗಿರುವ ಕಾಂಗ್ರೆಸ್, ಹಣಕ್ಕಾಗಿ ಬೇಕಾದ್ದನ್ನು ಮಾಡುತ್ತದೆ ಎಂದು ವಾಗ್ದಾಳಿ ನಡೆಸಿದರು. ಸುಳ್ಳ ಮುಖ್ಯಮಂತ್ರಿ ಹಾಗೂ ಮಳ್ಳ ಉಪಮುಖ್ಯಮಂತ್ರಿಗಳು, ಪ್ರಿಯಾಂಕ ವಾದ್ರಾ ಅವರ ಸೂಚನೆ ಮೇರೆಗೆ ಕೇರಳದಲ್ಲಿ ಆನೆ ದಾಳಿಯಿಂದ ಸತ್ತವನಿಗೆ 25 ಲಕ್ಷ ಪರಿಹಾರ ನೀಡಿದರು. ಕರ್ನಾಟಕದಲ್ಲಿ ಸತ್ತವರ ಮನೆಗೆ ಐದು ಲಕ್ಷ ನೀಡುತ್ತಾರೆ. ಅಭಿವೃದ್ಧಿ ಆಗಿಲ್ಲ ಎಂದು ಪೋಸ್ಟ್ ಹಾಕಿದ್ದಕ್ಕೇ ನಮ್ಮ ಕಾರ್ಯಕರ್ತನ ಮೇಲೆ ಎಫ್‌ಐಆರ್ ಮಾಡಿಸಿ, ಬೆದರಿಗೆ ಹಾಕಿ ಸಾವಿಗೆ ಕಾರಣರಾದರು. ಆದರೆ ಅವರ ಮೇಲೆ ಕೇಸ್ ಹಾಕಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಭಾರತವು ಜಗತ್ತಿನ ಐದನೇ ಆರ್ಥಿಕ ಶಕ್ತಿ ಹೊಂದಿರುವ ದೇಶವಾಗಿ ಬೆಳೆದಿದೆ. ತ್ರಿವಳಿ ತಲಾಕ್, ಆರ್ಟಿಕಲ್ 370 ರದ್ದುಗೊಳಿಸಿದಾಗ, ಸಿಎಎ ಜಾರಿಯಾದಾಗ ದೇಶದಲ್ಲಿ ಏನೇನೋ ಆಗುತ್ತದೆ ಎಂದು ಕಾಂಗ್ರೆಸ್‌ನವರು ಬೆದರಿಸಿದ್ದರು. ಆದರೆ ಅವರು ಹೇಳಿದಂತೆ ಏನೂ ಆಗಲಿಲ್ಲ. ಇದೀಗ ವಕ್ಫ್ ತಿದ್ದುಪಡಿ ಕಾಯ್ದೆಯ ವಾಸ್ತವ ಮುಸ್ಲಿಂ ಸಮುದಾಯದವರಿಗೆ ತಿಳಿದಿದೆ. ವಕ್ಫ್ ಆಸ್ತಿ ಲಪಟಾಯಿಸಿರುವವರಿಂದ ವಾಪಸ್ ಪಡೆದು, ಬಡವರಿಗೂ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶ ಅರ್ಥವಾಗಿದೆ. ಜೊತೆಗೆ ಕಾಂಗ್ರೆಸ್ ರಾಜಕೀಯವನ್ನೂ ಅರ್ಥ ಮಾಡಿಕೊಂಡಿದ್ದಾರೆ ಎಂದು ಹೇಳಿದರು.

ಸಿಲಿಂಡರ್ ಬೆಲೆ 50 ರೂ ಹೆಚ್ಚಳ

ಯೋಜನೆಯ ಹೊರತಾದ ಬಳಕೆದಾರರಿಗೆ 803ರಿಂದ 853ಕ್ಕೆ ಹೆಚ್ಚಾಗಲಿದೆ ಎಂದು ಪುರಿ ತಿಳಿಸಿದ್ದಾರೆ. ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಹೆಚ್ಚಿಸಿದೆ, ಆದರೆ, ಈ ಹೆಚ್ಚಳವನ್ನು ತೈಲ ಮಾರುಕಟ್ಟೆ ಕಂಪನಿಗಳು ಭರಿಸುತ್ತವೆ. ಹೀಗಾಗಿ ಗ್ರಾಹಕರಿಗೆ ಸುಂಕ ಅನ್ವಯವಾಗುವುದಿಲ್ಲ. ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕ ಹೆಚ್ಚಳ ಮಾಡಿದ್ದರೂ, ಅದರ ಬೆಲೆ ಹೆಚ್ಚಳವಾಗುವುದಿಲ್ಲ ಎಂದು ಕೇಂದ್ರ ಸಚಿವರು ತಿಳಿಸಿದ್ದಾರೆ.

ಮುಂದಿನ ಪೊಲೀಸ್ ಮಹಾ ನಿರ್ದೇಶಕ?

ದೆಹಲಿ ಮಟ್ಟದಲ್ಲಿ ಲಾಬಿ ನಡೆದಿದೆ. ಇವರ ಬಗ್ಗೆ ಸರ್ಕಾರಕ್ಕೆ ಆಸಕ್ತಿ ಇದ್ದಂತಿಲ್ಲ. 93ನೇ ಬ್ಯಾಚ್‌ನ ಐಪಿಎಸ್ ಅಧಿಕಾರಿ ಡಾ. ರಾಮಚಂದ್ರ ರಾವ್ ಬಗ್ಗೆ ಮೊದಲು ಒಲವಿತ್ತಾದರೂ, ಅವರು ರನ್ಯಾ ರಾವ್ ಪ್ರಕರಣದ ಹಿನ್ನೆಲೆಯಲ್ಲಿ ಕಡ್ಡಾಯ ರಜೆ ಮೇಲಿದ್ದಾರೆ. ಇದರ ನಡುವೆ ಸಲೀಂ ಅವರನ್ನು ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಕರೆಸಿಕೊಂಡು ಸಮಾಲೋಚನೆ ಮಾಡಿದ್ದಾರೆ. ತಮಗೆ ಈ ಹುದ್ದೆಯ ಅವಕಾಶ ತಪ್ಪಿದರೆ ಮುಂದಿನ 20 ವರ್ಷಗಳವರೆಗೆ ಅಲ್ಪಸಂಖ್ಯಾತ ವ್ಯಕ್ತಿಯೊಬ್ಬರಿಗೆ ಬೆಂಗಳೂರು ಪೊಲೀಸ್ ಕಮಿಷನರ್ ಅಥವಾ ಪೊಲೀಸ್ ಮಹಾನಿರ್ದೇಶಕರ ಹುದ್ದೆ ಲಭಿಸದು.

ಆದ್ದರಿಂದ ತಮಗೊಂದು ಅವಕಾಶ ಮಾಡಿಕೊಡಿ ಎಂದು ಮನವಿ ಮಾಡಿದ್ದಾರಂತೆ. ಸಿಐಡಿಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆಂಬ ಭಾವನೆ ಮುಖ್ಯಮಂತ್ರಿ ಹಾಗೂ ಗೃಹ ಸಚಿವರಲ್ಲಿದೆ, ಇವರಿಗೆ ಅವಕಾಶ ಮಾಡಿಕೊಡುವ ಮನಸ್ಸು ಇದ್ದಂತಿದೆ.

ಠಾಕೂರ್ ಅವರ ಹಿರಿತನವನ್ನು ಕಡೆಗಣಿಸಿ ಸಲೀಂ ಅವರಿಗೆ ಅವಕಾಶ ಮಾಡಿಕೊಡಬೇಕು. ಹಿಂದೆಲ್ಲಾ ಸರ್ಕಾರದ ಮುಖ್ಯಕಾರ್ಯದರ್ಶಿ ಹಾಗೂ ಪೊಲೀಸ್ ಮಹಾನಿರ್ದೇಶಕರ ಹುದ್ದೆಗೆ ಹಿರಿಯರನ್ನು ಕಡೆಗಣಿಸಿ, ಸರ್ಕಾರ ಮಧ್ಯಪ್ರವೇಶ ಮಾಡಿ ಕೆಳಗಿನವರಿಗೆ ಅಧಿಕಾರ ನೀಡಿದ ನಿದರ್ಶನಗಳಿವೆ.

ಸಲೀಂ ಜೊತೆಗೆ 93ನೇ ಬ್ಯಾಚ್‌ನಲ್ಲಿ ರಾಮಚಂದ್ರ ರಾವ್ ಅಲ್ಲದೆ, ಮಾಲಿನಿ ಕೃಷ್ಣಮೂರ್ತಿ, 94ನೇ ಬ್ಯಾಚ್‌ನ ಪ್ರಣಬ್ ಮೊಹಾಂತಿ ಇದ್ದಾರೆ.

ಡಿಜಿ–ಐಜಿ ಆಯ್ಕೆ ಪಟ್ಟಿಯಲ್ಲಿ ಐದು ಮಂದಿ ಇದ್ದು, ಒಬ್ಬರ ಆಯ್ಕೆ ನಿರ್ಧಾರವನ್ನು ಸರ್ಕಾರ ಕೈಗೊಳ್ಳಬೇಕಿದೆ.

ಸಲೀಂ ಅವರಿಗೆ ಸ್ಥಳೀಯರು ಎಂಬುದು ಮೊದಲ ಆದ್ಯತೆಯಾದರೆ, ಉಳಿದವರೆಲ್ಲರೂ ಹೊರ ರಾಜ್ಯದವರಾಗಿರುವುದರಿಂದ ಹೆಚ್ಚಿನ ಒಲವು ಇವರ ಕಡೆ ಇದ್ದಂತಿದೆ.

ಪ್ರಜ್ವಲ್ ರೇವಣ್ಣ ಮತ್ತೆ ಹೈಕೋರ್ಟ್‌ಗೆ ಜಾಮೀನು ಅರ್ಜಿ



ಬೆಂಗಳೂರು, ಏ.7– ಪ್ರಕರಣದ ಇತರ ಆರೋಪಿಗಳ ವಿರುದ್ಧದ ವಿಚಾರಣೆಗೆ ಮಧ್ಯಂತರ ತಡೆ ನೀಡಲಾಗಿದೆ ಎಂಬ ತಳಹದಿಯಲ್ಲಿ ನೀವೂ ಜಾಮೀನು ಕೋರಲು ಸಾಧ್ಯವಿಲ್ಲ ಎಂದು ಮನೆ ಕೆಲಸದಾಕೆಯ ಮೇಲಿನ ಅತ್ಯಾಚಾರ ಪ್ರಕರಣದ ಆರೋಪಿಯೂ ಆದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಗೆ ಹೈಕೋರ್ಟ್ ಸ್ಪಷ್ಟಪಡಿಸಿದೆ.

ಅತ್ಯಾಚಾರ ಆರೋಪದ ಮೊದಲ ಪ್ರಕರಣದಲ್ಲಿ ಎರಡನೇ ಬಾರಿ ಜಾಮೀನು ಕೋರಿ ಪ್ರಜ್ವಲ್ ರೇವಣ್ಣ ಸಲ್ಲಿಸಿರುವ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯೆರೂರ್ ಅವರು ಸೋಮವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಪ್ರಜ್ವಲ್ ಪರ ಪದಾಂಕಿತ ಹಿರಿಯ ವಕೀಲ ಪ್ರಭುಲಿಂಗ ಕೆ. ನಾವದಗಿ, ಆರೋಪಿತ ಅತ್ಯಾಚಾರ 2021ರಲ್ಲಿ ನಡೆದಿದೆ ಎನ್ನಲಾಗಿದ್ದು, ನಾಲ್ಕೂವರೆ ವರ್ಷಗಳ ಬಳಿಕ ದೂರು ದಾಖಲಿಸಲಾಗಿದೆ. ದೂರುದಾರರು ಇದಕ್ಕೆ ಯಾವುದೇ ವಿವರಣೆ ನೀಡಿಲ್ಲ. ಹೀಗಾಗಿ, ಅರ್ಜಿದಾರರನ್ನು ಜೈಲಿನಲ್ಲೇ ಇರುವಂತೆ ಮಾಡಲಾಗದು ಎಂದರು.

ಇದಕ್ಕೆ, ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್, ಪ್ರಜ್ವಲ್ ವಿರುದ್ಧ ನಾಲ್ಕು ಅತ್ಯಾಚಾರ ಪ್ರಕರಣ ದಾಖಲಾಗಿವೆ. ಇವರ ಜಾಮೀನು ಅರ್ಜಿ ಸುಪ್ರೀಂ ಕೋರ್ಟ್‌ನಲ್ಲೂ ತಿರಸ್ಕೃತವಾಗಿದೆ ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಇತರೆ ಆರೋಪಿಗಳ ವಿರುದ್ಧ ತಡೆಯಾಜ್ಞೆ ಇದ್ದರೂ ಮೇಲ್ನೋಟಕ್ಕೆ ಪ್ರಜ್ವಲ್ ವಿರುದ್ಧ ನಂಬಲರ್ಹ ಸಾಕ್ಷ್ಯಾಧಾರಗಳಿವೆ. ವಿಶೇಷ ಕಾರಣ ತೋರದ ಹೊರತು ಜಾಮೀನು ನೀಡಲಾಗುತ್ತದೆಯೇ ಎಂದು ಪ್ರಶ್ನಿಸಿತಲ್ಲದೆ, ಯಾವುದಕ್ಕೂ ನಿಮ್ಮ ವಾದ ಆಲಿಸಲಾಗುವುದು ಎಂದು ತಿಳಿಸಿತು. ಆಕ್ಷೇಪಣೆ ಸಲ್ಲಿಸುವಂತೆ ಪ್ರಾಸಿಕ್ಯೂಷನ್‌ಗೆ ಸೂಚಿಸಿ, ವಿಚಾರಣೆಯನ್ನು ಇದೇ 15ಕ್ಕೆ ಮುಂದೂಡಿತು.

ವಿಜಯೇಂದ್ರ ಕುರ್ಚಿ ಉಳಿಸಿಕೊಳ್ಳಲು ಯಾತ್ರೆ; ಇದರಲ್ಲಿ ಜನರ ಹಿತಾಸಕ್ತಿ ಏನೂ ಇಲ್ಲ

ಬೆಂಗಳೂರು, ಏ.7– ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ತಮ್ಮ ಕುರ್ಚಿ ಉಳಿಸಿಕೊಳ್ಳಲು ಜನಾಕ್ರೋಶ ಯಾತ್ರೆಯನ್ನು ಹಮ್ಮಿಕೊಂಡಿದ್ದಾರೆಯೇ ಹೊರತು ಇದರಲ್ಲಿ ಸಾರ್ವಜನಿಕ ಹಿತಾಸಕ್ತಿ ಇಲ್ಲ ಎಂದು ಸಿಎಂ ಸಿದ್ದರಾಮಯ್ಯ ಟೀಕಿಸಿದ್ದಾರೆ.

ಜನಾಕ್ರೋಶ ಯಾತ್ರೆ ಕೈಗೊಂಡಿರುವ ರಾಜ್ಯ ಬಿಜೆಪಿ ನಾಯಕರಿಗೆ ನಾನು ಶುಭ ಕೋರುತ್ತೇನೆ. ಒಂದು ಸಮರ್ಥ ವಿರೋಧ ಪಕ್ಷವಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗದ ವೈಫಲ್ಯ ಮತ್ತು ಕರ್ನಾಟಕಕ್ಕೆ ಕೇಂದ್ರ ಸರ್ಕಾರ ಮಾಡುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಲಾಗದ ಮನೆಮುರುಕುತನದ ಬಗ್ಗೆ ಆಕ್ರೋಶಗೊಂಡಿರುವ ರಾಜ್ಯದ ಜನರ ಮನಸ್ಸು ಅರಿಯಲು ಈ ಯಾತ್ರೆ ನೆರವಾಗಲಿ ಎಂದು ಹೃತ್ಪೂರ್ವಕವಾಗಿ ಹಾರೈಸುತ್ತೇನೆ.

ಇಷ್ಟೊಂದು ಅಸಮರ್ಥ, ನಿರ್ಲಜ್ಜ ಮತ್ತು ಜನವಿರೋಧಿ ವಿರೋಧ ಪಕ್ಷವನ್ನು ರಾಜ್ಯ ಎಂದೂ ಕಂಡಿಲ್ಲ. ಸ್ವಪಕ್ಷೀಯರೇ ಆರೋಪಿಸುವಂತೆ ಪೇಮೆಂಟ್ ಸೀಟ್‌ನಲ್ಲಿ ಕೂತಿರುವ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ರಾಜ್ಯ ಸರ್ಕಾರವನ್ನು ಪ್ರಶ್ನಿಸುವ ಯಾವ ನೈತಿಕತೆ ಇದೆ? ನಮ್ಮನ್ನು ಪ್ರಶ್ನಿಸುವ ಮೊದಲು ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಮತ್ತು ಅವರ ಶಾಸಕ ಮಿತ್ರರು ಕಳೆದ ಎರಡು ವರ್ಷಗಳಿಂದ ಮಾಡುತ್ತಿರುವ ಗಂಭೀರ ಸ್ವರೂಪದ ಆರೋಪಗಳಿಗೆ ಉತ್ತರಿಸುವ ದಮ್ಮು–ತಾಕತ್ ತೋರಿಸಲಿ. ವಿಜಯೇಂದ್ರ ವಿರುದ್ಧ ಸ್ವಪಕ್ಷೀಯರು ಮಾಡುತ್ತಿರುವ ಭ್ರಷ್ಟಾಚಾರದ ಆರೋಪಗಳು ಅವರ ಪಕ್ಷದ ಹೈಕಮಾಂಡಿಗೂ ಮನವರಿಕೆ ಯಾದಂತಿದೆ. ಪಕ್ಷದೊಳಗಿದ್ದು ಮಾಡುವ ಆರೋಪಗಳಿಂದ ಆಗುವ ಮುಜುಗರದಿಂದ ತಪ್ಪಿಸಿಕೊಳ್ಳಲು ಬಿಜೆಪಿ ಹೈಕಮಾಂಡ್



ಯತ್ನಾಳ್ ಅವರನ್ನು ಪಕ್ಷದಿಂದ ಹೊರಗೆ ಹಾಕಿ, ಅವರಿಂದ ಈಗ ಇನ್ನಷ್ಟು ಆರೋಪಗಳನ್ನು ಮಾಡಿಸುತ್ತಿದೆ. ಅಂತಿಮವಾಗಿ ವಿಜಯೇಂದ್ರ ಅವರನ್ನು ಅಧ್ಯಕ್ಷ ಸ್ಥಾನದಿಂದ ಕೆಳಗೆ ಇಳಿಸುವುದೇ ಬಿಜೆಪಿ ಹೈಕಮಾಂಡ್ ಉದ್ದೇಶವಾಗಿದೆ ಇದಕ್ಕಾಗಿ ವಿಜಯೇಂದ್ರ ತಮ್ಮ ಕುರ್ಚಿ ಉಳಿಸಿಕೊಳ್ಳಲು ಈ ಜನಾಕ್ರೋಶ ಯಾತ್ರೆ ಯನ್ನು ಹಮ್ಮಿಕೊಂಡಿದ್ದಾರೆ. ಯಾವ ಸಾರ್ವಜನಿಕ ಹಿತಾಸಕ್ತಿಯ ಸದುದ್ದೇಶ ಈ ಯಾತ್ರೆಗೆ ಖಂಡಿತ ಇಲ್ಲ. ವಿಜಯೇಂದ್ರ ಅವರು ತಮ್ಮ ಪಕ್ಷದ ನಾಯಕರು ಮತ್ತು ಕಾರ್ಯಕರ್ತರದ್ದು ಮಾತ್ರವಲ್ಲ ರಾಜ್ಯದ ಜನತೆಯ ವಿಶ್ವಾಸವನ್ನೂ ಕಳೆದುಕೊಂಡಿದ್ದಾರೆ.

ಗ್ಯಾರಂಟಿ ಯೋಜನೆಗಳ ಮೂಲಕ ರಾಜ್ಯದ ಬಜೆಟ್‌ನ 51,000 ಕೋಟಿ ರೂ. ಹಣ ನೇರವಾಗಿ ಫಲಾನುಭವಿಗಳನ್ನು ತಲುಪುತ್ತಿದ್ದು, ಅವರೆಲ್ಲರೂ ಸಂತುಷ್ಟರಾಗಿದ್ದಾರೆ. ಈಗ ಅವರು ಬೀದಿಗೆ ಬಂದು ನಮ್ಮ ಪರ ಘೋಷಣೆ ಹಾಕದೆ ಇರಬಹುದು, ಆದರೆ ಅವರೆಲ್ಲರ ಆಶೀರ್ವಾದ ನಮ್ಮ ಸರ್ಕಾರದ ಪರವಾಗಿದೆ. ಗ್ಯಾರಂಟಿ ಯೋಜನೆಗಳ ಯಶಸ್ಸನ್ನು ವಿಫಲಗೊಳಿಸಲು ರಾಜ್ಯಕ್ಕೆ ನ್ಯಾಯಬದ್ಧವಾಗಿ ಸಿಗಬೇಕಾದ ತೆರಿಗೆ ಪಾಲು ಮತ್ತು ಅನುದಾನಕ್ಕೆ ಕತ್ತರಿ ಹಾಕಿಸಿದ್ದಾರೆ. ರಾಜ್ಯದಿಂದ ನೀಡುತ್ತಿರುವ ಐದು ಲಕ್ಷ ಕೋಟಿ ರೂ. ತೆರಿಗೆ ಹಣದಲ್ಲಿ ಕೇವಲ 60,000 ಕೋಟಿ ರೂ. ಮಾತ್ರ ವಾಪಸು ನೀಡುತ್ತಿರುವ ಅನ್ಯಾಯದ ಬಗ್ಗೆ ಜನರ ಆಕ್ರೋಶದ ಬಿಸಿ ಕೂಡಾ ಬಿಜೆಪಿ ನಾಯಕರಿಗೆ ತಟ್ಟಲಿದೆ. ಕರ್ನಾಟಕದ ಜನರ ಹಿತರಕ್ಷಣೆಯ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇರುವುದಾದರೆ ಮೊದಲು ಪ್ರಧಾನಮಂತ್ರಿ ನಿವಾಸದ ಎದುರು ಹೋಗಿ ಪ್ರತಿಭಟನೆ ನಡೆಸಬೇಕು. ತೆರಿಗೆ ಪಾಲು, ಅನುದಾನ ಹಂಚಿಕೆಯಲ್ಲಿ ಮಾಡಿದ್ದಲ್ಲದೆ ಕ್ಷೇತ್ರ ಮರುವಿಂಗಡಣೆಗೆ ಹೊರಟಿದೆ. ರಾಜ್ಯದಿಂದ ಆರಿಸಿಹೋಗಿರುವ ಬಿಜೆಪಿ ಸಂಸದರು ಇದರ ವಿರುದ್ಧ ದನಿ ಎತ್ತದೆ ಕೇಂದ್ರದ ಗುಲಾಮರಂತೆ ವರ್ತಿಸುತ್ತಿದ್ದಾರೆ. ವೈಯಕ್ತಿಕವಾಗಿ ನಾನು ರಾಜ್ಯದಲ್ಲಿ ರಚನಾತ್ಮಕವಾಗಿ ಕಾರ್ಯನಿರ್ವಹಿಸುವ ಸಮರ್ಥ ವಿರೋಧ ಪಕ್ಷ ಇರಬೇಕೆಂದು ಬಯಸುವವನು. ಬಿಜೆಪಿಯವರಂತೆ ರಾಜ್ಯ ಬಿಜೆಪಿ ಮುಕ್ತ ಆಗಬೇಕೆಂದು ಬಯಸುವಷ್ಟು ಕೆಟ್ಟ ಮನಸ್ಸು ನನಗಿಲ್ಲ. ನಮ್ಮ ಆಡಳಿತದಲ್ಲಿ ತಿಳಿದೋ, ತಿಳಿಯದೆಯೋ ತಪ್ಪುಗಳಾಗಿದ್ದರೆ ಅದನ್ನು ನಮ್ಮ ಗಮನಕ್ಕೆ ತರುವುದು ವಿರೋಧ ಪಕ್ಷದ ಮುಖ್ಯ ಕರ್ತವ್ಯ. ಆದರೆ ರಾಜ್ಯದಲ್ಲಿರುವ ವಿರೋಧ ಪಕ್ಷ ತನ್ನ ಒಳಜಗಳ ಮತ್ತು ಅಸಾಮರ್ಥ್ಯದಿಂದ ರಾಜ್ಯದ ಜನತೆ ಎದುರು ನಗೆಪಾಟಲಿಗೀಡಾಗಿದೆ ಎಂದು ಸಿದ್ದರಾಮಯ್ಯ ವಾಗ್ದಾಳಿ ನಡೆಸಿದ್ದಾರೆ.

ಸರ್ಕಾರಗಳು ಜನರ ಆರೋಗ್ಯಕ್ಕೆ ಮೊದಲ ಪ್ರಾಶಸ್ತ್ಯ ನೀಡಬೇಕು

ಹಿರಿಯ ಸಲಹಾ ವೈದ್ಯ ಡಾ.ಪ್ರೇಮನಾಥ್



ಮೈಸೂರಿನ ಸುಯೋಗ್ ಆಸ್ಪತ್ರೆ ಆವರಣದಲ್ಲಿ ಸುಯೋಗ್ ಆಸ್ಪತ್ರೆ, ಕಾಲೇಜ್ ಆಫ್ ನರ್ಸಿಂಗ್ ವತಿಯಿಂದ ವಿಶ್ವ ಆರೋಗ್ಯ ದಿನ ಆಚರಿಸಲಾಯಿತು.

ಮೈಸೂರು: ಪ್ರತಿ ವರ್ಷ ದೇಶದಲ್ಲಿ 20 ಲಕ್ಷ ಮಕ್ಕಳು ಹುಟ್ಟಿದ ತಕ್ಷಣ ಸಾಯುತ್ತಿವೆ. ಲಕ್ಷಾಂತರ ಮಹಿಳೆಯರು ಹೆರಿಗೆ ಸಮಯದಲ್ಲಿ ಮೃತಪಡುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ ಅಲ್ಲ. ಆಳುವ ಸರ್ಕಾರಗಳು ಜನರ ಆರೋಗ್ಯಕ್ಕೆ ಮೊದಲ ಪ್ರಾಶಸ್ತ್ಯ ನೀಡಬೇಕು ಎಂದು ಹಿರಿಯ ಸಲಹಾ ವೈದ್ಯ ಡಾ.ಪ್ರೇಮನಾಥ್ ಹೇಳಿದರು.

ಸೋಮವಾರ ರಾಮಕೃಷ್ಣನಗರದಲ್ಲಿರುವ ಸುಯೋಗ್ ಆಸ್ಪತ್ರೆ ಆವರಣದಲ್ಲಿ ಸುಯೋಗ್ ಆಸ್ಪತ್ರೆ, ಕಾಲೇಜ್ ಆಫ್ ನರ್ಸಿಂಗ್ ವತಿಯಿಂದ ಏರ್ಪಡಿಸಿದ್ದ ವಿಶ್ವ ಆರೋಗ್ಯ ದಿನಾಚರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಯುವಕರು, ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ಸರಿಯಿಲ್ಲದಿದ್ದಲ್ಲಿ ಯಾವ ದೇಶದ ಸಾಮಾಜಿಕ, ಆರ್ಥಿಕ ಆರೋಗ್ಯವೂ ಸರಿಯಿರುವುದಿಲ್ಲ. ಇಂದು ಎಲ್ಲೆಡೆ ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡ ಆಸ್ಪತ್ರೆಗಳಿದ್ದರೂ ರಸ್ತೆಯಲ್ಲಿಯೇ ಹೆರಿಗೆ ಆಗುವ ಪ್ರಕರಣಗಳು ನಿಂತಿಲ್ಲ ಎಂದು ವಿಷಾದಿಸಿದರು.

ಬಿಜೆಪಿ ಮುಖಂಡ ಕೌಟಿಲ್ಯ ಆರ್.ರಘು ಮಾತನಾಡಿ, ಇಂದು ಒತ್ತಡದ ಬದುಕನ್ನು ನಾವೇ ಸೃಷ್ಟಿ ಮಾಡಿಕೊಂಡ ಕಾರಣ ಸಾಕಷ್ಟು ಮಂದಿ ಅನಾರೋಗ್ಯದ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಮಾನಸಿಕ ಆರೋಗ್ಯವನ್ನು ನಾವು ಸೃಷ್ಟಿ ಮಾಡಿಕೊಂಡಲ್ಲಿ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಬಹುದು ಎಂದರು.

ಮೊದಲು ಆಸ್ಪತ್ರೆಗೆ ಹೋಗುವುದು ಎಂದರೆ ಅವಮಾನ ಎಂಬಂತಿತ್ತು. ಆದರೀಗ ಈ ದಿನ ಔಷಧವನ್ನು ತೆಗೆದುಕೊಂಡಿಲ್ಲ ಎಂದು ಚಿಂತಿಸುವವರೇ ಹೆಚ್ಚಿದ್ದಾರೆ. ಹೃದಯ ಕಾಯಿಲೆ, ಮಧುಮೇಹ, ರಕ್ತದೊತ್ತಡ ಇಂದು ಸಾಕಷ್ಟು ಜನರನ್ನು ಕಾಡುತ್ತಿದೆ. ಸಹಜ ನಗು, ದೈಹಿಕ ಚಟುವಟಿಕೆಗೆ ಒತ್ತು ಕೊಟ್ಟಲ್ಲಿ ಎಲ್ಲರೂ ಆರೋಗ್ಯವಂತರಾಗಿರಬಹುದು ಎಂದರು.

ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಯೋಗಣ್ಣ, ಉತ್ತಮ ಆರೋಗ್ಯ ಎಂದಲ್ಲಿ ಕೇವಲ ರೋಗರಹಿತ ಜೀವನ ಎಂಬುದು ಸರಿಯಿಲ್ಲ. ಮಾನಸಿಕ, ದೈಹಿಕ, ಸಾಮಾಜಿಕ, ಆಧ್ಯಾತ್ಮಿಕವಾಗಿ ಯಾರು ಸುಸ್ಥಿತಿಯಲ್ಲಿ ಇರುತ್ತಾನೋ ಆತ ಪರಿಪೂರ್ಣ ಅರೋಗ್ಯವಂತ ಎಂದು ಪರಿಗಣಿಸಲಾಗುತ್ತದೆ ಎಂದರು.

ಜನರಲ್ಲಿ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ಉದ್ದೇಶದಿಂದ 1984ರಲ್ಲಿ ವಿಶ್ವ ಆರೋಗ್ಯ ದಿನವನ್ನು ಆರಂಭಿಸಲಾಯಿತು. ಯುವ ಜನರು ಸರ್ಕಾರವನ್ನು ನೆಚ್ಚಿಕೊಳ್ಳದೆ ತಮ್ಮ ಆರೋಗ್ಯದ ಬಗ್ಗೆ ತಾವೇ ಕಾಳಜಿ ವಹಿಸಬೇಕು. ದೈಹಿಕ ಹಾಗೂ ಮಾನಸಿಕವಾಗಿ ಸದೃಢರಾಗಬೇಕು ಎಂದರು. ಕಾರ್ಯಕ್ರಮದಲ್ಲಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಸುಯೋಗ್, ಸುಧಾ ಯೋಗಣ್ಣ, ಡಾ.ಸೀಮಾ, ಡಾ.ಆರ್.ರಾಜೇಂದ್ರ ಪ್ರಸಾದ್ ಮುಂತಾದವರು ಹಾಜರಿದ್ದರು.

ರಾಮನಾಮ ಲಿರಿಕಲ್ ಗೀತೆ ಬಿಡುಗಡೆ

ಮೈಸೂರು,ಏ.7(ಜಿಎ)–ರಾಮನವಮಿ ಪ್ರಯುಕ್ತ ರಾಮನ ಕುರಿತಾದ "ರಾಮನಾಮ" ಲಿರಿಕಲ್ ಗೀತೆಯನ್ನು ರೋಲಿಂಗ್ ಮೀಡಿಯಾ ಹೌಸ್ 24 ಯೂಟ್ಯೂಬ್ ಚಾನೆಲ್‌ನಲ್ಲಿ ಶನಿವಾರ ಸಂಜೆ ಬಿಡುಗಡೆ ಮಾಡಲಾಗಿದ್ದು, ಈ ಗೀತೆ ಈಗಾಗಲೇ ಸಾವಿರಾರು ಜನರಿಂದ ಮೆಚ್ಚುಗೆಯನ್ನು ಗಳಿಸಿದೆ ಎಂದು ನಿರ್ದೇಶಕ ಸತೀಶ್ ಪೊನ್ನಾಚಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ 'ರಾಮನಾಮ' ಗೀತೆಗೆ ಸಾಹಿತ್ಯವನ್ನು ಅರಸಿಕೆರೆಯ ಎಂ.ಎ. ಮಂಜುನಾಥ ರಾವ್ ಸಂಗೀತ ಮತ್ತು ಗಾಯನವನ್ನು ಕಲ್ಕಿ ಅಭಿಷೇಕ್ ಡಿ ಆರ್, ಸಂಕಲನವನ್ನು ಪುಜಿತ್ ಜಿಗಣಿ ಅವರು ನಿರ್ವಹಿಸಿದ್ದಾರೆ. ಹಾಗೆಯೇ ನಿರ್ಮಾಣವನ್ನು ರೋಲಿಂಗ್ ಮೀಡಿಯಾ ಹೌಸ್, ಸಹ ನಿರ್ಮಾಣವನ್ನು ಮಂಜುಸ್ವಾಮಿ (ಸೃಜನ ಮೀಡಿಯಾ ಹೌಸ್) ಪೋಸ್ಟ್ ಪ್ರೊಡಕ್ಷನ್ ಮೈಸೂರು ಫಿಲಂ ಇನ್‌ಸ್ಟಿಟ್ಯೂಟ್ ಮಾಡಿದ್ದು, ಈ ಹಾಡಿಗೆ ನೆಲ್ಲಿಮನೆ ಸ್ಟುಡಿಯೋ, ನಕ್ಷತ್ರ ಫೌಂಡೇಶನ್ ಮತ್ತು ಎಸ್‌ಆರ್ ಆಕ್ಟಿವಿಟಿ ಸೆಂಟರ್ ಸಹಕಾರ ನೀಡಿದ್ದಾರೆ. ರಾಮನಾಮ ಗೀತೆಯನ್ನು ಇನ್ನೂ ಹೆಚ್ಚಿನ ಜನರಿಗೆ ತಲುಪಿಸಬೇಕಾಗಿದೆ. ಮುಂದಿನ ದಿನಗಳಲ್ಲಿ ಈ ಹಾಡನ್ನು ವೀಡಿಯೋ ಗೀತೆ ಮಾಡುವ ಉದ್ದೇಶವಿದೆ. ಅದಕ್ಕೆ ಸಹಕಾರ ನೀಡುವವರು ದೂರವಾಣಿ 9686434095 ಅನ್ನು ಸಂಪರ್ಕಿಸಬಹುದೆಂದರು.

ಸುದ್ದಿಗೋಷ್ಠಿಯಲ್ಲಿ ಡಿ.ಆರ್.ಕಲ್ಕಿ ಅಭಿಷೇಕ್, ಸುಜಿತ್ ಜಿಗಣಿ, ಮಹದೇವ ಪ್ರಸಾದ್, ಧನುಷ್ ಉಪಸ್ಥಿತರಿದ್ದರು.

ಇಂದು ವಿಪ್ರರ ಸಂಘಟನಾ ಸಭೆ

ಮೈಸೂರು: ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ವತಿಯಿಂದ ವಿಪ್ರರ ಸಂಘಟನಾ ಸಭೆ ಹಾಗೂ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಚುನಾವಣೆ ಪ್ರಚಾರವನ್ನು ಅಗ್ರಹಾರದ ಶಂಕರ ಮಠದಲ್ಲಿ ಏಪ್ರಿಲ್ 8ರಂದು ಬೆಳಗ್ಗೆ 11 ಗಂಟೆಗೆ ಸಭೆಯನ್ನು ಆಯೋಜಿಸಲಾಗಿದೆ. ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಬ್ರಾಹ್ಮಣ ಅಭಿವೃದ್ಧಿ ಮಂಡಳಿ ನಿಕಟಪೂರ್ವ ಅಧ್ಯಕ್ಷ ಎಚ್.ಎಸ್.ಸಚ್ಚಿದಾನಂದಮೂರ್ತಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ರಾಜ್ಯ ಅಧ್ಯಕ್ಷೀಯ ಅಭ್ಯರ್ಥಿ ವೇದಬ್ರಹ್ಮ ಡಾ.ವಿ.ಭಾನುಪ್ರಕಾಶ್ ಶರ್ಮ, ಜಿಲ್ಲಾ ಪ್ರತಿನಿಧಿ ಸ್ಥಾನದ ಅಭ್ಯರ್ಥಿ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಕಡಕೊಳ ಜಗದೀಶ್, ಶಂಕರ್ ಮಠದ ಧರ್ಮಾಧಿಕಾರಿ ರಾಮಚಂದ್ರರಾವ್ ಹಾಗೂ ವಿವಿಧ ವಿಪ್ರ ಸಂಘಟನೆಗಳ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಪ್ಯಾಲೆಸ್ಟೀನ್ ಧ್ವಜ ಹಾರಿಸಿದ ಮುಸ್ಲಿಂ ಉದ್ಯೋಗಿ ವಜಾ

ಸಹರಾನ್‌ಪುರ: ಉತ್ತರಪ್ರದೇಶದ ಸಹರಾನ್‌ಪುರ ಜಿಲ್ಲೆಯಲ್ಲಿ ಈದ್ ಹಬ್ಬದಂದು ಪ್ಯಾಲೆಸ್ಟೀನ್ ಧ್ವಜ ಹಾರಿಸಿದ ಆರೋಪದ ಮೇಲೆ ವಿದ್ಯುತ್ ಇಲಾಖೆ ಗುತ್ತಿಗೆ ಕಾರ್ಮಿಕನನ್ನು ಸೇವೆಯಿಂದ ವಜಾಗೊಳಿಸಲಾಗಿದೆ.

ಕೈಲಾಶ್‌ಪುರ ಪವರ್ ಹೌಸ್‌ನಲ್ಲಿ ಕೆಲಸ ಮಾಡುತ್ತಿದ್ದ ಸಾಕಿಬ್ ಖಾನ್, ಮಾರ್ಚ್ 31ರಂದು ಈದ್ ನಮಾಜ್ ನಂತರ ಪ್ಯಾಲೆಸ್ಟೀನ್ ಧ್ವಜ ಪ್ರದರ್ಶಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಇಲಾಖೆಯು ಈ ಕ್ರಮವನ್ನು ರಾಷ್ಟ್ರವಿರೋಧಿ ಎಂದು ಪರಿಗಣಿಸಿದೆ. ಹೀಗಾಗಿ ಉದ್ಯೋಗಿಯನ್ನು ವಜಾಗೊಳಿಸಲಾಗಿದೆ ಎಂದು ವಿದ್ಯುತ್ ಇಲಾಖೆ ಕಾರ್ಯನಿರ್ವಾಹಕ ಎಂಜಿನಿಯರ್ ಸಂಜೀವ್‌ಕುಮಾರ್ ತಿಳಿಸಿದ್ದಾರೆ.

ಕೈಲಾಶ್‌ಪುರ ಪವರ್ ಹೌಸ್‌ನಲ್ಲಿ ಗುತ್ತಿಗೆ ಕೆಲಸಗಾರನಾಗಿದ್ದ ಸಾಕಿಬ್ ಖಾನ್, ಪ್ಯಾಲೆಸ್ಟೀನ್ ಧ್ವಜ ಹಿಡಿದು, ಅದರ ಚಿತ್ರವನ್ನು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದರು ಎಂದು ಕುಮಾರ್ ಹೇಳಿದ್ದಾರೆ.

ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಪ್ರಶಸ್ತಿ ಪ್ರದಾನ

ಮೈಸೂರು,ಏ.7(ಎಂಟಿವೈ)– ಶಾಲಾ–ಕಾಲೇಜು ತರಗತಿ ಕೊಠಡಿಯಲ್ಲಿ ದೇಶ ಭವಿಷ್ಯ ನಿರ್ಮಾಣವಾಗಬೇಕೇ ಹೊರತು ನಿರ್ನಾಮವಾಗಬಾರದು. ಅದಕ್ಕಾಗಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ದೇಶಸೇವೆಗೆ ಪೂರಕವಾದ ಶಿಕ್ಷಣ ನೀಡುತ್ತಿದೆ ಎಂದು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ಕಾರ್ಯದರ್ಶಿ ಗಂಗಪ್ಪ ಗೌಡ ತಿಳಿಸಿದ್ದಾರೆ.



ಮೈಸೂರಿನ ಸ್ಕೌಟ್ಸ್ & ಗೈಡ್ಸ್ ಸಂಸ್ಥೆಯ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವಿಧ ಶಾಲಾ–ಕಾಲೇಜುಗಳ ಅತ್ಯುತ್ತಮ ಕಬ್ಸ್–ಬುಲ್ ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಮೈಸೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಸಭಾಂಗಣದಲ್ಲಿ ಸೋಮವಾರ ನಡೆದ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ವಿವಿಧ ಶಾಲಾ–ಕಾಲೇಜುಗಳು ಅತ್ಯುತ್ತಮ ಕಬ್ಸ್–ಬುಲ್ ಬುಲ್, ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ಜೀವನದಲ್ಲಿ ಶಿಸ್ತು ಬಹಳ ಮುಖ್ಯ. ಸ್ವಾರ್ಥ ಮನೋಭಾವ ದೂರ ಸರಿಸಿ, ಸೇವಾ ಮನೋಭಾವ ಮೂಡಿಸುವ ನಿಟ್ಟಿನಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಶ್ರಮಿಸುತ್ತಿದೆ. ಆ ಮೂಲಕ ಸಮಾಜಕ್ಕೆ, ದೇಶಕ್ಕೆ ಆದರ್ಶ ವ್ಯಕ್ತಿಗಳನ್ನು ಕೊಡುಗೆ ನೀಡುವ ನಿಟ್ಟಿನಲ್ಲಿ ಶಿಕ್ಷಣ ನೀಡುತ್ತಿದೆ ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಗೆ ಸೇರುವ ಮಕ್ಕಳಿಗೆ ಮೂರು ವಿಷಯವನ್ನು ಪ್ರಮುಖವಾಗಿಸಿಕೊಂಡು ಪ್ರಮಾಣ (ಪ್ರಾಮಿಸ್)ದ ಮಹತ್ವ ಹೇಳಿಕೊಡಲಾಗುತ್ತದೆ. ದೇಶಕ್ಕಾಗಿ, ಬೇರೆ (ಸಮಾಜಕ್ಕಾಗಿ)ಯವರಿಗಾಗಿ ಹಾಗೂ ನನಗಾಗಿ ನನ್ನ ಕರ್ತವ್ಯ ಪಾಲನೆ ಮಾಡುತ್ತೇನೆ ಎಂದು ಪ್ರಮಾಣ ಮಾಡಿಸಲಾಗುತ್ತದೆ. ಇದರಿಂದ ಮಕ್ಕಳಲ್ಲಿ ಸೇವಾ ಮನೋಭಾವ ಉಂಟಾಗುತ್ತದೆ. ಅಲ್ಲದೆ, ಸ್ವಾರ್ಥ ಮನೋಭಾವನೆ ದೂರವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಎಲ್ಲಾ ಕಾರ್ಯದಲ್ಲೂ ಸ್ವಾರ್ಥ ಎದ್ದು ಕಾಣುತ್ತದೆ. ನನಗೇನು ಲಾಭ ಎಂದು ಕೇಳುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ನಿಸ್ವಾರ್ಥ ಹಾಗೂ ಸೇವಾ ಮನೋಭಾವವನ್ನು ಮಕ್ಕಳಲ್ಲಿ ಮೂಡಿಸುತ್ತಿದೆ ಎಂದು ತಿಳಿಸಿದರು.

ಪ್ರಾಮಿಸ್ ಎನ್ನುವುದು ಪಾಸಿಟಿವ್ ಥೆರಪಿಯೂ ಆಗಿದೆ. ಇದರಿಂದ 3ರಿಂದ 20 ವರ್ಷದ ಮಕ್ಕಳಿಗೆ ಪ್ರಾಮಿಸ್ ಮಾಡಿಸಲಾಗುತ್ತಿದ್ದೇವೆ. ಪೋಷಕರು ಮಕ್ಕಳಿಗೆ ಪ್ರಾಮಿಸ್ ಮಾಡಿ ಮನೆಯಿಂದ ಹೋದರೆ, ವಾಪಸ್ ಬರುವಾಗ ಅದರಂತೆ ನಡೆದುಕೊಳ್ಳದಿದ್ದರೆ ನಮಗೆ ಗೌರವ ಸಿಗುವುದಿಲ್ಲ. ಹಾಗಾಗಿ ಉತ್ತಮ ನಡವಳಿಕೆ ಕಲಿಸುವ ನಿಟ್ಟಿನಲ್ಲಿ ಸಂಸ್ಥೆಯ 'ಪ್ರಾಮಿಸ್' ಮಕ್ಕಳ ಮನಸ್ಸಿನ ಮೇಲೆ ಒಳ್ಳೆಯ ಪರಿಣಾಮ ಬೀರುತ್ತಿದೆ ಎಂದು ತಿಳಿಸಿದರು.

ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯಲ್ಲಿ ಒಂದೇ ಕಾನೂನು, 9 ಪಾಯಿಂಟ್ಸ್ ಇದೆ. ಅವುಗಳಲ್ಲಿ ಸಂಸ್ಥೆಗೆ ಸೇರುವ ಮಕ್ಕಳು ವಿಶ್ವಾಸಾರ್ಹರು, ನಿಷ್ಠಾವಂತರು, ಬೇರೆಯವರೊಂದಿಗೆ ಬೆರೆಯವಬೇಕು, ಶಿಸ್ತು ಮೈಗೂಡಿಸಿಕೊಳ್ಳಬೇಕು. ಶಾಲೆಯಲ್ಲಿರುವ ಇತರ ಮಕ್ಕಳಿಗೂ ಮಾದರಿಯಾಗಬೇಕು. ಸಾರ್ವಜನಿಕರ ಆಸ್ತಿ ಕಾಪಾಡಬೇಕು, ಧೈರ್ಯವಂತರು, ಮಿತವ್ಯಯಿ ಆಗಿರಬೇಕು. ಕಾಯಾ ವಾಚಾ ಮನಸ್ಸಾ ಪರಿಶುದ್ಧವಾಗಿರಬೇಕು ಎಂದು ಪ್ರಮಾಣ ಪತ್ರ ನೀಡಲಾಗುತ್ತದೆ. ಸಂಸ್ಥೆಯಲ್ಲಿ ಕಲಿತ ಮಕ್ಕಳು ಮನೆ, ಊರು, ಶಾಲೆಯಲ್ಲಿ ಆದರ್ಶ ವ್ಯಕ್ತಿಯಾಗಿ ಬದುಕಬೇಕು. ಇಲ್ಲಿ ಕಲಿತದ್ದನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ತಂದೆ, ತಾಯಿ, ಊರು, ಶಾಲೆ, ದೇಶಕ್ಕೆ ಆದರ್ಶವಾಗಬೇಕು ಎಂದು ಸಲಹೆ ನೀಡಿದರು.

ಪ್ರಶಸ್ತಿ ಪ್ರಮಾಣ ಪತ್ರ ವಿತರಣೆ: ಕಾರ್ಯಕ್ರಮದಲ್ಲಿ 2023–24ನೇ ಸಾಲಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಅತ್ಯುನ್ನತ ಪ್ರಶಸ್ತಿಯಾದ 'ರಾಜ್ಯ ಪುರಸ್ಕಾರ ಪ್ರಶಸ್ತಿ ಪ್ರಮಾಣ ಪತ್ರ'ವನ್ನು ಮೈಸೂರು ಜಿಲ್ಲೆಯ ವಿವಿಧ ಶಾಲೆಗಳ 78 ಕಬ್ಸ್, 69 ಬುಲ್ ಬುಲ್ಸ್, 108 ಸ್ಕೌಟ್ಸ್, 98 ಗೈಡ್ಸ್, 1 ರೋವರ್, 11 ರೇಂಜರ್ಸ್ ಸೇರಿದಂತೆ 365 ಮಕ್ಕಳಿಗೆ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಪಾಧ್ಯಕ್ಷೆ, ಮಾಜಿ ಉಪಮೇಯರ್ ಪುಷ್ಪವಲ್ಲಿ, ಸಹಾಯಕ ರಾಜ್ಯ ಆಯುಕ್ತ ಬಿ.ಕೆ.ಬಸವರಾಜು, ಜಿಲ್ಲಾ ಕಾರ್ಯದರ್ಶಿ ಅಬ್ದುಲ್ ಜಮೀಲ್, ಮಾಜಿ ಮೇಯರ್ ಪುಷ್ಪಲತಾ ಜಗನ್ನಾಥ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಸೌಜನ್ಯ ಅತ್ಯಾಚಾರ, ಕೊಲೆ ಪ್ರಕರಣ ಮರು ತನಿಖೆಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು,ಏ.7(ಎಂಟಿವೈ)– ಸೌಜನ್ಯ ಮೇಲಿನ ಅತ್ಯಾಚಾರ, ಕೊಲೆ ಪ್ರಕರಣ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲೂಕಿನಲ್ಲಿ ನಡೆದಿರುವ ಅಕ್ರಮಗಳ ಬಗ್ಗೆ ಸಮಗ್ರ ತನಿಖೆ ನಡೆಸಬೇಕೆಂದು ಆಗ್ರಹಿಸಿ ಮೈಸೂರಿನಲ್ಲಿ ಸಂಘ ಸಂಸ್ಥೆಗಳ ಒಕ್ಕೂಟದ ಕಾರ್ಯಕರ್ತರು ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.



ದಕ್ಷಿಣ ಕನ್ನಡ ಜಿಲ್ಲೆಯ ಸೌಜನ್ಯ ಹತ್ಯೆ ಪ್ರಕರಣದ ಸಮಗ್ರ ತನಿಖೆಗೆ ಆಗ್ರಹಿಸಿ ಸಂಘ ಸಂಸ್ಥೆಗಳ ಒಕ್ಕೂಟದ ಕಾರ್ಯಕರ್ತರು ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮೈಸೂರಿನ ಸಿದ್ಧಾರ್ಥನಗರದ ಬುದ್ಧ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಾ ಮೆರವಣಿಗೆ ಮೂಲಕ ಬಂದು ಧರಣಿ ನಡೆಸಿದರು.

ಸೌಜನ್ಯ ಪ್ರಕರಣ ಮುಚ್ಚಿ ಹಾಕುವ ಪ್ರಯತ್ನ ನಡೆಸುತ್ತಿರುವುದು ಖಂಡನೀಯ. ಸರ್ಕಾರ ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಿ ಮರುತನಿಖೆ ನಡೆಸಬೇಕು. ಮಾತ್ರವಲ್ಲದೆ ಧರ್ಮಸ್ಥಳದಲ್ಲಿ ಮತ್ತಷ್ಟು ಯುವತಿಯರ ಮೇಲೆ ಅತ್ಯಾಚಾರ, ಕೊಲೆ ನಡೆದಿರುವ ಬಗ್ಗೆ ಸಂಶಯವಿದೆ. ಹೀಗಾಗಿ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.

ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್ ಮಾತನಾಡಿ, ಸರ್ಕಾರ ಸೌಜನ್ಯ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಬೇಕು. ಸೌಜನ್ಯ ಪ್ರಕರಣದಲ್ಲಿ ನಿರ್ದೋಷಿಯನ್ನು ಆರೋಪಿಯನ್ನಾಗಿ ಮಾಡುವ ಷಡ್ಯಂತ್ರ ನಡೆಯುತ್ತಿದೆ. ಹೀಗಾಗಿ ಉನ್ನತ ಮಟ್ಟದ ತನಿಖೆಗೆ ಸೂಚಿಸಬೇಕು. ಕಳೆದ ಒಂದು ತಿಂಗಳಲ್ಲಿ ಮೈಸೂರಿನಲ್ಲೇ ಈ ವಿಚಾರವಾಗಿ 4ನೇ ಪ್ರತಿಭಟನೆ ನಡೆಯುತ್ತಿದ್ದು, ಸರ್ಕಾರ ಈ ವಿಷಯ ಗಂಭೀರವಾಗಿ ಪರಿಗಣಿಸುವವರೆಗೂ ಹೋರಾಟ ಮುಂದುವರೆಯಲಿದೆ ಎಂದು ಹೇಳಿದರು.

ಒಕ್ಕೂಟದ ಮುಖಂಡರಾದ ವಿ.ಪಿ. ಸುಶೀಲ ಮಾತನಾಡಿ, ಮಹಿಳಾ ಪರ ಎನ್ನುವ ರಾಜ್ಯ ಸರ್ಕಾರ ಸೌಜನ್ಯ ಪ್ರಕರಣಕ್ಕೆ ನ್ಯಾಯ ದೊರಕಿಸಿಕೊಡುವ ಕೆಲಸ ಮಾಡಬೇಕು. ಸೌಜನ್ಯರಂತೆಯೇ ಅನೇಕ ಯುವತಿಯರ ಮೇಲೆ ದೌರ್ಜನ್ಯ ನಡೆದಿರುವ ಬಗ್ಗೆ ಆರೋಪ ಕೇಳಿ ಬರುತ್ತಿದೆ. ಹೀಗಾಗಿ ಸಂಬಂಧಪಟ್ಟ ನ್ಯಾಯಾಂಗ ವ್ಯವಸ್ಥೆ ಮೂಲಕ ಪ್ರಕರಣ ತನಿಖೆಯಾಗಬೇಕು. ಕೇವಲ ಅತ್ಯಾಚಾರ ಮಾತ್ರವಲ್ಲದೆ, ಭೂ ಕಬಳಿಕೆ ಆರೋಪ ಸಹ ಕೇಳಿ ಬಂದಿದ್ದು ಈ ಬಗ್ಗೆಯೂ ತನಿಖೆಯಾಗಲಿದೆ ಎಂದರು.

ಒಕ್ಕೂಟದ ರಾಜ್ಯ ಸಂಘಟನಾ ಕಾರ್ಯದರ್ಶಿ ಎಂ.ಮಂಜುನಾಥ್ ಮಾತನಾಡಿ, ಸೌಜನ್ಯ ಸಾವಿಗೆ ನ್ಯಾಯ ದೊರಕಿಸಿಕೊಡುವ ಕೆಲಸ ಯಾವುದೇ ಸರ್ಕಾರ ಮಾಡಿಲ್ಲ. ಬಲಾಢ್ಯ ಶಕ್ತಿಗಳ ವಿರುದ್ಧ ಸರ್ಕಾರ ಮುಲಾಜಿಲ್ಲದೆ ಕ್ರಮ ಕೈಗೊಳ್ಳಬೇಕು. ಯಾವುದಾದರೂ ಸಚಿವ, ಅಧಿಕಾರಿಗಳ ಮಕ್ಕಳಿಗೆ ಅನ್ಯಾಯವಾದಾಗ ಇಡೀ ಸರ್ಕಾರ ಅವರ ಪರವಾಗಿ ನಿಲ್ಲುವಂತೆ ಸೌಜನ್ಯ ಪ್ರಕರಣದಲ್ಲಿಯೂ ವರ್ತಿಸಬೇಕು. ಆರೋಪಿತನಾಗಿ ಜೈಲು ಶಿಕ್ಷೆ ಅನುಭವಿಸಿದ ಸಂತೋಷ್ ನಿರಪರಾಧಿಯಾಗಿದ್ದು, ಆತನಿಗೆ ಸರ್ಕಾರದಿಂದಲೇ ಪರಿಹಾರ ಕಲ್ಪಿಸಬೇಕು, ಇಲ್ಲವಾದರೆ ರಾಜ್ಯವ್ಯಾಪಿ ನಮ್ಮ ಹೋರಾಟ ತೀವ್ರಗೊಳಿಸಲಾಗುವುದು ಎಂದು ಎಚ್ಚರಿಸಿದರು. ಪ್ರತಿಭಟನೆಯಲ್ಲಿ ಭುವನ್ ಫೌಂಡೇಶನ್ ಸಂಸ್ಥಾಪಕ ಚೇತನ್ ರಾಜ್, ಗೊರೂರು ಶಿವು, ಕರ್ನಾಟಕ ಭೀಮಸೇನೆ ರಾಜ್ಯಾಧ್ಯಕ್ಷ ಶಂಕರ್ ರಾಮಲಿಂಗಯ್ಯ, ಗೌರವಾಧ್ಯಕ್ಷ ಸಂಪತ್ ಕುಮಾರ್, ವಿದ್ಯಾರಣ್ಯಪುರಂ ಶ್ರೀ ಅಮರ ಜ್ಯೋತಿ ಕನ್ನಡ ಬಳಗದ ಹರೀಶ್‌ಗೌಡ, ಕರ್ನಾಟಕ ಮಾನವ ಹಕ್ಕುಗಳ ರಕ್ಷಣಾ ಸಮಿತಿ ಸುಶೀಲಾ, ಕನ್ನಡಾಂಬೇ ಅಧ್ಯಕ್ಷ ರಾಜಶೇಖರ್, ಡಿ.ಪಿ.ಕೆ.ಪರಮೇಶ್, ಕರ್ನಾಟಕ ಯುವ ರಕ್ಷಣಾ ಪಡೆಯ ಜಿಲ್ಲಾಧ್ಯಕ್ಷ ಸುಧಾಕರ್, ಕರ್ನಾಟಕ ದಲಿತ ಫ್ಯಾಂಥರ್ಸ್‌ನ ನರಸಿಂಹ, ಕಿರಣ್ ಕುಮಾರ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಲಯನ್ಸ್ ಪ್ರಾಂತೀಯ ಸಮ್ಮೇಳನ

ಮೈಸೂರು,ಏ.7– ಅಂತರರಾಷ್ಟ್ರೀಯ ಲಯನ್ಸ್ ಜಿಲ್ಲೆ 317ಜಿ ಪ್ರಾಂತ್ಯ 2ರ ಪ್ರಾಂತೀಯ ಸಮ್ಮೇಳನವನ್ನು ಏ.8ರಂದು ಮಂಗಳವಾರ ಬೆಳಗ್ಗೆ 9 ಗಂಟೆಯಿಂದ 1 ಗಂಟೆಯವರೆಗೆ ವಿಶ್ವೇಶ್ವರನಗರದ ಬಿಲ್ಡರ್ಸ್ ಅಸೋಸಿಯೇಷನ್ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂತೀಯ ಅಧ್ಯಕ್ಷ ಲಯನ್ ಕೆ.ಆರ್. ಭಾಸ್ಕರ ನಂದಾ ವಹಿಸಲಿದ್ದು, ಮುಖ್ಯ ಅತಿಥಿಯಾಗಿ ಡಾ.ಕಬ್ಬಿನಾಲೆ ವಸಂತ್ ಭಾರದ್ವಾಜ್, ಮುಖ್ಯ ಭಾಷಣಕಾರರಾಗಿ ಡಾ.ಕೆ.ಹರೀಶ್, ಡಾ.ಮೋನಿಕಾ ಭಾಸ್ಕರ್, ಮುಖ್ಯ ಅತಿಥಿಗಳಾಗಿ ಲಯನ್ ಕೆ.ದೇವೇಗೌಡ, ಮಾಜಿ ರಾಜ್ಯಪಾಲರು, ಅತಿಥೇಯ ಸಮಿತಿ ಸಲಹೆಗಾರ ಡಾ.ಎನ್. ಕೃಷ್ಣೇಗೌಡ, ಅಧ್ಯಕ್ಷೆ ಮಕಾಳ ಶಿವಕುಮಾರ್, ಮೆಂಟರ್ ಲಯನ್ ಟಿ.ಎಚ್. ವೆಂಕಟೇಶ್, ವಲಯ ಅಧ್ಯಕ್ಷ ಕಾಂತರಾಜು, ಲಯನ್ ಡಾ.ಮೈತ್ರೇಯಿ, ಕಾರ್ಯದರ್ಶಿ ಲಯನ್ ಎನ್.ರವಿಕುಮಾರ್, ಖಜಾಂಚಿ ಲಯನ್ ಜಯಪ್ರಕಾಶ್ ಉಪಸ್ಥಿತರಿರುವರು ಎಂದು ಲಯನ್ ಸಿ.ಆರ್.ದಿನೇಶ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕವಿ ಹೃದಯದಲ್ಲಿ ಸದ್ಭಾವನೆ ಮೂಡಿದಾಗ ಉತ್ಕೃಷ್ಟ ಕಾವ್ಯ ಸೃಷ್ಟಿ

ವಿಶ್ರಾಂತ ಕುಲಪತಿ ಡಾ.ಕೆ.ಚಿದಾನಂದಗೌಡ ಅಭಿಮತ

ಮೈಸೂರು: ಕಾವ್ಯ ಸಂಸ್ಕೃತಿಗೆ ಸಂಬಂಧಿಸಿದ್ದು. ಆದ್ದರಿಂದ ಕವಿ, ಕಾವ್ಯ ಮತ್ತು ಸಾಹಿತ್ಯಕ್ಕೆ ನಿಕಟವಾದ ಸಂಬಂಧವಿದೆ. ಕವಿ ಹೃದಯದಲ್ಲಿ ಸದ್ಭಾವನೆ ಮೂಡಿದಾಗ ಅತ್ಯಂತ ಉತ್ಕೃಷ್ಟವಾದ ಕಾವ್ಯ ಸೃಷ್ಟಿಯಾಗುತ್ತದೆ ಎಂದು ಕುವೆಂಪು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಕೆ. ಚಿದಾನಂದಗೌಡ ಅಭಿಪ್ರಾಯಪಟ್ಟರು.



ಮೈಸೂರಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಆಯೋಜಿಸಿದ್ದ 'ಯುಗಾದಿ ಕವಿ–ಕಾವ್ಯ ಸಂಭ್ರಮ'ದ ಸಮಾರೋಪದಲ್ಲಿ ಸಾಧಕರಿಗೆ 'ಸ್ವಾಮಿ ವಿವೇಕಾನಂದರ ಸದ್ಭಾವನಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ನಗರದ ವಿಜಯನಗರದಲ್ಲಿನ ಜಿಲ್ಲಾ ಕನ್ನಡ ಸಾಹಿತ್ಯ ಭವನದಲ್ಲಿ ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಸಾರಥ್ಯದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ವಿಸ್ಮಯ ಪ್ರಕಾಶನದ ಸಹಯೋಗದೊಂದಿಗೆ ಆಯೋಜಿಸಿದ್ದ 'ಯುಗಾದಿ ಕವಿ–ಕಾವ್ಯ ಸಂಭ್ರಮ'ದ ರಾಜ್ಯ ಮಟ್ಟದ ಕವಿಮೇಳದ ಸಮಾರೋಪದಲ್ಲಿ ಗಣ್ಯರಿಗೆ 'ಸ್ವಾಮಿ ವಿವೇಕಾನಂದರ ಸದ್ಭಾವನಾ ಪ್ರಶಸ್ತಿ' ಪ್ರದಾನ ಮಾಡಿ, ಮಾತನಾಡಿದರು.

ಸ್ವಾಮಿ ವಿವೇಕಾನಂದರಲ್ಲಿ 'ಸದ್ಭಾವನೆ' ಅಪಾರವಾಗಿತ್ತು. ಈ ಕಾರಣಕ್ಕೆ ಅವರ ಚಿಂತನೆ ಮತ್ತು ವಿಚಾರಗಳು ಎಲ್ಲ ಕಾಲಕ್ಕೂ ಪ್ರಸ್ತುತವಾಗಿವೆ. ದೇಶ, ಜಾತಿ, ಧರ್ಮ ಮೀರಿದ ವಿಶ್ವ ಸೋದರತ್ವ ಮತ್ತು ಸಹಿಷ್ಣುತಾ ಮನೋಭಾವ ಎಲ್ಲಾ ಕಾಲಕ್ಕೂ ಅಗತ್ಯವಾದುದ್ದು ಎಂದು ಸ್ವಾಮಿ ವಿವೇಕಾನಂದರು ಒಂದು ಶತಮಾನದ ಹಿಂದೆಯೇ ಪ್ರತಿಪಾದಿಸಿದ್ದರು ಎಂದು ಹೇಳಿದರು.

ಆದರೆ, ಪ್ರಸ್ತುತ ದಿನಮಾನಗಳಲ್ಲಿ ಜಗತ್ತಿನ ಉದ್ದಗಲ ಜಾತಿ–ಜಾತಿಗಳ, ಧರ್ಮ–ಧರ್ಮಗಳ, ವ್ಯಕ್ತಿ–ವ್ಯಕ್ತಿಗಳ ನಡುವೆ ಅಭಿಪ್ರಾಯ ಭೇದಗಳು ಹೆಚ್ಚಾಗುತ್ತಿವೆ. ಇದರಿಂದಾಗಿ ಜಾಗತಿಕ ಯುದ್ಧಗಳು ಮತ್ತು ಆಂತರಿಕ ಕೋಮು ಗಲಭೆಗಳು ನಡೆಯುತ್ತಿವೆ. ನಮ್ಮ ಅಭಿಪ್ರಾಯ ಭೇದಗಳ ನಡುವೆಯೂ ಪರಸ್ಪರ ಪ್ರೀತಿ, ಸೋದರತ್ವ ಹಾಗೂ ಧಾರ್ಮಿಕ ಸಹಿಷ್ಣುತೆ ಉಳಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ. ವಿಜಯಕುಮಾರ್, ಮೈಸೂರು ತನ್ನದೇ ಆದ ಸಾಂಸ್ಕೃತಿಕ ಅಸ್ಮಿತೆ ಹೊಂದಿದೆ. ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲೂ ಇರುವ ಪ್ರತಿಭೆಯ ಮೇರು ವ್ಯಕ್ತಿತ್ವಗಳು ದೇಶದ ಯಾವಾ ಭಾಗದಲ್ಲೂ ಕಾಣಲು ಸಾಧ್ಯವಿಲ್ಲ. ಕುವೆಂಪು, ದೇಜಗೌ, ಅನಂತಮೂರ್ತಿ, ಪ್ರೊ.ಕೆ.ರಾಮದಾಸ್ ಮೊದಲಾದ ಸಾಹಿತಿಗಳು ಈ ನೆಲದಲ್ಲಿ ಇದ್ದರೂ ಎಂಬುದೇ ಪುಳಕಿತರಾಗಿಸುತ್ತದೆ ಎಂದು ಬಣ್ಣಿಸಿದರು.

ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಅಧ್ಯಕ್ಷ ಟಿ.ಸತೀಶ್ ಜವರೇಗೌಡ, ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಎಂ.ಬಿ. ಮಂಜೇಗೌಡ, ವಿಜಯನಗರ ಸ್ಪೋರ್ಟ್ಸ್ ಕ್ಲಬ್ ಅಧ್ಯಕ್ಷ ಎಂ. ರಾಮಚಂದ್ರ, ಸ್ಪಂದನ ಸಾಂಸ್ಕೃತಿಕ ಪರಿಷತ್ತಿನ ಪದಾಧಿಕಾರಿಗಳಾದ ಚಂದ್ರು ಮಂಡ್ಯ, ಕೆ.ಎಸ್. ಸತೀಶ್‌ಕುಮಾರ್, ಟಿ.ಲೋಕೇಶ್ ಹುಣಸೂರು ಮತ್ತಿತರರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಪತ್ರಕರ್ತ ಡಾ. ನಾಗರಾಜ್ ನವೀಮನೆ, ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕ ಸಿ. ರಾಜು, ಬಿಳಿಕೆರೆ ಸರ್ಕಾರಿ ಹಿರಿಯ ಉರ್ದು ಪ್ರಾಥಮಿಕ ಶಾಲೆ ಶಿಕ್ಷಕಿ ಕೌಸಲ್ಯ, ಮೈಸೂರು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಉಪಾಧ್ಯಕ್ಷೆ ಸಿ.ಎಸ್.ಮಮತ, ನಿವೃತ್ತ ಇಂಜಿನಿಯರ್ ಎಂ.ಜವರೇಗೌಡ, ಕೆ.ಆರ್. ನಗರ ತಾಲೂಕಿನ ಭೇರ್ಯದ ಪಶು ವೈದ್ಯಾಧಿಕಾರಿ ಡಾ.ಹೆಚ್.ಪಿ. ಹರೀಶ್ ಅವರಿಗೆ 'ಸ್ವಾಮಿ ವಿವೇಕಾನಂದ ಸದ್ಭಾವನಾ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ದೇಶ - ವಿದೇಶ

ಇಸ್ರೇಲ್‌ನಿಂದ ಇಬ್ಬರು ಬ್ರಿಟನ್ ಸಂಸದರ ಬಂಧನ

ಲಂಡನ್: ಬ್ರಿಟನ್‌ನ ಇಬ್ಬರು ಸಂಸದರನ್ನು ಇಸ್ರೇಲ್ ಬಂಧಿಸಿ, ಅವರಿಗೆ ಪ್ರವೇಶ ನಿರಾಕರಿಸಿರುವುದು ಸ್ವೀಕಾರಾರ್ಹವಲ್ಲ ಎಂದು ಬ್ರಿಟನ್‌ನ ವಿದೇಶಾಂಗ ಕಾರ್ಯದರ್ಶಿ ಡೇವಿಡ್ ಲ್ಯಾಮಿ ಹೇಳಿದ್ದಾರೆ. ಆಡಳಿತಾರೂಢ ಲೇಬರ್ ಪಾರ್ಟಿಯ ಯುವಾನ್ ಯಾಂಗ್ ಮತ್ತು ಅಬ್ತಿಸಮ್ ಮೊಹಮದ್ ಲಂಡನ್‌ನಿಂದ ಇಸ್ರೇಲ್‌ಗೆ ತೆರಳಿದಾಗ ಅವರಿಗೆ ದೇಶ ಪ್ರವೇಶಿಸದಂತೆ ನಿರ್ಬಂಧಿಸಲಾಗಿದೆ ಮತ್ತು ಗಡೀಪಾರು ಮಾಡಲಾಗಿದೆ ಎಂದು ಬ್ರಿಟಿಷ್ ಮಾಧ್ಯಮ ವರದಿ ಮಾಡಿದೆ.

ಇದು ಬ್ರಿಟಿಷ್ ಸಂಸದರರು ಸರಿಯಾಗಿ ನಡೆಸಿಕೊಳ್ಳುವ ಕ್ರಮವಲ್ಲ ಎಂದು ಇಸ್ರೇಲ್ ಸರ್ಕಾರದ ನನ್ನ ಸಹವರ್ತಿಗಳಿಗೆ ಸ್ಪಷ್ಟಪಡಿಸುತ್ತೇನೆ. ನಮ್ಮ ಬೆಂಬಲ ನೀಡಲು ನಾವು ಇಂದು ರಾತ್ರಿ ಇಬ್ಬರೂ ಸಂಸದರನ್ನು ಸಂಪರ್ಕಿಸಿದ್ದೇವೆ ಎಂದು ಅವರು ಹೇಳಿದ್ದಾರೆ. ಇಸ್ರೇಲ್ ತೆಗೆದುಕೊಂಡು ಕ್ರಮ ಆಶ್ಚರ್ಯ ಮೂಡಿಸಿದೆ ಎಂದು ಇಬ್ಬರು ಸಂಸದರು ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಆದರೆ ಅಧಿಕೃತ ಸಂಸದೀಯ ನಿಯೋಗದಲ್ಲಿದ್ದರು ಎಂಬ ಅವರ ಹೇಳಿಕೆ ಸುಳ್ಳು ಎಂದು ಕಂಡುಬಂದಿದೆ. ಅಂತಹ ಯಾವುದೇ ಅಧಿಕೃತ ನಿಯೋಗದ ಭೇಟಿ ಕುರಿತು ಅಧಿಕೃತ ಮಾಹಿತಿ ಬಂದಿರಲಿಲ್ಲ ಎಂದು ಇಸ್ರೇಲ್ ಹೇಳಿದೆ.


ರಾಮನವಮಿ ಮೆರವಣಿಗೆ ಮೇಲೆ ಮೊಟ್ಟೆ ಎಸೆತ

ಪಾಲ್ಘರ್: ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಒಂದು ಪ್ರದೇಶದಲ್ಲಿ ರಾಮನವಮಿಯ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಮೋಟಾರ್ ಬೈಕ್ ರ‍್ಯಾಲಿಯಲ್ಲಿ ಭಾಗವಹಿಸಿದವರ ಮೇಲೆ ಅಪರಿಚಿತ ವ್ಯಕ್ತಿಗಳು ಮೊಟ್ಟೆಗಳನ್ನು ಎಸೆದಿದ್ದಾರೆ.

ಅಪರಿಚಿತ ವ್ಯಕ್ತಿಗಳ ವಿರುದ್ಧ ಕಿಡಿಗೇಡಿತನ ಮತ್ತು ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪದ ಮೇಲೆ ಪ್ರಕರಣ ದಾಖಲಿಸಲಾಗಿದೆ. ಒಬ್ಬ ವ್ಯಕ್ತಿಯನ್ನು ವಿಚಾರಣೆಗಾಗಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ರಾಮನವಮಿಯ ಅಂಗವಾಗಿ ಸಕಲ್ ಹಿಂದೂ ಸಮಾಜ ಆಯೋಜಿಸಿದ್ದ ರ‍್ಯಾಲಿಯು ಚಿಖಲ್ಡೊಂಗ್ರಿಯ ಸರ್ವೇಶ್ವರ ದೇವಸ್ಥಾನದಿಂದ ಪ್ರಾರಂಭವಾಗಿ ವಿರಾರ್ (ಪಶ್ಚಿಮ)ದ ಗ್ಲೋಬಲ್ ಸಿಟಿಯಲ್ಲಿರುವ ಪಿಂಪ್ಲೇಶ್ವರ ದೇವಸ್ಥಾನಕ್ಕೆ ಹೋಗುವ ಮಾರ್ಗದಲ್ಲಿ ಈ ಘಟನೆ ಸಂಭವಿಸಿದೆ ಎಂದು ಪೊಲೀಸರು ಹೇಳಿದರು. ಸುಮಾರು 100ರಿಂದ 150 ಮೋಟಾರ್ ಬೈಕ್‌ಗಳು, ಒಂದು ರಥ ಮತ್ತು ಎರಡು ಟೆಂಪೋಗಳು ಮೆರವಣಿಗೆಯಲ್ಲಿ ಭಾಗವಹಿಸಿದ್ದವು, ಈ ಕಾರ್ಯಕ್ರಮದಲ್ಲಿ ಸ್ಥಳೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಮೈಕ್ರೋಸಾಫ್ಟ್‌ಗೆ ರಾಜೀನಾಮೆ ಕೊಟ್ಟ ಭಾರತೀಯ ಟೆಕ್ಕಿ


ವಾಷಿಂಗ್ಟನ್: ಗಾಜಾದಲ್ಲಿ ನರಮೇಧಕ್ಕೆ ಸಹಾಯ



ಮಾಡಲು ಮೈಕ್ರೋಸಾಫ್ಟ್ ಕಂಪನಿ ಸಾಫ್ಟ್‌ವೇರ್ ಬಳಕೆ ಮಾಡಲಾಗುತ್ತಿದೆ ಎಂದು ಆರೋಪಿಸಿ ಭಾರತ ಮೂಲದ ಟೆಕ್ಕಿಯೊಬ್ಬರು ರಾಜೀನಾಮೆ ನೀಡಿದ್ದಾರೆ. ಕಂಪನಿಯ 50ನೇ ವಾರ್ಷಿಕೋತ್ಸವದ ಆಚರಣೆ ಸಂದರ್ಭದಲ್ಲಿ ಅವರು ಮಾಜಿ ಮತ್ತು ಹಾಲಿ ಮೈಕ್ರೋಸಾಫ್ಟ್ ಸಿಇಒಗಳಾದ ಬಿಲ್‌ಗೇಟ್ಸ್, ಸ್ಟೀವ್ ಬಾಲ್ಮರ್ ಮತ್ತು ಸತ್ಯ ನಾದೆಲ್ಲಾ ಅವರಿಗೆ ಪ್ರಶ್ನೆಯನ್ನು ಕೇಳಿದ್ದಾರೆ. ಮೈಕ್ರೋಸಾಫ್ಟ್‌ನ ಕೃತಕ ಬುದ್ಧಿಮತ್ತೆ ವಿಭಾಗದ ಸಾಫ್ಟ್‌ವೇರ್ ಎಂಜಿನಿಯರ್ ವಾನಿಯಾ ಅಗರವಾಲ್, ಪ್ಯಾನಲ್ ಚರ್ಚೆಗೆ ಅಡ್ಡಿಪಡಿಸಿದರು. ಗಾಜಾದಲ್ಲಿ 50,000 ಪ್ಯಾಲೆಸ್ಟೀನಿಯನ್ನರನ್ನು ಮೈಕ್ರೋಸಾಫ್ಟ್ ತಂತ್ರಜ್ಞಾನದಿಂದ ಕೊಲ್ಲಲಾಗಿದೆ. ಇಸ್ರೇಲ್ ಜೊತೆಗಿನ ಸಂಬಂಧವನ್ನು ಕಡಿತಗೊಳಿಸಿ ಎಂದು ಕೂಗಿ ಹೇಳಿದ್ದಾರೆ. ಕೂಡಲೇ ಅವರನ್ನು ಸಭಾಂಗಣದಿಂದ ಹೊರಗೆ ಕರೆದೊಯ್ಯಲಾಯಿತು, ಆದರೆ ಕಾರ್ಯಕ್ರಮದಲ್ಲಿದ್ದ ಕೆಲವು ಉದ್ಯೋಗಿಗಳು ಗದ್ದಲ ಮಾಡಲು ಪ್ರಾರಂಭಿಸಿದರು. ನಂತರ ಅಗರ್ವಾಲ್ ಇ–ಮೇಲ್‌ನಲ್ಲಿ ತಮ್ಮ ರಾಜೀನಾಮೆ ಘೋಷಿಸಿದರು.

ವಕ್ಫ್ ಕಾಯ್ದೆ ಪ್ರಶ್ನಿಸಿದ್ದ ಅರ್ಜಿಗಳ ವಿಚಾರಣೆಗೆ ಸುಪ್ರೀಂ ಒಪ್ಪಿಗೆ


ನವದೆಹಲಿ: ವಕ್ಫ್ (ತಿದ್ದುಪಡಿ) ಕಾಯ್ದೆಯ ಸಾಂವಿಧಾನಿಕ



ಸಿಂಧುತ್ವವನ್ನು ಪ್ರಶ್ನಿಸಿ ಸಲ್ಲಿಕೆಯಾದ ಅರ್ಜಿಗಳನ್ನು ಸೂಕ್ತ ಸಮಯದಲ್ಲಿ ಕೈಗೆತ್ತಿಕೊಳ್ಳುವುದಾಗಿ ಸುಪ್ರೀಂಕೋರ್ಟ್ ಸೋಮವಾರ ಹೇಳಿದೆ. ತುರ್ತಾಗಿ ಈ ವಿಷಯವನ್ನು ವಿಚಾರಣೆಗೆ ಪರಿಗಣಿಸುವಂತೆ ಅರ್ಜಿದಾರರ ಪರವಾಗಿ ಹಿರಿಯ ವಕೀಲರಾದ ಕಪಿಲ್‌ಸಿಬಲ್ ಮತ್ತು ಎ.ಎಂ.ಸಿಂಘ್ವಿ ಅವರು ಮುಖ್ಯ ನ್ಯಾಯಮೂರ್ತಿ ಸಂಜೀವ್ ಖನ್ನಾ ಮತ್ತು ನ್ಯಾಯಮೂರ್ತಿ ಸಂಜಯ್‌ಕುಮಾರ್ ಅವರಿದ್ದ ಪೀಠದ ಮುಂದೆ ಮನವಿ ಮಾಡಿದ್ದಾರೆ. ವಕ್ಫ್ ತಿದ್ದುಪಡಿ ಕಾಯ್ದೆ ಸಿಂಧುತ್ವವನ್ನು ಪ್ರಶ್ನಿಸಿ ಕಾಂಗ್ರೆಸ್ ಸಂಸದ ಮೊಹಮ್ಮದ್ ಜಾವೇದ್, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ಮತ್ತು ದೆಹಲಿ ಶಾಸಕ ಅಮಾನತುಲ್ಲಾ ಖಾನ್ ಪ್ರತ್ಯೇಕ ಅರ್ಜಿ ಸಲ್ಲಿಸಿದ್ದಾರೆ. ನಾಗರಿಕ ಹಕ್ಕುಗಳ ರಕ್ಷಣಾ ಸಂಘ, ಜಮಿಯತ್ ಉಲಮಾ–ಇ–ಹಿಂದ್, ಸಮಸ್ತ ಕೇರಳ ಜಮಾಯತ್ ಉಲೇಮಾ ಮುಂತಾದ ಸಂಸ್ಥೆಗಳೂ ನ್ಯಾಯಾಲಯಕ್ಕೆ ರಿಟ್ ಅರ್ಜಿ ಸಲ್ಲಿಸಿವೆ. ಈ ಕಾಯ್ದೆಯು ಮುಸ್ಲಿಮರ ಧಾರ್ಮಿಕ ಸ್ವಾತಂತ್ರ್ಯವನ್ನು ಕಸಿದುಕೊಳ್ಳುವ ಪಿತೂರಿಯಾಗಿದೆ ಎಂದು ಆರೋಪಿಸಿರುವ ಅರ್ಜಿದಾರರು, ಕಾನೂನುಬಾಹಿರವಾಗಿ ತಿದ್ದುಪಡಿ ಮಾಡಲಾಗಿದ್ದು ಸಂವಿಧಾನದ 14, 15, 21, 25, 26, ಮತ್ತು 300–ಎ ವಿಧಿಗಳನ್ನು ಉಲ್ಲಂಘಿಸಲಾಗಿದೆ.

ಆರ್ಥಿಕ ಕೊರತೆ ಸರಿದೂಗಿಸಲು ಸುಂಕವೊಂದೇ ಪರಿಹಾರ: ಟ್ರಂಪ್

ವಾಷಿಂಗ್ಟನ್: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್



ತಮ್ಮ ಆಡಳಿತ ವಿವಿಧ ದೇಶಗಳ ಮೇಲೆ ಪರಸ್ಪರ ಸುಂಕಗಳನ್ನು ಜಾರಿಗೆ ತಂದಿರುವುದನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ಜತೆಗೆ ಚೀನಾ ಮತ್ತು ಯುರೋಪಿಯನ್ ಒಕ್ಕೂಟದಂತಹ ರಾಷ್ಟ್ರಗಳೊಂದಿಗೆ ಅಮೆರಿಕ ಎದುರಿಸುತ್ತಿರುವ ಆರ್ಥಿಕ ಕೊರತೆಯನ್ನು ಅವರು ಒತ್ತಿ ಹೇಳಿದ್ದು, ವ್ಯಾಪಾರ ಅಸಮತೋಲನಗಳಿಗೆ ಸುಂಕಗಳು ಮಾತ್ರ ಪರಿಹಾರ ಎಂದು ಪ್ರತಿಪಾದಿಸಿದ್ದಾರೆ.

ತಮ್ಮ ಸಾಮಾಜಿಕ ಮಾಧ್ಯಮ ಟ್ರೂತ್ ಸೋಶಿಯಲ್‌ನಲ್ಲಿ ಈ ಬಗ್ಗೆ ಪೋಸ್ಟೊಂದನ್ನು ಟ್ರಂಪ್ ಹಂಚಿಕೊಂಡಿದ್ದಾರೆ. ನಾವು(ಅಮೆರಿಕ) ಚೀನಾ, ಯುರೋಪಿಯನ್ ಒಕ್ಕೂಟ ಮತ್ತು ಇತರ ಹಲವು ದೇಶಗಳೊಂದಿಗೆ ಭಾರಿ ಆರ್ಥಿಕ ಕೊರತೆ ಹೊಂದಿದ್ದೇವೆ. ಈ ಸಮಸ್ಯೆಯನ್ನು ಪರಿಹರಿಸಬಹುದಾದ ಏಕೈಕ ಮಾರ್ಗ ಎಂದರೆ ಸುಂಕಗಳು. ಇವು ಈಗ USಗೆ ಹತ್ತಾರು ಶತಕೋಟಿ ಡಾಲರ್‌ಗಳನ್ನು ತರುತ್ತಿವೆ. ಅವು ಈಗಾಗಲೇ ಜಾರಿಯಲ್ಲಿವೆ ಮತ್ತು ಇದು ಸುಂದರವಾದ ವಿಷಯ ಎಂದು ಟ್ರಂಪ್ ಹೇಳಿಕೊಂಡಿದ್ದಾರೆ.

ಮಡಿಕೇರಿ ಈಶ್ವರ ಹೋಂಸ್ಟೇನಲ್ಲಿ ತಾಯಿ–ಮಗಳಿಗೆ ರಾತ್ರಿಯಿಡೀ ಕಿರುಕುಳ

ಹೋಂಸ್ಟೇ ಕೇರ್‌ಟೇಕರ್ ಬಂಧನ; ಮಾಲೀಕ, ಮತ್ತೊಬ್ಬನ ವಿರುದ್ಧವೂ ಕೇಸ್ ದಾಖಲು

ಮಡಿಕೇರಿ, ಏ.7– ಕೊಡಗಿಗೆ ಪ್ರವಾಸ ಬಂದು ಹೋಂಸ್ಟೇನಲ್ಲಿ ವಾಸ್ತವ್ಯ ಹೂಡಿದ್ದ ತಾಯಿ, ಮಗಳಿಗೆ ಕಿರುಕುಳ ನೀಡಿದ ಆರೋಪದ ಮೇರೆಗೆ ಹೋಂಸ್ಟೇ ಕೇರ್‌ಟೇಕರ್ ಪ್ರವೀಣ್ ಎಂಬಾತನನ್ನು ಬಂಧಿಸಿರುವ ಮಡಿಕೇರಿ ಟೌನ್ ಠಾಣೆ ಪೊಲೀಸರು, ಮಾಲೀಕ ಸೇರಿದಂತೆ ಮೂವರ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ವಿವರ: ಬೆಂಗಳೂರಿನ ಹೆಣ್ಣೂರು ಬಾಣಸವಾಡಿ ನಿವಾಸಿ ಮಮತಾ(47) ಎಂಬುವರು ಕಳೆದ 15 ದಿನದ ಹಿಂದೆಯೇ ಮಡಿಕೇರಿಯ ಈಶ್ವರ ಹೋಂಸ್ಟೇನಲ್ಲಿ ತನ್ನ ಸಹೋದರ ಸಿದ್ದರಾಜು ಮೂಲಕ ಕೊಠಡಿ ಬುಕ್ ಮಾಡಿದ್ದರು. ಪುತ್ರಿಯೊಂದಿಗೆ ಊಟಿ ಪ್ರವಾಸ ಮುಗಿಸಿ ಭಾನುವಾರ ಮಡಿಕೇರಿಗೆ ಕಾರಿನಲ್ಲಿ ಆಗಮಿಸಿದಾಗ ಹೋಂಸ್ಟೇ ಮಾರ್ಗ ಗೊತ್ತಿಲ್ಲದೆ ಅದರ ಮಾಲೀಕನನ್ನು ಸಹೋದರನ ಮೂಲಕ ಸಂಪರ್ಕಿಸಿದ್ದಾರೆ. ಆ ವೇಳೆ ಆಟೋದಲ್ಲಿ ಬಂದ ಪ್ರವೀಣ್ ತನ್ನನ್ನು ಹೋಂಸ್ಟೇ ಕೇರ್ ಟೇಕರ್ ಎಂದು ಪರಿಚಯಿಸಿಕೊಂಡಿದ್ದಾನೆ. ಆತನ ಜೊತೆ ಮತ್ತೊಬ್ಬ ವ್ಯಕ್ತಿಯೂ ಇದ್ದ. ಆತನೇ ಮಮತಾ ಹಾಗೂ ಪುತ್ರಿಯನ್ನು ಹೋಂಸ್ಟೇಗೆ ಕರೆದೊಯ್ದು ಬಿಟ್ಟಿದ್ದಾನೆ.

ನಂತರ ತನ್ನ ಸ್ನೇಹಿತನೊಂದಿಗೆ ಹೋಂಸ್ಟೇಗೆ ಬಂದ ಪ್ರವೀಣ್ ರಾತ್ರಿಯಿಡೀ ಹಲವಾರು ಬಾರಿ ತಾಯಿ–ಮಗಳು ವಾಸ್ತವ್ಯ ಹೂಡಿದ್ದ ಮನೆಯ ಬಾಗಿಲನ್ನು ಜೋರಾಗಿ ಬಡಿದು ಹೊರ ಬರುವಂತೆ ತಾಕೀತು ಮಾಡಿದ್ದಾನೆ. ಸರಿರಾತ್ರಿಯಲ್ಲಿ ಬಾಗಿಲು ತೆರೆಯುವುದಿಲ್ಲ ಎಂದು ಮಮತಾ ಅವರು ಹೇಳಿದಾಗಲೂ ಕೂಡ ಮತ್ತೆ ಮತ್ತೆ ಬಾಗಿಲು ಬಡಿದು ಕಿರುಕುಳ ನೀಡಿದ್ದಾನೆ. ಈ ಕುರಿತು ಹೋಂಸ್ಟೇ ಮಾಲೀಕ ಕಾವೇರಿಯಪ್ಪ ಅವರಿಗೆ ತಿಳಿಸಿದರೂ ಅವರು ಸ್ಪಂದಿಸಲಿಲ್ಲ. ಬೆಳಗ್ಗೆ 6 ಗಂಟೆ ಸಮಯದಲ್ಲಿ ಎದ್ದು ನೋಡಿದರೆ ಮಮತಾ ಅವರ ಕಾರಿನ 4 ಟೈರ್‌ಗಳನ್ನು ಹರಿತವಾದ ಆಯುಧದಿಂದ ಕತ್ತರಿಸಿ ಹಾನಿ ಮಾಡಿದ್ದಾನೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ಮಮತಾ ತಿಳಿಸಿದ್ದಾರೆ.

> ಹೋಂಸ್ಟೇನಲ್ಲಿ ನಡೆದಿರುವ ಘಟನೆಯನ್ನು ಕೂರ್ಗ್ ಹೋಂ ಸ್ಟೇ ಅಸೋಸಿಯೇಷನ್ ತೀವ್ರವಾಗಿ ಖಂಡಿಸುತ್ತದೆ. ಮಡಿಕೇರಿ ಹೋಂಸ್ಟೇನಲ್ಲಿ ವಾಸ್ತವ್ಯ ಹೂಡಿದ್ದ ತಾಯಿ–ಮಗಳ ವಿಷಯದಲ್ಲಿ ನಡೆದಿರುವ ಅಹಿತಕರ ಘಟನೆ ಕೊಡಗಿನ ಹೋಂಸ್ಟೇಗಳಿಗೆ ಕಪ್ಪುಚುಕ್ಕೆ ತರುವಂತದ್ದಾಗಿದೆ. ಈಶ್ವರ ಹೋಂಸ್ಟೇ ಮಾಲೀಕ ಕಾವೇರಿಯಪ್ಪ ನಮ್ಮ ಅಸೋಸಿಯೇಷನ್‌ನ ಸದಸ್ಯರಲ್ಲ. ಅವರು ಯಾರೋ ಒಬ್ಬ ವಾಚ್‌ಮನ್‌ನನ್ನು ನೇಮಕ ಮಾಡಿಕೊಂಡು ಹೋಂಸ್ಟೇ ನಡೆಸುತ್ತಿದ್ದಾರೆ ಎಂಬುದು ನಮಗೆ ತಿಳಿದುಬಂದಿದೆ. ಈ ಕೃತ್ಯ ಎಸಗಿರುವ ವ್ಯಕ್ತಿಗಳು ಹಾಗೂ ಹೋಂಸ್ಟೇ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು.
>
> –ಮೋಂತಿ ಗಣೇಶ್, ಕೂರ್ಗ್ ಹೋಂಸ್ಟೇ ಅಸೋಸಿಯೇಷನ್ ಅಧ್ಯಕ್ಷ.

ಈ ಕುರಿತು ಮಾಧ್ಯಮದೊಂದಿಗೆ ಮಾತನಾಡಿದ ಮಮತಾ, ಕೊಡಗು ಎಂದರೆ ಆಹ್ಲಾದಕರ ವಾತಾವರಣವಿರುವ ಪ್ರದೇಶ. ಇಲ್ಲಿಗೆ ಬಂದು ಪ್ರಕೃತಿ ಸೌಂದರ್ಯವನ್ನು ಸವಿಯಬೇಕು ಎಂಬುದು ನಮ್ಮ ಮಹದಾಸೆಯಾಗಿತ್ತು. ಆದರೆ ರಾತ್ರಿ ನಡೆದಿರುವ ಘಟನೆ ಸುಂದರವಾದ ವಾತಾವರಣವಿರುವ ಮಡಿಕೇರಿಯಲ್ಲಿ ನನ್ನ ಜೀವನದಲ್ಲಿ ಆಗಿರುವ ಅತ್ಯಂತ ಕೆಟ್ಟ ಅನುಭವವಾಗಿದೆ. ಮಡಿಕೇರಿಯನ್ನು ನೆನೆಸಿಕೊಂಡರೆ ಈ ಸನ್ನಿವೇಶವೇ ಜ್ಞಾಪಕಕ್ಕೆ ಬರುವಂತಾಗಿದೆ. ಹೀಗಾಗಿ ಇಲ್ಲಿಗೆ ಬರುವ ಯಾವುದೇ ಪ್ರವಾಸಿಗರಿಗೆ ಇಂತಹ ಕೆಟ್ಟ ಅನುಭವವಾಗಬಾರದು ಎಂಬ ಉದ್ದೇಶದಿಂದ ಪೊಲೀಸರಿಗೆ ದೂರು ಸಲ್ಲಿಸಿದ್ದು ಮಾತ್ರವಲ್ಲದೆ, ಮಾಧ್ಯಮದ ಮುಂದೆಯೂ ಹೇಳಿಕೆ ನೀಡುತ್ತಿದ್ದೇನೆ ಎಂದರು.

ಮಮತಾ ನೀಡಿದ ದೂರಿನನ್ವಯ ಕಾರ್ಯಪ್ರವೃತ್ತರಾದ ಮಡಿಕೇರಿ ಟೌನ್ ಪೊಲೀಸರು ಪ್ರವೀಣ್‌ನನ್ನು ಬಂಧಿಸಿ, ರಾತ್ರಿ ವೇಳೆ ಆಟೋದಲ್ಲಿ ಅವನೊಂದಿಗೆ ಬಂದು ತಾಯಿ–ಮಗಳಿಗೆ ಕಿರುಕುಳ ನೀಡಿದ ಮತ್ತೋರ್ವ ವ್ಯಕ್ತಿ ಹಾಗೂ ಹೋಂಸ್ಟೇ ಮಾಲೀಕ ಕಾವೇರಿಯಪ್ಪ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.



ಖಾಸಗಿ ಬಸ್–ಓಮಿನಿ ಡಿಕ್ಕಿ; 7 ಮಂದಿಗೆ ಗಾಯ



ಖಾಸಗಿ ಬಸ್ ಮತ್ತು ಓಮಿನಿ ವ್ಯಾನ್ ನಡುವೆ ಅಪಘಾತ ಸಂಭವಿಸಿ ವ್ಯಾನಿನ ಮುಂಭಾಗ ಜಖಂಗೊಂಡಿದೆ.

ನಾಪೋಕ್ಲು,ಏ.7– ಮಾರುತಿ ಓಮ್ನಿ ವ್ಯಾನ್ ಮತ್ತು ಖಾಸಗಿ ಬಸ್ ನಡುವೆ ಡಿಕ್ಕಿ ಸಂಭವಿಸಿ ವ್ಯಾನಿನಲ್ಲಿದ್ದ ಏಳು ಮಂದಿ ಗಾಯಗೊಂಡ ಘಟನೆ ಸೋಮವಾರ ಸಮೀಪದ ಬಾವಲಿ ಗ್ರಾಮದಲ್ಲಿ ನಡೆದಿದೆ.

ಹೋದವಾಡ ಗ್ರಾಮದ ಹರಿಶ್ಚಂದ್ರದ ನಿವಾಸಿ ರವಿ ಮತ್ತವರ ಕುಟುಂಬದ 6 ಮಂದಿ ಮಾರುತಿ ವ್ಯಾನ್‌ನಲ್ಲಿ ವಿರಾಜಪೇಟೆಗೆ ತೆರಳುತ್ತಿದ್ದ ಸಂದರ್ಭ ಈ ಘಟನೆ ಸಂಭವಿಸಿದೆ.

ನಾಪೋಕ್ಲು – ವಿರಾಜಪೇಟೆ ಮುಖ್ಯ ರಸ್ತೆಯ ಪಾರಾಣೆ ಗ್ರಾಮ ಪಂಚಾಯಿತಿಯ ಬಾವಲಿ(ಬಿದ್ದಂಡ) ತಿರುವಿನಲ್ಲಿ ನಾಪೋಕ್ಲು ಕಡೆಯಿಂದ ವಿರಾಜಪೇಟೆಗೆ ಚಾಲಕ ಅಣ್ಣಪ್ಪ ಚಾಲನೆ ಮಾಡುತ್ತಿದ್ದ ಮಾರುತಿ ವ್ಯಾನ್ ಹಾಗೂ ಬಾಬು ಚಾಲನೆ ಮಾಡುತ್ತಿದ್ದ ವಿರಾಜಪೇಟೆಯಿಂದ ನಾಪೋಕ್ಲುಗೆ ಬರುತ್ತಿದ್ದ ಖಾಸಗಿ ಬಸ್ ನಡುವೆ ಅಪಘಾತ ಸಂಭವಿಸಿದೆ. ವ್ಯಾನಿನಲ್ಲಿದ್ದ 5 ವರ್ಷದ ಮಗು ಸೇರಿದಂತೆ ರವಿ(55), ಅಕ್ಕಮ್ಮ(50), ಶಾಂತಿ(26), ಶಾರದ(24) ಮುತ್ತಕ್ಕಿ (20) ಗಾಯಗೊಂಡವರಾಗಿದ್ದಾರೆ.

ಗಾಯಾಳುಗಳಿಗೆ ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ ಬಳಿಕ ಹೆಚ್ಚಿನ ಚಿಕಿತ್ಸೆಗೆ ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಆಸ್ಪತ್ರೆಗೆ ಎಸ್.ಪಿ ರಾಮರಾಜನ್, ಡಿವೈಎಸ್‌ಪಿ ಸೂರಜ್ ಭೇಟಿ ನೀಡಿದ್ದರು.

ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಇಂದಿನಿಂದ ಲಕ್ಷ್ಮಿ ವೆಂಕಟೇಶ್ವರ ವಾರ್ಷಿಕ ಜಾತ್ರೆ

ನಾಪೋಕ್ಲು,ಏ.7– ಇಲ್ಲಿಗೆ ಸಮೀಪದ ಕಕ್ಕುಂದ ಕಾಡಿನ ಲಕ್ಷ್ಮಿ ವೆಂಕಟೇಶ್ವರ ದೇವಸ್ಥಾನದ ವಾರ್ಷಿಕ ಜಾತ್ರಾ ಮಹೋತ್ಸವ ಏ.8ರಿಂದ 10 ರವರೆಗೆ ನಡೆಯಲಿದೆ.

ಕಕ್ಕುಂದ ಕಾಡು ಲಕ್ಷ್ಮಿ ವೆಂಕಟೇಶ್ವರ ದೇವರ ಸನ್ನಿಧಾನದಲ್ಲಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳೊಂದಿಗೆ ಜರುಗಲಿದೆ. ಏ.8, ಬೆಳಿಗ್ಗೆ ಮಹಾಪೂಜೆ, ಇತರೆ ಪೂಜೆಗಳು ನಡೆಯಲಿದೆ. ಏ.9, ದೇವರ ದರ್ಶನ ಬಲಿ, ಮಹಾಭಿಷೇಕ, ವಿಶೇಷ ಸೇವೆಗಳು ಮಧ್ಯಾಹ್ನ ಮಹಾಪೂಜೆ ಹಾಗೂ ದೇವರ ಬಲಿ ನಡೆಯಲಿದೆ. ಏ.9, ದೇವರ ಮೆರವಣಿಗೆಯಲ್ಲಿ ಸಾಗಿ ಪವಿತ್ರ ಕಾವೇರಿ ನದಿಯಲ್ಲಿ ತೀರ್ಥ ಸ್ನಾನ ಮಾಡಿ ದೇವಾಲಯಕ್ಕೆ ಹಿಂತಿರುಗಿಲಾಗುವುದು. ಏ.10 ರಂದು ಗುರುವಾರ ಶುದ್ಧ ನವಕ ಕಲಶ ಜರುಗಲಿದೆ.

ಸೋಮಯ್ಯ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ಆಗ್ರಹಿಸಿ ಬಿಜೆಪಿ

ಮಡಿಕೇರಿಯಲ್ಲಿ ನಾಳೆ ಬೃಹತ್ ಪ್ರತಿಭಟನೆ

ಮಡಿಕೇರಿ,ಏ.7– ಬಿಜೆಪಿ ಕಾರ್ಯಕರ್ತ ವಿನಯ್ ಸೋಮಯ್ಯ ಸಾವಿನ ಪ್ರಕರಣವನ್ನು ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ಜಿಲ್ಲಾ ಬಿಜೆಪಿ ಒತ್ತಾಯಿಸಿದೆ.

ಕೇವಲ ಶಾಸಕರನ್ನು ಗುರಿಮಾಡಿ ಪ್ರಕರಣ ದಾಖಲಿಸಬೇಕೆಂದು ನಾವು ಹೇಳುತ್ತಿಲ್ಲ. ಕಾನೂನು ಎಲ್ಲರಿಗೂ ಒಂದೇ ಆಗಿರುವುದರಿಂದ ಡೆತ್‌ನೋಟ್‌ನಲ್ಲಿರುವ ಎಲ್ಲರ ವಿರುದ್ಧವೂ ಪ್ರಕರಣ ದಾಖಲಿಸಬೇಕೆಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ನಾಪಂಡ ರವಿ ಕಾಳಪ್ಪ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು. ಪ್ರಕರಣದ ಪ್ರಮುಖ ವ್ಯಕ್ತಿಯ ಬಂಧನ ಈವರೆಗೂ ಕೂಡ ಆಗಿಲ್ಲ, ಸರ್ಕಾರ ಪೊಲೀಸ್ ಇಲಾಖೆಯನ್ನು ಸಂವಿಧಾನ ಬದ್ಧವಾಗಿ ಕರ್ತವ್ಯ ನಿಭಾಯಿಸಲು ಬಿಡುತ್ತಿಲ್ಲ ಎಂದು ಆರೋಪಿಸಿದರು.

ವಿನಯ್ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿ ಮತ್ತು ರಾಜ್ಯ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ಏ.9ರಂದು ಬಿಜೆಪಿಯಿಂದ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿದೆ. ಅಂದು ಬೆಳಿಗ್ಗೆ 10.30 ಗಂಟೆಗೆ ಚೌಡೇಶ್ವರಿ ದೇವಾಲಯದಿಂದ ಹಳೇ ಖಾಸಗಿ ಬಸ್ ನಿಲ್ದಾಣದವರೆಗೆ ಮೆರವಣಿಗೆ ಸಾಗಲಿದೆ. ನಂತರ ಪ್ರತಿಭಟನಾ ಸಭೆ ನಡೆಯಲಿದ್ದು, ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಸೇರಿದಂತೆ ರಾಜ್ಯದ ಅನೇಕ ನಾಯಕರು ಪಾಲ್ಗೊಳ್ಳಲಿದ್ದಾರೆ ಎಂದರು.

ಕಾಂಗ್ರೆಸ್ ಪಕ್ಷ ನಡೆಸಿದ ಪ್ರತಿಭಟನೆ ಸಂದರ್ಭದಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ಪ್ರತಿಕೃತಿ ದಹಿಸಿದ್ದನ್ನು ಪ್ರಸ್ತಾಪಿಸಿ, ಪ್ರತಿಕೃತಿ ದಹಿಸಿದ ಎಷ್ಟು ಜನರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ವಿರಾಜಪೇಟೆಯಲ್ಲಿ ಬಿಜೆಪಿ ಹಿಂದೆ ಪ್ರತಿಭಟನೆ ನಡೆಸಿದಾಗ ಶಾಸಕ ಪೊನ್ನಣ್ಣ ಅವರ ಪ್ರತಿಕೃತಿ ದಹಿಸಿದ ಕಾರಣಕ್ಕಾಗಿ ಸಾರ್ವಜನಿಕ ಆಸ್ತಿಗೆ ಹಾನಿಯಾಗಿದೆ ಎಂದು 30 ಮಂದಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಪೊಲೀಸರ ದೃಷ್ಟಿಯಲ್ಲಿ ವಿರಾಜಪೇಟೆಗೆ ಒಂದು ಕಾನೂನು, ಮಡಿಕೇರಿಗೆ ಒಂದು ಕಾನೂನು ಇದೆಯೇ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಂಭ್ರಮಾಚರಣೆ : ಕಾಂಗ್ರೆಸ್ಸಿಗರು ಭಾನುವಾರ ಮಾಡಿರುವುದು ಪ್ರತಿಭಟನೆಯಲ್ಲ, ಅದೊಂದು ಸಂಭ್ರಮಾಚರಣೆ ಎಂದು ವಿಧಾನಸಭೆಯ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಟೀಕಿಸಿದರು. ಶಾಸಕರಾದವರು ಹೊಗಳಿಕೆ ಮತ್ತು ಟೀಕೆಯನ್ನು ಪಾಸಿಟಿವ್ ಆಗಿ ತೆಗೆದುಕೊಳ್ಳಬೇಕೇ ಹೊರತು ವೈಯಕ್ತಿಕ ದ್ವೇಷ ಬೆಳೆಸಬಾರದು ಎಂದರು. ಅಕ್ರಮ ಮರಳು ದಂಧೆ ಮಾಡುವವರ ವಿರುದ್ಧ ಪ್ರಕರಣ ದಾಖಲಾಗುತ್ತಿಲ್ಲ. ಆದರೆ ಅಭಿವೃದ್ಧಿಪರ ಚಿಂತನೆಯಿಂದ ಸಾಮಾಜಿಕ ಜಾಲತಾಣದಲ್ಲಿ ಸಮಸ್ಯೆಗಳನ್ನು ಪ್ರತಿಬಿಂಬಿಸುವವರ ವಿರುದ್ಧ ಪ್ರಕರಣ ದಾಖಲಾಗುತ್ತಿದೆ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು. ವಿನಯ್ ಸಾವಿನ ಪ್ರಕರಣದಲ್ಲಿ ಸರ್ಕಾರದ ಪ್ರತಿನಿಧಿಗಳು ಪೊಲೀಸ್ ಅಧಿಕಾರಿಗಳಿಗೆ ಯುಡಿಆರ್ ಹಾಕಿ ಎಂದು ಒತ್ತಡ ಹೇರಿದ್ದಾರೆ ಎಂದು ಆರೋಪಿಸಿದ ಕೆ.ಜಿ.ಬೋಪಯ್ಯ, ಅಮಾಯಕ ವಿನಯ್ ಪ್ರಕರಣವನ್ನು ಸಿಬಿಐ ತನಿಖೆಗೆ ನೀಡುವುದು ಸೂಕ್ತವೆಂದು ಅಭಿಪ್ರಾಯಪಟ್ಟರು.

ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಮಹೇಶ್ ಜೈನಿ, ವಕ್ತಾರರಾದ ಬಿ.ಕೆ. ಅರುಣ್ ಕುಮಾರ್, ತಳೂರು ಕಿಶೋರ್ ಕುಮಾರ್ ಹಾಗೂ ಮಾಧ್ಯಮ ವಕ್ತಾರ ಶಜಿಲ್ ಕೃಷ್ಣನ್ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ವಿಧಾನಸಭಾ ಮಾಜಿ ಅಧ್ಯಕ್ಷ ಕೆ.ಜಿ.ಬೋಪಯ್ಯ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವುದು.

ಎಂಎ ಕೊಡವ ಪರೀಕ್ಷೆಯಲ್ಲಿ ಸಹನಾ ಸಿ.ಕೆ. ಪ್ರಥಮ ರ‍್ಯಾಂಕ್



ಮಡಿಕೇರಿ: ಎಂಎ ಕೊಡವ ಪರೀಕ್ಷೆಯಲ್ಲಿ ಮಡಿಕೇರಿಯ ಫೀಮಾ ಕೆಎಂ ಕಾರ್ಯಪ್ಪ ಕಾಲೇಜ್‌ನ ವಿದ್ಯಾರ್ಥಿನಿ ಸಹನಾ ಸಿ.ಕೆ. ಪ್ರಥಮ ರ‍್ಯಾಂಕ್ ಗಳಿಸಿದ್ದಾರೆ. ಇತ್ತೀಚೆಗೆ ನಡೆದ ಮಂಗಳೂರು ವಿಶ್ವವಿದ್ಯಾನಿಲಯದ 43ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸಹನಾಗೆ ರ‍್ಯಾಂಕ್ ಪ್ರದಾನ ಮಾಡಲಾಯಿತು.

ಈಕೆ ಸೋಮವಾರಪೇಟೆ ತಾಲೂಕಿನ ಸೂರ್ಲಬ್ಬಿ ನಾಡಿನ ಮಂಕ್ಯ ಗ್ರಾಮದ ಚಾಮೇರ ಕುಟುಂಬದ ದಿ.ಕಾಳಪ್ಪ ಸಿ.ಟಿ ಹಾಗೂ ಚೋಂದಮ್ಮ.ಪಿ.ಕೆ ದಂಪತಿಯ ತೃತೀಯ ಪುತ್ರಿ ಕಾಲೇಜ್‌ನ ಪ್ರಾಂಶುಪಾಲ ಮೇಜರ್ ಪ್ರೊ.ಬಿ.ರಾಘವ, ಸಿಬ್ಬಂದಿ ಸಹನಾಗೆ ಅಭಿನಂದನೆ ಸಲ್ಲಿಸಿದ್ದಾರೆ.

ಮುದ್ದಂಡ ಕಪ್ ಹಾಕಿ ಉತ್ಸವ : ಅರ್ಹತೆ ಪಡೆದ ತಂಡಗಳು

ಮಡಿಕೇರಿ,ಏ.7–ಮುದ್ದಂಡ ಕಪ್ ಹಾಕಿ ಉತ್ಸವದಲ್ಲಿ ಇಂದು ನಡೆದ ಪಂದ್ಯಾವಳಿಯಲ್ಲಿ ಕರ್ತಮಾಡ, ಚಿಂಡಮಾಡ, ಆಟ್ರಂಗಡ, ಮಳವಂಡ, ಅರೆಯಡ, ಕಾಯಪಂಡ, ಕೋಳೀರ, ಅಪ್ಪಚೆಟ್ಟೋಳಂಡ, ಮನೆಯಪಂಡ, ಆಲೆಮಾಡ, ಚೆಕ್ಕೇರ, ಬೊಜ್ಜಂಗಡ, ಮಚ್ಚಾರಂಡ, ಕೊಂಗಂಡ, ಕಂಬೀರಂಡ, ಬಾಳೆಯಡ, ಕೊಣೇರಿರ, ಇಟ್ಟೀರ ಕುಟುಂಬ ತಂಡಗಳು ಮುಂದಿನ ಹಂತಕ್ಕೆ ಅರ್ಹತೆ ಪಡೆದಿವೆ.



ಅಲ್ಲಂಡ ಮತ್ತು ಮಚ್ಚಾರಂಡ ತಂಡಗಳ ನಡುವೆ ಸೆಣಸಾಟ

ಸಂಭ್ರಮದ ಶ್ರೀರಾಮನವಮಿ ಆಚರಣೆ



ದೇವಾಂಗ ಬೀದಿಯಲ್ಲಿರುವ ಶ್ರೀರಾಮಮಂದಿರದಲ್ಲಿ ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಲಾಯಿತು.

ಯಳಂದೂರು,ಏ.7– ಪಟ್ಟಣವೂ ಸೇರಿದಂತೆ ತಾಲೂಕಿನ ಸುತ್ತಮುತ್ತಲ ಗ್ರಾಮಗಳಲ್ಲಿ ಶ್ರೀರಾಮನವಮಿಯನ್ನು ಸಂಭ್ರಮ, ಸಡಗರಗಳಿಂದ ಆಚರಿಸಲಾಯಿತು.

ಪಟ್ಟಣದ ದೇವಾಂಗ ಬೀದಿ, ಬಳೇಪೇಟೆಯಲ್ಲಿರುವ ಶ್ರೀರಾಮಮಂದಿರ, ಯರಿಯೂರು, ಅಂಬಳೆ, ಬಿಳಿಗಿರಿರಂಗನಬೆಟ್ಟ ಗ್ರಾಮಗಳ ಬೀದಿಗಳಲ್ಲಿರುವ ರಾಮಮಂದಿರಗಳನ್ನು ಹಸಿರು ತಳಿರು, ತೋರಣ, ಹೂವುಗಳಿಂದ ಸಿಂಗರಿಸಲಾಗಿತ್ತು. ಬೆಳಿಗ್ಗೆಯಿಂದಲೇ ಶ್ರೀರಾಮ ದೇವರ ಪಟವನ್ನು ವಿಶೇಷ ಹೂವುಗಳಿಂದ ಸಿಂಗರಿಸಿ ರಾಮನಾಮವನ್ನು ಹಾಡಿ, ನೈವೇದ್ಯಗಳನ್ನಿಟ್ಟು ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು.

ಶತಮಾನದ ಐತಿಹ್ಯ ಇರುವ ಪಟ್ಟಣದ ದೇವಾಂಗ ಬೀದಿಯಲ್ಲಿರುವ ಶ್ರೀ ರಾಮಮಂದಿರದಲ್ಲಿ ರಾಮದೇವರ ಪಟ್ಟಾಭಿಷೇಕ ನಡೆಯುವ ವಾಡಿಕೆ ಇದೆ. ಬಿಸಿಲಿನ ಝಳ ಹೆಚ್ಚಾಗಿದ್ದರಿಂದ ನೀರು ಮಜ್ಜಿಗೆ ಪಾನಕಗಳನ್ನು ಕುಡಿಯಲು ತಂಡೋಪತಂಡವಾಗಿ ಭಕ್ತರು ಬಂದು ಸರತಿ ಸಾಲಿನಲ್ಲಿ ನಿಂತು ಪ್ರಸಾದ ಸ್ವೀಕರಿಸುತ್ತಿದ್ದ ದೃಶ್ಯ ಅಲ್ಲಲ್ಲಿ ಕಾಣಸಿಗುತ್ತಿತ್ತು.

ವಿವಿಧೆಡೆ ಆಚರಣೆ: ತಾಲೂಕಿನ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಬಿಳಿಗಿರಿರಂಗನ ಬೆಟ್ಟದ ದೇಗುಲದಲ್ಲಿ ವಿಶೇಷ ಪೂಜೆಗಳನ್ನು ನೆರವೇರಿಸಲಾಯಿತು. ವಿಷ್ಣುವಿನ ರೂಪವಾಗಿರುವ ಬಿಳಿಗಿರಿರಂಗನಾಥ ಸ್ವಾಮಿಯ ಉತ್ಸವ ಮೂರ್ತಿಯನ್ನು ದೇಗುಲದ ಸುತ್ತ ಪ್ರದಕ್ಷಿಣೆ ಹಾಕಿ ವಿಶೇಷ ಭಕ್ಷ್ಯಗಳನ್ನಿಟ್ಟು ಪೂಜೆ ನೆರವೇರಿಸಲಾಯಿತು.

ಚಾ.ನಗರ ಜಿಲ್ಲೆಯ ವಿವಿಧ ಗ್ರಾಮಗಳ 5,135 ಎಕರೆ ಭೂಮಿ ನಮಗೆ ಸೇರಿದ್ದು!

- ಆಸ್ತಿಗಳ ಖಾತೆ, ದುರಸ್ತಿ ಮಾಡದಂತೆ ರಾಜವಂಶಸ್ಥೆ ಪ್ರಮೋದಾದೇವಿ ತಕರಾರು
- ಸದರಿ ಆಸ್ತಿಗಳುಳ್ಳ ಗ್ರಾಮಗಳ ಕಂದಾಯ ಗ್ರಾಮ ಘೋಷಣೆ ಮಾಡದಂತೆ ಮನವಿ

ಚಾಮರಾಜನಗರ, ಏ.7– ಮೈಸೂರು ಮಹಾರಾಜರಿಗೆ ಸೇರಿರುವ ಸುಮಾರು 5,135 ಎಕರೆ (ಖಾಸಗಿ ಸ್ವತ್ತು) ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಖಾತೆ, ಕಂದಾಯ ಜೋಡಣೆ ಮಾಡದಂತೆ ಜಿಲ್ಲಾಡಳಿತಕ್ಕೆ ಮೈಸೂರು ರಾಜಮನೆತನದ ರಾಜಮಾತೆ ಪ್ರಮೋದಾದೇವಿ ಒಡೆಯರ್ ತಕರಾರು ಅರ್ಜಿ ಸಲ್ಲಿಸಿದ್ದಾರೆ.




ಜಿಲ್ಲಾಧಿಕಾರಿ, ಕೊಳ್ಳೇಗಾಲ ಉಪವಿಭಾಗಾಧಿಕಾರಿ ಮತ್ತು ಚಾಮರಾಜನಗರ ತಹಶೀಲ್ದಾರ್‌ಗೆ ಮಾ. 21ರಂದು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ತಕರಾರು ಅರ್ಜಿ ಸಲ್ಲಿಸಿರುವುದು ತಡವಾಗಿ ಬೆಳಕಿಗೆ ಬಂದಿದೆ.

ಮೈಸೂರು ಮಹಾರಾಜರು ಮತ್ತು ಭಾರತ ಸರ್ಕಾರದ ನಡುವೆ 1950ರ, ಜ. 6ರ ಒಪ್ಪಂದದ ಪ್ರಕಾರ, ಜಿಲ್ಲೆಯಲ್ಲಿನ ವಿವಿಧ ಗ್ರಾಮಗಳಲ್ಲಿನ ಸ್ವತ್ತುಗಳು ಮೈಸೂರು ಮಹಾರಾಜರ ಖಾಸಗಿ ಸ್ವತ್ತಾಗಿರುತ್ತದೆ ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಇದರ ಅನ್ವಯ ಜಿಲ್ಲೆಯ ಚಾಮರಾಜನಗರ, ಅಟ್ಟುಗುಳಿಪುರ, ಹರದನಹಳ್ಳಿ, ಬೂದಿತಿಟ್ಟು, ಕರಡಿಹಳ್ಳ, ಕನ್ನಿಕೆರೆ, ಉಮ್ಮತ್ತೂರು, ಬಸವಪುರ ಸೇರಿದಂತೆ ಇತರೆಡೆ ಇರುವ ಸದರಿ ಸ್ವತ್ತುಗಳಿಗೆ ಸಂಬಂಧಿಸಿದಂತೆ ಯಾವುದೇ ರೀತಿಯ ಖಾತೆ, ದುರಸ್ತಿ ಸೇರಿದಂತೆ ದಾಖಲೆ ಮಾರ್ಪಾಡಿಗೆ ಅವಕಾಶ ಮಾಡಿಕೊಡಬಾರದು. ಇದೇ ವೇಳೆ ತಮ್ಮ ಹೆಸರಿಗೆ ಖಾತೆ ಮಾಡಿಯೂ ಕೊಡುವಂತೆ ಪ್ರಮೋದಾದೇವಿ ಕೋರಿದ್ದಾರೆ.

> ಜಿಲ್ಲೆಯಲ್ಲಿ ಮೈಸೂರು ಮಹಾರಾಜರಿಗೆ ಸೇರಿರುವ ಆಸ್ತಿಗಳ ಸಂಬಂಧ ಪ್ರಮೋದಾದೇವಿ ಒಡೆಯರ್ ಅವರಿಂದ ತಕರಾರು ಅರ್ಜಿ ಬಂದಿದ್ದು, ಈ ಬಗ್ಗೆ ಪರಿಶೀಲಿಸುವಂತೆ ತಹಸೀಲ್ದಾರ್ ಅವರಿಗೆ ಸೂಚನೆ ನೀಡಲಾಗಿದೆ. ವರದಿ ಬಂದ ನಂತರವೇ ಸೂಕ್ತ ಕ್ರಮವಹಿಸಲಾಗುವುದು.
>
> – ಶಿಲ್ಪಾನಾಗ್, ಜಿಲ್ಲಾಧಿಕಾರಿ.

ಇತ್ತೀಚಿನ ಮಾಹಿತಿಯಂತೆ ಈ ಗ್ರಾಮಗಳು ಕಂದಾಯ ಗ್ರಾಮಗಳಾಗಿಸುವುದು ಕಂಡುಬಂದಿದ್ದು, ಸದರಿ ಸ್ವತ್ತುಗಳು ಮಹಾರಾಜರ ಖಾಸಗಿ ಸ್ವತ್ತಾಗಿರುವುದರಿಂದ ಇವುಗಳ ಕಂದಾಯ ಗ್ರಾಮವನ್ನಾಗಿ ಪರಿವರ್ತಿಸದಂತೆಯೂ ತಕರಾರು ಅರ್ಜಿಯಲ್ಲಿ ಪ್ರಸ್ತಾಪಿಸಿದ್ದಾರೆ.

ಜಿಲ್ಲೆಯಲ್ಲಿ ರಾಜವಂಶದ ಆಸ್ತಿ: ಚಾಮರಾಜನಗರ ತಾಲೂಕಿನ ಅಟ್ಟುಗುಳಿಪುರದಲ್ಲಿ 4,445 ಎಕರೆ, ಹರದನಹಳ್ಳಿಯ ವಿವಿಧ ಸರ್ವೆ ನಂಬರ್‌ಗಳಲ್ಲಿ ಸುಮಾರು 150 ಎಕರೆ ಆಸ್ತಿ, ಬೂದಿತಿಟ್ಟಿನಲ್ಲಿ 63 ಎಕರೆ, ಕರಡಿಹಳ್ಳದಲ್ಲಿ ಸುಮಾರು 75 ಎಕರೆ, ಕನ್ನಿಕೆರೆಯಲ್ಲಿ 190 ಎಕರೆ, ಉಮ್ಮತ್ತೂರಿನ ಸರ್ವೆ ನಂಬರ್ 563ರಲ್ಲಿ 199 ಎಕರೆ, ಬಸವನಪುರದಲ್ಲಿ 13 ಎಕರೆ ಚಾಮರಾಜನಗರದ ಪಟ್ಟಣದಲ್ಲಿನ ಜನನ ಮಂಟಪ ಮತ್ತು ಗಾರ್ಡನ್ ಸೇರಿದಂತೆ ಸುಮಾರು 5,135 ಎಕರೆ ಮೈಸೂರು ರಾಜವಂಶದ ಆಸ್ತಿಯಾಗಿದೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.



ಚಾಮರಾಜನಗರ ತಾಲೂಕಿನ ಅಟ್ಟುಗುಳಿಪುರ ವ್ಯಾಪ್ತಿಯ ಸಿದ್ದಯ್ಯನಪುರ ಗ್ರಾಮವನ್ನು ಕಂದಾಯ ಗ್ರಾಮವಾಗಿ ಪರಿವರ್ತಿಸಲು ಜಿಲ್ಲಾಡಳಿತ ಕ್ರಮ ಕೈಗೊಳ್ಳುತ್ತಿದ್ದು, ಈ ಹಿನ್ನೆಲೆಯಲ್ಲಿ ಪ್ರಮೋದಾದೇವಿ ಅವರು ತಕರಾರು ಅರ್ಜಿ ಸಲ್ಲಿಸಿದ್ದಾರೆ ಎಂದು ಹೇಳಲಾಗುತ್ತಿದೆ.

ಮಹಿಳೆಯರಿಂದ ತಯಾರಾದ ಉತ್ಪನ್ನಗಳ ವಸ್ತುಪ್ರದರ್ಶನಕ್ಕೆ ಚಾಲನೆ



ಮಹಿಳಾ ಸಂಘಗಳು ಉತ್ಪಾದಿಸಿದ ಉತ್ಪನ್ನಗಳ ಎರಡು ದಿನಗಳ ವಸ್ತು ಪ್ರದರ್ಶನಕ್ಕೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ಚಾಮರಾಜನಗರ, ಏ.7– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸಂಜೀವಿನಿ–ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಸಂಯುಕ್ತಾಶ್ರಯದಲ್ಲಿ ಸಂಜೀವಿನಿ ಸ್ವ ಸಹಾಯ ಸಂಘಗಳು ಉತ್ಪಾದಿಸಿರುವ ಉತ್ಪನ್ನಗಳ ಎರಡು ದಿನಗಳ ವಸ್ತುಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಚಾಲನೆ ನೀಡಿದರು.

ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಆರಂಭವಾಗಿರುವ ಮೇಳದಲ್ಲಿ ಮಾತನಾಡಿ, ಮಹಿಳಾ ಸ್ವ ಸಹಾಯ ಸಂಘಗಳು ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ವ್ಯವಸ್ಥೆ ಮಾಡಿಕೊಡಲು ಬದ್ಧರಾಗಿದ್ದೇವೆ. ಇಂತಹ ವಸ್ತುಪ್ರದರ್ಶನ ಮಾರಾಟ ಮೇಳಗಳು ಮಹಿಳಾ ಸ್ವ ಸಹಾಯ ಸಂಘಗಳು ತಯಾರು ಮಾಡಿದ ವಸ್ತುಗಳಿಗೆ ಮಾರಾಟ ಮಾಡಲು ಸೂಕ್ತವಾಗಿವೆ ಎಂದು ತಿಳಿಸಿದರು.

ಮಹಿಳಾ ಸಂಘಗಳು ಉತ್ಪಾದಿಸಿದ ಉತ್ಪನ್ನಗಳಿಗೆ ಆನ್‌ಲೈನ್ ಮೂಲಕ ಅವಕಾಶ ಮಾಡಿಕೊಡಬೇಕಿದೆ. ಎಂಎಸ್‌ಐಎಲ್ ಲೇಬಲ್ ಮೂಲಕವು ಮಾರುಕಟ್ಟೆ ಒದಗಿಸುವ ಚಿಂತನೆ ಮಾಡಲಿದ್ದೇವೆ. ಮಹಿಳೆಯರು ಸ್ವಾವಲಂಬಿಗಳಾಗಲು ನೆರವು ನೀಡುವ ಉದ್ದೇಶ ಹೊಂದಿದ್ದೇವೆ ಎಂದರು.

ಜಿಲ್ಲಾಧಿಕಾರಿ ಶಿಲ್ಪಾ ನಾಗ್, ಜಿಪಂ ಸಿಇಓ ಮೋನಾ ರೋತ್ ಅವರೊಂದಿಗೆ ಪ್ರತಿಯೊಂದು ಮಳಿಗೆಗೂ ಗಣ್ಯರು ಭೇಟಿ ನೀಡಿ ಮಾರಾಟಕ್ಕಿಡಲಾದ ಉತ್ಪನ್ನಗಳು, ಸಂಘದ ಚಟುವಟಿಕೆಗಳು ಕಾರ್ಯ ವಿಧಾನಗಳನ್ನು ಆಸಕ್ತಿಯಿಂದ ತಿಳಿದುಕೊಂಡರು. ಮಾರಾಟ ಮಾಡಲು ಇಡಲಾಗಿದ್ದ ಸಿಹಿ ತಿನಿಸುಗಳು, ನೈಸರ್ಗಿಕ ವಸ್ತುಗಳಿಂದ ತಯಾರಿಸಿದ ತಂಪು ಪಾನೀಯವನ್ನು ಸೇವಿಸಿ ಮೆಚ್ಚುಗೆ ವ್ಯಕ್ತಪಡಿಸಿದರು.

ಜಿಪಂ ಯೋಜನಾ ನಿರ್ದೇಶಕ ಕಿರಣ್ ಪಡ್ನೇಕರ್ ಈ ಸಂದರ್ಭದಲ್ಲಿ ಇದ್ದರು.

ಮಾರಾಟ ಮೇಳದಲ್ಲಿ ಕೈಮಗ್ಗದ ಬಟ್ಟೆಗಳು, ಸೀರೆ, ಬ್ಯಾಗ್, ಅಲಂಕಾರಿಕ ವಸ್ತುಗಳು, ಜೇನು, ನೆಲ್ಲಿಕಾಯಿ ಉತ್ಪನ್ನ, ಮಸಾಲ ಪದಾರ್ಥಗಳು, ಹಪ್ಪಳ, ಉಪ್ಪಿನಕಾಯಿ, ಪೂಜಾ ಬುಟ್ಟಿ, ತಂಪು ಪಾನೀಯಗಳು, ಆಹಾರ ತಿನಿಸುಗಳ ಮಳಿಗೆಗಳು ಗಮನಸೆಳೆಯುತ್ತಿದೆ.

50 ಲಕ್ಷ ಅನುದಾನದಲ್ಲಿ ರಸ್ತೆ ಕಾಮಗಾರಿಗೆ ಚಾಲನೆ



ಸತ್ತೇಗಾಲ ಗ್ರಾಮದಲ್ಲಿ 50 ಲಕ್ಷ ವೆಚ್ಚದ ರಸ್ತೆ ನಿರ್ಮಾಣ ಕಾಮಗಾರಿಗೆ ಶಾಸಕ ಮಂಜುನಾಥ್ ಚಾಲನೆ ನೀಡಿದರು.

ಕೊಳ್ಳೇಗಾಲ, ಏ.7– ತಾಲೂಕಿನ ಸತ್ತೇಗಾಲ ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಬಿಡುಗಡೆಯಾಗಿರುವ 50 ಲಕ್ಷ ವೆಚ್ಚದ ರಸ್ತೆ ಕಾಮಗಾರಿಗೆ ಶಾಸಕ ಎಂ.ಆರ್.ಮಂಜುನಾಥ್ ಚಾಲನೆ ನೀಡಿದರು.

ಹನೂರು ಕ್ಷೇತ್ರದ ಸತ್ತೇಗಾಲ ಗ್ರಾಮದ ಅಭಿವೃದ್ಧಿಗೆ ಸಾಕಷ್ಟು ಅನುದಾನ ತರಲಾಗಿದೆ. ಶೀಘ್ರದಲ್ಲೇ ಗ್ರಾಮದ ಸಮಗ್ರ ಅಭಿವೃದ್ಧಿಗೆ ಸ್ಪಂದಿಸಲಾಗುವುದು, ಗುತ್ತಿಗೆದಾರರು ಕಾಮಗಾರಿಯ ಗುಣಮಟ್ಟ ಕಾಯ್ದುಕೊಂಡು ನಿಗದಿತ ವೇಳೆಗೆ ಕಾಮಗಾರಿ ಪೂರ್ಣಗೊಳಿಸಬೇಕು ಎಂದರು.

ಸತ್ತೇಗಾಲ ಗ್ರಾಪಂ ಅಧ್ಯಕ್ಷ ಮಲ್ಲೇಶ್, ಉಪಾಧ್ಯಕ್ಷೆ ಸುವರ್ಣ, ಸದಸ್ಯರು, ಕೆ.ಆರ್.ಡಿ.ಐ.ಎಲ್ ಎಇಇ ಚಿಕ್ಕಲಿಂಗಯ್ಯ ಇನ್ನಿತರಿದ್ದರು

ನಾಳೆ ಗುಂಡ್ಲುಪೇಟೆಗೆ ಲೋಕಾಯುಕ್ತರ ಭೇಟಿ : ದೂರು ಸ್ವೀಕಾರ

ಚಾಮರಾಜನಗರ: ಜಿಲ್ಲೆಯ ಲೋಕಾಯುಕ್ತ ಅಧಿಕಾರಿಗಳು ಏ.9ರಂದು ಗುಂಡ್ಲುಪೇಟೆ ತಾಲೂಕಿಗೆ ಭೇಟಿ ನೀಡಿ, ಸಾರ್ವಜನಿಕರಿಂದ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಚಾರಣೆ ನಡೆಸುವರು. ಪ್ರವಾಸಿ ಮಂದಿರದಲ್ಲಿ ಬೆಳಿಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಸಾರ್ವಜನಿಕರಿಂದ ಕರ್ನಾಟಕ ಲೋಕಾಯುಕ್ತ ಕಾಯ್ದೆಯಡಿ ಭರ್ತಿ ಮಾಡಿದ ದೂರು ಅರ್ಜಿಗಳನ್ನು ಸ್ವೀಕರಿಸಿ ವಿಚಾರಣೆ ಮಾಡುವರು.

ಬಾಗಿಲು ಮೀಟಿ ನಗದು, ಚಿನ್ನಾಭರಣ ಕಳವು

ಚಾಮರಾಜನಗರ, ಏ. 7– ನಗರದ ಪ್ರಗತಿ ನಗರದ ಇಮ್ಯಾನುವೆಲ್ ಸ್ಕೂಲ್ ಬಳಿ ಇರುವ ಮನೆಯೊಂದರಲ್ಲಿ ಭಾನುವಾರ ರಾತ್ರಿ ಕಳ್ಳತನವಾಗಿರುವ ಘಟನೆ ನಡೆದಿದೆ.

ನಂಜುಂಡಸ್ವಾಮಿ ಉರುಫ್ ನಂದಿ ಅವರ ಮನೆಯಲ್ಲಿ 30 ಗ್ರಾಂ ಚಿನ್ನ, 750 ಗ್ರಾಂ. ಬೆಳ್ಳಿ ಹಾಗೂ 1.20 ಲಕ್ಷ ನಗದು ಕಳ್ಳತನವಾಗಿದೆ ಎಂದು ಮನೆಯ ಮಾಲೀಕ ಪಟ್ಟಣ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ.

ಭಾನುವಾರ ರಾತ್ರಿ ಮನೆಯಲ್ಲಿ ಯಾರೂ ಇಲ್ಲದನ್ನು ಗಮನಿಸಿದ ಖದೀಮರು ಮನೆಯ ಬಾಗಿಲು ಮೀಟಿ ಒಳನುಗ್ಗಿ ಚಿನ್ನಾಭರಣ, ನಗದು ಕಳ್ಳತನ ಮಾಡಿದ್ದಾರೆ ಎಂದು ದೂರಿನಲ್ಲಿ ತಿಳಿಸಲಾಗಿದೆ.

ವಿಷಯ ತಿಳಿದು ಸ್ಥಳಕ್ಕೆ ಪಟ್ಟಣ ಠಾಣೆಯ ಪೊಲೀಸರು ಹಾಗೂ ಶ್ವಾನದಳ, ಬೆರಳಚ್ಚು ದಳದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ ಮೊಕದ್ದಮೆ ದಾಖಲಿಸಿಕೊಂಡಿದ್ದಾರೆ.



ಮನೆಯ ಬಾಗಿಲು ಮೀಟಿ ಒಳನುಗ್ಗಿ ಚಿನ್ನಾಭರಣ, ನಗದು ಕಳ್ಳತನವಾಗಿರುವುದು.



ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಏ.7 – ಚಾಮರಾಜನಗರ ಉಪವಿಭಾಗ ವ್ಯಾಪ್ತಿಯ ದೊಡ್ಡರಾಯಪೇಟೆ ವಿದ್ಯುತ್ ಉಪಕೇಂದ್ರದಲ್ಲಿ ತುರ್ತು ಕಾಮಗಾರಿ ನಡೆಸಲಿರುವ ಹಿನ್ನೆಲೆಯಲ್ಲಿ ಏಪ್ರಿಲ್ 8ರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ರಾಮಸಮುದ್ರ ವ್ಯಾಪ್ತಿಯ ದುರ್ಗಿಬೀದಿ, ಕುರುಬರ ಬೀದಿ, ಹಳೇ ಬಾರ್ ಅಕ್ಕಪಕ್ಕದ ಪ್ರದೇಶಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು ಗ್ರಾಹಕರು ಸಹಕರಿಸಬೇಕೆಂದು ನಿಗಮದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಸಿಗ್ಮಾ ಆಸ್ಪತ್ರೆಯಲ್ಲಿ 500ಕ್ಕೂ ಹೆಚ್ಚು ಜನರಿಗೆ ಉಚಿತ ಕಿಡ್ನಿ ಆರೋಗ್ಯ ತಪಾಸಣೆ



ಮೈಸೂರಿನ ಸಿಗ್ಮಾ ಆಸ್ಪತ್ರೆ ವತಿಯಿಂದ ಉಚಿತ ಮೂತ್ರ ಪಿಂಡ ತಪಾಸಣೆ ಕಾರ್ಯಕ್ರಮವನ್ನು ಡಾ. ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು.

ಮೈಸೂರು, ಏ.7– ವಿಶ್ವ ಮೂತ್ರಪಿಂಡ ದಿನದ ಅಂಗವಾಗಿ ಮೈಸೂರಿನ ಸಿಗ್ಮಾ ಆಸ್ಪತ್ರೆ ವತಿಯಿಂದ ಉಚಿತ ಮೂತ್ರ ಪಿಂಡ ತಪಾಸಣೆಯನ್ನು ನಡೆಸಲಾಯಿತು. ಡಾ. ಪ್ರಮೋದಾದೇವಿ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಿದರು.

ಶಾಸಕ ಹರೀಶ್ ಗೌಡ ಮತ್ತು ವಿಶ್ವಶಾಂತಿ ಸಂಸ್ಥೆಯ ಅಧ್ಯಕ್ಷ ಡಾ. ಮೂರ್ತಿ ಅವರು ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿದ್ದರು.

ಎಸ್.ಜ್ಞಾನಶಂಕರ್ ಎಂಡಿ, ಜನರ, ಆರೋಗ್ಯಕ್ಕಾಗಿ ಮೈಸೂರಿನ ರಾಜಮನೆತನದ ಮುಂದಾಳತ್ವವನ್ನು ಸ್ಮರಿಸಿದರು. ಡಾ ಕೆ ಎಂ ಮಾದಪ್ಪ ಅವರು ನಮ್ಮ ಆಸ್ಪತ್ರೆಯಲ್ಲಿ ಕಿಡ್ನಿ ಆರೋಗ್ಯಕ್ಕೆ ಎಲ್ಲಾ ವಿಧವಾದ ಆಧುನಿಕ ಚಿಕಿತ್ಸೆಗಳು, ಕಿಡ್ನಿ ಟ್ರಾನ್ಸಪ್ಲಾಂಟ್ ಸೇರಿ ಎಲ್ಲಾ ಲಭ್ಯವಿದೆ. ಇಲ್ಲಿ 72 ಕಿಡ್ನಿ ಕಸಿ ಮಾಡಲಾಗಿದೆ ಎಂದು ತಿಳಿಸಿದರು. ಬಿಪಿಎಲ್ ಕಾರ್ಡ್‌ದಾರರಿಗೆ ಸರಕಾರದಿಂದ ಉಚಿತವಾದ ಶಸ್ತ್ರಚಿಕಿತ್ಸೆಗೆ ಇಲ್ಲಿ ಅವಕಾಶವಿದೆ ಎಂದರು.

ಡಾ. ಪ್ರಮೋದಾದೇವಿ ಒಡೆಯರ್ ಅವರು ವಿ.ಎಸ್.ಎಸ್ ಮತ್ತು ಸಿಗ್ಮಾ ಆಸ್ಪತ್ರೆಯ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಡಾ.ಅನಿಕೇತ್ ಪ್ರಭಾಕರ್ ಅವರು ಅಂಗಾಂಗ ಕಸಿ ಕಾರ್ಯಕ್ರಮದ ಬಗ್ಗೆ ಮಾತನಾಡಿದರು ಮತ್ತು ಡಾ. ಪ್ರಮೋದಾದೇವಿ ಒಡೆಯರ್ ಅವರು ಈ ವರ್ಷದ ಕಿಡ್ನಿ ದಾನಿಗಳನ್ನು ಸನ್ಮಾನಿಸಿದರು.

ಬಾಕಿ ಬಿಲ್ ಪಾವತಿಸಲು ಗುತ್ತಿಗೆದಾರನಿಂದ 1.45 ಲಕ್ಷ ರೂ. ಲಂಚ ಸ್ವೀಕರಿಸುತ್ತಿದ್ದ

ಕಾವೇರಿ ನೀರಾವರಿ ನಿಗಮದ ಎಕ್ಸಿಕ್ಯೂಟಿವ್ ಇಂಜಿನಿಯರ್, ಅಕೌಂಟ್ಸ್ ಸೂಪರಿಂಟೆಂಡೆಂಟ್ ಲೋಕಾಯುಕ್ತ ಬಲೆಗೆ

ಮೈಸೂರು, ಏ. 7(ಆರ್‌ಕೆ)– ಕಾಮಗಾರಿಯ ಬಾಕಿ ಬಿಲ್ ಪಾವತಿಗೆ ಗುತ್ತಿಗೆದಾರನಿಂದ 1,45,000 ರೂ. ಲಂಚ ಸ್ವೀಕರಿಸುತ್ತಿದ್ದ ಕಾವೇರಿ ನೀರಾವರಿ ನಿಗಮ ನಿಯಮಿತ (ಸಿಎನ್‌ಎನ್‌ಎಲ್)ದ ನಂಜನಗೂಡು ಉಪ ವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಹಾಗೂ ಲೆಕ್ಕ ಶಾಖೆ ಅಧೀಕ್ಷಕನನ್ನು ಲೋಕಾಯುಕ್ತ ಪೊಲೀಸರು, ಹಣದ ಸಮೇತ ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಎಕ್ಸಿಕ್ಯೂಟಿವ್ ಇಂಜಿನಿಯರ್ ಕಾವೇರಿ ರಂಗನಾಥ್ ಮತ್ತು ಅಕೌಂಟ್ಸ್ ಸೂಪರಿಂಟೆಂಡೆಂಟ್ ಉಮಾ ಮಹೇಶ್ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದ ಅಧಿಕಾರಿಗಳು. 2022ರಲ್ಲಿ ಪೂರ್ಣಗೊಳಿಸಿದ 5 ನಾಲಾ ಕಾಮಗಾರಿಗಳ 23,10,000 ರೂ. ಬಿಲ್ ಪಾವತಿಸಲು 1,45,000 ರೂ. ಲಂಚ ಕೊಡುವಂತೆ ಗುತ್ತಿಗೆದಾರ ಚಾಮರಾಜನಗರದ ಅಬ್ದುಲ್ ಅಜೀಜ್ ಎಂಬುವರಿಗೆ ಅಧಿಕಾರಿಗಳು ಬೇಡಿಕೆ ಇಟ್ಟಿದ್ದರು.

ಲಂಚದ ಹಣಕ್ಕೆ ತೀವ್ರ ಒತ್ತಡ ತರುತ್ತಿದ್ದ ಕಾರಣ ಅಬ್ದುಲ್ ಅಜೀಜ್, ಮೈಸೂರಿನ ಲೋಕಾಯುಕ್ತ ಎಸ್ಪಿ ಕಚೇರಿಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಎಸ್ಪಿ ಟಿ.ಜೆ. ಉದೇಶ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ



ಉಮಾ ಮಹೇಶ್ ಮತ್ತು ಕಾವೇರಿ ರಂಗನಾಥ್

ನಡೆಸಿದಾಗ ಇಂದು ಮಧ್ಯಾಹ್ನ ಸುಮಾರು 3.45 ಗಂಟೆ ವೇಳೆಯಲ್ಲಿ ನಂಜನಗೂಡಿನ ಕಾವೇರಿ ನೀರಾವರಿ ನಿಗಮದ ಕಾರ್ಯಪಾಲಕ ಇಂಜಿನಿಯರ್ ಕಚೇರಿಯಲ್ಲಿ 23,10,000 ರೂ. ಬಿಲ್ ಮೊತ್ತದ ಶೇ. 6ರಂತೆ 1,45,000 ರೂ. ಲಂಚ ಸ್ವೀಕರಿಸುತ್ತಿದ್ದಾಗ ಕಾವೇರಿ ರಂಗನಾಥ್ ಮತ್ತು ಉಮಾ ಮಹೇಶ್ ಹಣದ ಸಮೇತ ಸಿಕ್ಕಿಬಿದ್ದಿದ್ದಾರೆ.

ಆರೋಪಿಗಳನ್ನು ಬಂಧಿಸಿರುವ ಲೋಕಾಯುಕ್ತ ಪೊಲೀಸರು, ವಿಚಾರಣೆ ನಡೆಸಿದ ಬಳಿಕ ಇಂದು ರಾತ್ರಿ ನ್ಯಾಯಾಧೀಶರ ಮುಂದೆ ಅವರ ನಿವಾಸದಲ್ಲಿ ಹಾಜರುಪಡಿಸಿದ್ದು, ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ಮೈಸೂರು ಡಿವೈಎಸ್ಪಿ ಮ್ಯಾಥ್ಯೂ ಥಾಮಸ್ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಇನ್‌ಸ್ಪೆಕ್ಟರ್‌ಗಳಾದ ರವಿಕುಮಾರ್, ಶಶಿಕುಮಾರ್, ಸಿಬ್ಬಂದಿಗಳಾದ ಅರಸು, ಪ್ರದೀಪ್‌ಕುಮಾರ್, ಮೋಹನ್‌ಕುಮಾರ್, ಮಹೇಶ, ಮೋಹನ್‌ಗೌಡ, ಕುಮಾರ ಆರಾಧ್ಯ, ಮಹಾಲಿಂಗಸ್ವಾಮಿ, ಮನು ಹಾಗೂ ಗುರು ಪಾಲ್ಗೊಂಡಿದ್ದರು.

ಶೇ. 6 ಸಾಲಲ್ಲ, ಶೇ. 10 ಕೊಡು!

ಮೈಸೂರು, ಏ. 7(ಆರ್‌ಕೆ)– ಬೇಡಿಕೆ ಇಟ್ಟಿದ್ದಂತೆ ಒಟ್ಟು ಮೊತ್ತದ ಶೇ. 6ರಂತೆ 1,45,000 ರೂ. ಲಂಚ ಕೊಡಲು ಹಣ ತೆಗೆದುಕೊಂಡು ಹೋಗಿದ್ದಾಗ 'ಶೇ. 6 ಸಾಲಲ್ಲ, ಶೇ. 10ರಂತೆ 2,31,000 ರೂ. ಕೊಡು' ಎಂದು ಕಾವೇರಿ ರಂಗನಾಥ್ ಹಾಗೂ ಉಮಾ ಮಹೇಶ್ ಗುತ್ತಿಗೆದಾರ ಅಬ್ದುಲ್ ಅಜೀಜ್‌ಗೆ ಬೇಡಿಕೆ ಇಟ್ಟಿದ್ದರಂತೆ.

ಮಫ್ತಿಯಲ್ಲಿದ್ದ ಲೋಕಾಯುಕ್ತ ಪೊಲೀಸರೊಂದಿಗೆ ನಂಜನಗೂಡು ಕಾವೇರಿ ನೀರಾವರಿ ನಿಗಮದ ಕಚೇರಿಗೆ ಹೋಗಿ 'ನೀವು ಕೇಳಿದಂತೆ 1,45,000 ರೂ. ತಂದಿದ್ದೇನೆ, ದಯಮಾಡಿ ಬಾಕಿ ಬಿಲ್ ಚೆಕ್ ಕೊಡಿ' ಎಂದು ಅಬ್ದುಲ್ ಅಜೀಜ್ ಬೇಡಿಕೊಂಡರೂ, 23,10,000 ರೂ. ಬಿಲ್ ಪಾವತಿಸಬೇಕೆಂದರೆ ಶೇ. 10ರಂತೆ 2,30,000 ರೂ. ಕೊಡಲೇಬೇಕೆಂದು ಖಡಕ್ ಆಗಿ ಹೇಳಿದ್ದಾರೆ.

ಸುಮಾರು 10 ನಿಮಿಷ ಮಾತುಕತೆ ನಡೆಸಿದ ಬಳಿಕ ಕಡೆಗೆ ಆಯ್ತು, ಈಗ 1,45,000 ಹಣ ತೋಗೋಳಿ, ಉಳಿದ ಹಣವನ್ನು ನಾಳೆ ಕೊಡುತ್ತೇನೆಂದು ಗುತ್ತಿಗೆದಾರ ಒಪ್ಪಿಕೊಂಡ ನಂತರವಷ್ಟೇ ಗುತ್ತಿಗೆದಾರನಿಂದ ಹಣ ಪಡೆದು ಎಣಿಸಿಕೊಳ್ಳುತ್ತಿದ್ದಾಗ ಅಷ್ಟೂ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಂಡ ಲೋಕಾಯುಕ್ತ ಪೊಲೀಸರು, ಕಾವೇರಿ ರಂಗನಾಥ್ ಮತ್ತು ಉಮಾ ಮಹೇಶ್‌ನನ್ನು ವಶಕ್ಕೆ ಪಡೆದರು.

ಇಂದು ಸಂಜೆ ಮೈಸೂರಿನ ಬೋಗಾದಿ ಬಳಿಯ ಕಾವೇರಿ ರಂಗನಾಥ್, ಮನೆ ಮತ್ತು ಉಮಾ ಮಹೇಶ್ ಅವರ ಸಿದ್ಧಾರ್ಥನಗರ ಮನೆಗಳ ಮೇಲೂ ದಾಳಿ ನಡೆಸಿದ ಪೊಲೀಸರು, ತಡರಾತ್ರಿವರೆಗೂ ಶೋಧ ನಡೆಸಿದರು.

'ಮಾಣಿಕ್ಯ ರತ್ನ', ಆದರ್ಶ ದಂಪತಿ ಪ್ರಶಸ್ತಿ ಪ್ರದಾನ



ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಿಗೆ 'ಮಾಣಿಕ ರತ್ನ' ಪ್ರಶಸ್ತಿ ಹಾಗೂ 'ಆದರ್ಶ ದಂಪತಿ' ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆ ವತಿಯಿಂದ ವಿತರಿಸಲಾಯಿತು.

ಮೈಸೂರು, ಏ.7(ಎಸ್‌ಪಿಎನ್)– ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಿಗೆ 'ಮಾಣಿಕ್ಯ ರತ್ನ' ಪ್ರಶಸ್ತಿ ಹಾಗೂ 'ಆದರ್ಶ ದಂಪತಿ' ಪ್ರಶಸ್ತಿಯನ್ನು ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆ ವತಿಯಿಂದ ವಿತರಿಸಲಾಯಿತು.

ಮೈಸೂರು ರಾಮಾನುಜ ರಸ್ತೆಯ ನಮೋ ಯೋಗಭವನದಲ್ಲಿ ಕರ್ನಾಟಕ ರಾಜ್ಯ ವೈಚಾರಿಕ ಚಿಂತಕರ ವೇದಿಕೆ ವತಿಯಿಂದ ಏರ್ಪಡಿಸಿದ್ದ ವಿಶ್ವ ಮಹಿಳಾ ದಿನಾಚರಣೆಯಲ್ಲಿ ವಿವಿಧ ಕ್ಷೇತ್ರದ ಸಾಧಕ ಮಹಿಳೆಯರಾದ ಡಾ.ದೀಪಿಕಾ ಮಾಧವ ಪಾಂಡುರಂಗಿ, ಪದ್ಮಶ್ರೀ ರಾವ್, ನೀಲಮ್ಮ, ಜಯಶ್ರೀ ಶಿವಾರಾಂ, ರೂಪ ಕವಿತಾ ಶಿರೂರು, ಮೀನಾಕ್ಷಿ ಚಟ್ನಿ, ಲಲಿತಾ ಸಿ.ಕುಮಾರಿ, ಎನ್.ಚೂಡಾಮಣಿ ಅವರಿಗೆ ಮೈಸೂರು ಮಾಣಿಕ್ಯ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸ್ವಾತಿ ಮತ್ತು ಸತ್ಯ ದಂಪತಿ, ಚಂದ್ರಕಲಾ ದೊರೆಸ್ವಾಮಿ ದಂಪತಿಗಳಿಗೆ ಆದರ್ಶ ದಂಪತಿ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಸೆಸ್ಕಾಂ ಎನ್.ಆರ್.ಮೊಹಲ್ಲಾ ವಿಭಾಗ ಕಾರ್ಯನಿರ್ವಾಹಕ ಇಂಜಿನಿಯರ್ ಎಸ್.ಪಿ.ಅನಿತಾ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಎಚ್.ಪಿ.ರಾಣಿ ಪ್ರಭಾ, ಆರ್.ಜಿ.ರವಿಶಂಕರ್, ಶ್ರೀಕ್ಯಾತನಹಳ್ಳಿ ಪ್ರಕಾಶ್, ಪ್ರಮತ ಮಂಜು, ಪನ್ನಗ, ಆರ್. ವಿನೋಧ, ಆರ್.ಕಾವೇರಿ, ಗೀತಾ, ಶ್ರೀಧರ್, ನಂದಿನಿ, ಮಾನಸ, ಹರ್ಷಿತ, ನಗರ್ಲೆ ಶಿವಕುಮಾರ್, ಸುಜಾತ, ಅನ್ನಪೂರ್ಣ, ಯಮುನಾ, ಜಯಮ್ಮ, ರಾಜಣ್ಣ, ಜೋಸೆಫ್, ದಾಕ್ಷಯಿಣಿ, ಸುಬ್ರಹ್ಮಣ್ಯ ಉಪಸ್ಥಿತರಿದ್ದರು. ನಂತರ ಶ್ರೀರಾಮನವಮಿ ಆಚರಿಸಿ, ಪಾನಕ ಮಜ್ಜಿಗೆ ವಿತರಿಸಲಾಯಿತು.

2025–26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಬಿಡುಗಡೆ

ಮೈಸೂರು, ಏ.7(ಎಸ್‌ಪಿಎನ್)– ಕರ್ನಾಟಕ ರಾಜ್ಯ ಶಾಲಾ ಶಿಕ್ಷಣ ಇಲಾಖೆಯು 2025– 26ನೇ ಸಾಲಿನ ಶೈಕ್ಷಣಿಕ ವೇಳಾಪಟ್ಟಿ ಬಿಡುಗಡೆ ಮಾಡಿದೆ.

ಈ ಶಾಲೆಗಳನ್ನು ಮೇ 29ರಿಂದ ಆರಂಭಿಸಲು ಮಾರ್ಗಸೂಚಿ ಬಿಡುಗಡೆ ಮಾಡಿದ್ದು, ರಾಜ್ಯ ಪಠ್ಯಕ್ರಮದ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರಾಥಮಿಕ, ಪ್ರೌಢಶಾಲೆಗಳಿಗೆ ಇದು ಅನ್ವಯವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ಮೇ 29ರಿಂದ ಶಾಲೆಗಳು ಆರಂಭವಾಗಲಿದ್ದು, ವಾರ್ಷಿಕ ಶೈಕ್ಷಣಿಕ ಕ್ರಿಯಾ ಯೋಜನೆಯ ವೇಳಾಪಟ್ಟಿಯನ್ನು ಕೂಡ ಇಲಾಖೆ ಪ್ರಕಟಿಸಿದೆ. ಮೇ 29 ರಿಂದ ಸೆಪ್ಟೆಂಬರ್ 19 ರವರೆಗೆ ಮೊದಲ ಅವಧಿ ಹಾಗೂ ಅ.8 ರಿಂದ 2026ರ ಏಪ್ರಿಲ್ 10 ರವರೆಗೆ ಎರಡನೇ ಅವಧಿಯಲ್ಲಿ ಶಾಲೆಗಳು ಕರ್ತವ್ಯ ನಿರ್ವಹಿಸಲಿವೆ. ಸೆ.20 ರಿಂದ ಅ.7 ರವರೆಗೆ ದಸರಾ ರಜೆ ಮತ್ತು 2026ರ ಏಪ್ರಿಲ್ 11 ರಿಂದ ಮೇ 28 ರವರೆಗೆ ಬೇಸಿಗೆ ರಜೆ ಇರಲಿದೆ. ಈ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಬಿಸಿಯೂಟ ನೀಡುವ ಸಲುವಾಗಿ ಸಾಮಗ್ರಿಗಳನ್ನು ಸುರಕ್ಷಿತವಾಗಿ ಸಂಗ್ರಹಿಟ್ಟುಕೊಳ್ಳುವಂತೆ ಸೂಚಿಸಿದೆ.

ಕರ್ತವ್ಯದ ದಿನಗಳು 242: ಪ್ರಸಕ್ತ ಸಾಲಿನಲ್ಲಿ 123 ದಿನಗಳು ರಜೆಯ ದಿನಗಳಾಗಿರುತ್ತವೆ. ಉಳಿದ 242 ದಿನಗಳು ಶಾಲೆ ನಡೆಯಲಿವೆ. 242 ದಿನಗಳಲ್ಲಿ ಪರೀಕ್ಷೆ ಮತ್ತು ಮೌಲ್ಯಾಂಕನ ಕಾರ್ಯಕ್ಕಾಗಿ 26 ದಿನಗಳನ್ನು ನಿಗದಿ ಮಾಡಲಾಗಿದೆ. ಪಠ್ಯೇತರ ಚಟುವಟಿಕೆ, ಪಠ್ಯ ಚಟುವಟಿಕೆ, ಸ್ಪರ್ಧೆಗಳ ನಿರ್ವಹಣಾ ಕಾರ್ಯಕ್ಕಾಗಿ 22 ದಿನ ನಿಗದಿಪಡಿಸಲಾಗಿದೆ ಮೌಲ್ಯಮಾಪನ ಮತ್ತು ಫಲಿತಾಂಶ ವಿಶ್ಲೇಷಣೆ ಕಾರ್ಯಕ್ಕಾಗಿ 10 ದಿನ, ಶಾಲಾ ಸ್ಥಳೀಯ ರಜೆಗಳಿಗೆ 04 ದಿನ ಮತ್ತು ಬೋಧನಾ ಕಲಿಕಾ ಪ್ರಕ್ರಿಯೆಗೆ ಉಳಿಯುವ ಕರ್ತವ್ಯಕ್ಕೆ 178 ದಿನಗಳನ್ನು ಮೀಸಲಿಡಲಾಗಿದೆ.

ಈ ವರ್ಷ ಪ್ರಾಥಮಿಕ ಶಾಲೆಗಳಲ್ಲಿ ಏ.8 ಮತ್ತು ಪ್ರೌಢಶಾಲೆಗಳಲ್ಲಿ ಏ.9 ರಂದು ಸಮುದಾಯದತ್ತ ಶಾಲೆ ಕಾರ್ಯಕ್ರಮ ಹಾಗೂ ಪೋಷಕರ ಸಭೆ ಕರೆದು ಫಲಿತಾಂಶ ಪ್ರಕಟಿಸಬೇಕು.

ಏ.14 ರಂದು ಡಾ. ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಎಲ್ಲ ಶಾಲೆಗಳಲ್ಲಿಯೂ ಆಚರಿಸಬೇಕು. ಕ್ರಿಸ್‌ಮಸ್ ರಜೆ ಬೇಡಿಕೆಯನ್ನು ಸಂಬಂಧಿಸಿದ ಶಿಕ್ಷಣ ಸಂಸ್ಥೆಗಳು ತಮ್ಮ ವ್ಯಾಪ್ತಿಯ ಜಿಲ್ಲಾ ಉಪ ನಿರ್ದೇಶಕರಿಗೆ ಸಲ್ಲಿಸಿ ಆನಂತರ ಘೋಷಿಸಬೇಕು. ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಣ ನೀಡಲು ಸರ್ಕಾರ ನೀಡುವ ಸೌಲಭ್ಯಗಳನ್ನು ಜನರಿಗೆ ತಿಳಿಸಲು ಮಿಂಚಿನ ಸಂಚಾರ ಕೈಗೊಂಡು ದಾಖಲಾತಿ ಪ್ರಮಾಣ ಹೆಚ್ಚಳ ಮಾಡಬೇಕು ಎಂದು ಶಾಲಾ ಶಿಕ್ಷಣ ಇಲಾಖೆ ಆಯುಕ ಡಾ.ಕೆ.ವಿ.ತ್ರಿಲೋಕ ಚಂದ್ರ ಅವರು, ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಬಾಲ್ ಬ್ಯಾಡ್ಮಿಂಟನ್‌ನಲ್ಲಿ ದ್ವಿತೀಯ ಸ್ಥಾನ



ಮೈಸೂರು ವಿಶ್ವವಿದ್ಯಾನಿಲಯ ವತಿಯಿಂದ ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 2024–25ನೇ ಸಾಲಿನ ಮೈಸೂರು ನಗರ ಅಂತರ ಕಾಲೇಜುಗಳ ಮಹಿಳೆಯರ ಬಾಲ್ ಬ್ಯಾಡ್ಮಿಂಟನ್ ಸ್ಪರ್ಧೆಯಲ್ಲಿ ದ್ವಿತೀಯ ಸ್ಥಾನಗಳಿಸಿದ ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಪದವಿ ವಿದ್ಯಾರ್ಥಿಗಳ ತಂಡದೊಂದಿಗೆ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ.ಬಿ.ವಿ.ಸಾಂಬಶಿವಯ್ಯ, ಪ್ರಾಂಶುಪಾಲ ಡಾ.ಎಂ.ಪ್ರಭು ಹಾಗೂ ಸಿಬ್ಬಂದಿ ವರ್ಗವನ್ನು ಚಿತ್ರದಲ್ಲಿ ಕಾಣಬಹುದು.

ಹಿರಿಯರು ಚಟುವಟಿಕೆಯಲ್ಲಿ ಸದಾ ತೊಡಗಿಸಿಕೊಂಡಿರಬೇಕು


ಸ್ತ್ರೀರೋಗ ತಜ್ಞೆ ಡಾ.ಎಸ್.ಪೂರ್ಣಿಮಾ ಕಿವಿಮಾತು

ಮೈಸೂರು,ಏ.7(ಎಸ್‌ಪಿಎನ್)– ಹಿರಿಯರು ತಮ್ಮ ಆರೋಗ್ಯ ಕಾಪಾಡಿಕೊಳ್ಳಲು ದಿನನಿತ್ಯ ಸದಾ ಒಂದಿಲ್ಲೊಂದು ಚಟುವಟಿಕೆಯಲ್ಲಿ ಭಾಗಿಯಾಗಬೇಕು ಎಂದು ಹಿರಿಯ ಸ್ತ್ರೀ ರೋಗ ತಜ್ಞೆ ಡಾ.ಎಸ್. ಪೂರ್ಣಿಮಾ ಸಲಹೆ ನೀಡಿದರು.

ಮೈಸೂರು ಜಯಲಕ್ಷ್ಮೀಪುರಂ ಹಿರಿಯ ನಾಗರಿಕ ಮಂಡಳಿ ಆವರಣದ ಸರಸ್ವತಿ ಸಮುದಾಯ ಭವನದಲ್ಲಿ ನಡೆದ 'ಹಿರಿಯ ನಾಗರಿಕರ ಆರೋಗ್ಯ ಸುಧಾರಣೆ ಉತ್ತಮ ಜೀವನವನ್ನು ನಡೆಸುವ ಕುರಿತು' ವಿಶೇಷ ಉಪನ್ಯಾಸ ನೀಡಿದರು.

ಹಿರಿಯರು ತಮ್ಮ ಕಾಯಿಲೆಗಳ ಬಗ್ಗೆ ಸದಾ ಚಿಂತಿಸದೇ ಮನೆಯಲ್ಲಿ ತಮ್ಮ ಕೈಲಾಗುವ ಕೆಲಸದಲ್ಲಿ ತೊಡಗಿಸಿಕೊಳ್ಳಲು ಪ್ರಯತ್ನಿಸಬೇಕು. ಮನೆ ಮುಂದಿನ ಕೈದೋಟ ಸ್ವಚ್ಛತೆ, ಮನೆ ಸಮೀಪವಿರುವ ಅಂಗಡಿ ತೆರಳಿ ಮನೆಗೆ ಬೇಕಾದ ಸಾಮಾಗ್ರಿ ತರುವ ಪ್ರಕ್ರಿಯೆ. ಹೀಗೆ ಸರಳವಾಗಿರುವ ಕೆಲಸಗಳಲ್ಲಿ ತೊಡಗಿಸಿಕೊಂಡು ವೃದ್ಧಾಪ್ಯ ಜೀವನ ನಡೆಸುವ ಮನಸ್ಥಿತಿಗೆ ಹೊಂದಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಧುಮೇಹ, ರಕ್ತದೊತ್ತಡ ತಹಬದಿಗೆ ಒತ್ತಡರಹಿತ ಬದುಕು ರೂಪಿಸಿಕೊಳ್ಳಲು ಪ್ರಯತ್ನಿಸಬೇಕು ಹಾಗೂ ವೃದ್ಧಾಪ್ಯದಲ್ಲಿ ರೋಗ ಮುಕ್ತ ಜೀವನ ನಡೆಸಲು



ಹಿರಿಯ ಸ್ತ್ರೀ ರೋಗ ತಜ್ಞೆ ಡಾ.ಎಸ್. ಪೂರ್ಣಿಮಾ ಮಾತನಾಡುತ್ತಿರುವುದು

65 ರಿಂದ 80 ವರ್ಷದವರೆಗಿನ ಹಿರಿಯ ನಾಗರಿಕರ ಬದುಕು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಹೇಗಿದೆ ಎಂಬುದರ ಕುರಿತು ಸಮೀಕ್ಷೆ ನಡೆಸಲು ಕೇಂದ್ರ ಸರ್ಕಾರ ವ್ಯಾಪ್ತಿಯ ಅಂಥರೋಪೋಲೊಜಿ ಸರ್ವೆ ಆಫ್ ಇಂಡಿಯಾ ಇಲಾಖೆ ಮುಂದಾಗಿದ್ದು, ಹಿರಿಯ ನಾಗರಿಕರು ಯಾವ್ಯಾವ ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ನಗರ ಪ್ರದೇಶದಲ್ಲಿ ಅವರ ಬದುಕಿನ ನಿರ್ವಹಣೆ ಹಾಗೂ ಆರೋಗ್ಯ ಪರಿಸ್ಥಿತಿ ಕುರಿತು ಸಮೀಕ್ಷೆ. ಹಾಗೂ ಆರೋಗ್ಯ ಸಮಸ್ಯೆಗಳಿಗೆ ಈಗಿನ ಹೆಲ್ತ್ ಕೇರ್ ಸಿಸ್ಟಮ್‌ಗಳು ಸದ್ಬಳಕೆಯಾಗುತ್ತಿದೆಯೇ, ಇಲ್ಲವೇ ಎಂಬುದರ ಸಾಧಕ–ಬಾಧಕ ಕುರಿತು ಸಮೀಕ್ಷೆ ನಡೆಸಲಾಗುತ್ತಿದೆ.

ಕ್ರಮಬದ್ಧ ಆಹಾರ ಸೇವನೆ, ಶಿಸ್ತುಬದ್ಧ ಜೀವನ ನಡೆಸಲು ಮುಂದಾಗಬೇಕು. ಆಧ್ಯಾತ್ಮ, ಧ್ಯಾನ, ಯೋಗದ ಮೂಲಕ ವೃದ್ಧಾಪ್ಯದ ಕಾಯಿಲೆ ನಿರ್ವಹಣೆ ಮಾಡುವುದನ್ನು ಕಲಿತುಕೊಳ್ಳಬೇಕು ಎಂದು ಸಲಹೆ ನೀಡಿದರು.

ಈ ವೇಳೆ ಹಿರಿಯ ನಾಗರಿಕರ ಮಂಡಳಿಯ ಅಧ್ಯಕ್ಷ ಡಾ.ಎಚ್.ಎಂ. ನಾಗರಾಜ್, ಸದಸ್ಯರಾದ ಜವರೇಗೌಡ, ಜಯಪಾಲ್, ಡಾ.ಶ್ರೀನಿವಾಸ, ಸುಶೀಲ ಮರೀಗೌಡ, ಎಸ್.ಮನೋರಮಾ, ಲತಾ, ಎಸ್.ಪಿ.ವೆಂಕಟೇಶಯ್ಯ, ಸಣ್ಣನಿಂಗೇಗೌಡ, ಡಾ.ಕೆ.ಶಂಕರೇಗೌಡ, ಅನುಪ್‌ರಾಜ್ ಕೆ. ಡಾ.ಮೋಪಡನಾಣಿ ಬಾಬು, ಆರ್ನ ಚೈತನ್ಯ, ಜಿ.ಸಂದ್ಯಾ, ಕೆ.ವಿ.ರಾಮಮನಾಥ್, ಕೆ.ಎಸ್.ಕೃಷ್ಣ ಸೇರಿದಂತೆ ಉಪಸ್ಥಿತರಿದ್ದರು.

ಏ.26 ರಾಜ್ಯಾದಾದ್ಯಂತ ಎರಡು ಕೋಟಿ ತೆಂಗಿನ ಕಾಯಿ ಒಡೆಯುವ ಚಳುವಳಿ



ಮೈಸೂರಿನ ಹಾರ್ಡಿಂಗ್ ವೃತ್ತದಲ್ಲಿ ವಾಟಾಳ್ ನಾಗರಾಜ್ ಕನ್ನಡಿಗರ ಸಮಗ್ರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಪ್ರತಿಭಟನೆ ಮಾಡಿದರು.

ಮೈಸೂರು, ಏ.6(ಜಿಎ)–ಕನ್ನಡಿಗರ ಸಮಗ್ರ ಬೇಡಿಕೆ ಈಡೇರಿಸುವಂತೆ ಆಗ್ರಹಿಸಿ ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ನಗರದ ಹಾರ್ಡಿಂಗ್ ವೃತ್ತದ ಬಳಿ ತೆಂಗಿನಕಾಯಿ ಒಡೆಯುವ ಮೂಲಕ ವಿಭಿನ್ನವಾಗಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಹಾರಾಷ್ಟ್ರ ಏಕೀಕರಣ ಸಮಿತಿ ನಿಷೇಧ ಮಹದಾಯಿ–ಕಳಸ–ಬಂಡೂರಿ ಯೋಜನೆ, ಕನ್ನಡಿಗರಿಗೆ ಉದ್ಯೋಗ, ಮೇಕೆದಾಟು ಯೋಜನೆ ಜಾರಿಯಾಗಬೇಕು ಎಂಬ ಉದ್ದೇಶ ಇಟ್ಟುಕೊಂಡು ಏ.26 ರಂದು ರಾಜ್ಯಾದ್ಯಂತ ಎರಡು ಕೋಟಿ ತೆಂಗಿನ ಕಾಯಿ ಒಡೆಯುವ ಮೂಲಕ ತೀವ್ರವಾಗಿ ಚಳವಳಿ ಮಾಡಲಾಗುವುದು. ತೆಂಗಿನ ಕಾಯಿ ಎಲ್ಲ ಬೇಕಾದರೂ ಒಡೆಯ ಬಹದು. ಜನರು ಹೋರಾಟಕ್ಕೆ ಬೆಂಬಲ ನೀಡಬೇಕು ಎಂದರು.

ಬಂಡೀಪುರ ರಾತ್ರಿ ಸಂಚಾರ ಪ್ರಾರಂಭ ಮಾಡುವುದಕ್ಕೆ, ಹಲವು ರೀತಿ ಪ್ರಯತ್ನ ಮಾಡಲಾಗುತ್ತಿದೆ.ಇದರ ಹಿಂದೆ ಯಾರಿದ್ದಾರೆ, ಒತ್ತಡ ಹಾಕುತ್ತಿರುವವರು ಯಾರು? "ಕರ್ನಾಟಕ ಸರ್ಕಾರ, ಕೇರಳ ಸರ್ಕಾರಕ್ಕೆ ಮಣಿದು ರಾತ್ರಿ ಸಂಚಾರ ನಿಷೇದ ತೆರವು ಮಾಡಿದರೆ ಅಪಾಯ ಎದುರಾಗಲಿದೆ. ರಾತ್ರಿ ಸಂಚಾರ ಮಾಡುವುದಕ್ಕೆ ಅವಕಾಶ ಕೊಟ್ಟರೆ, ಪ್ರಾಣಿ ಸಂಕುಲಗಳಿಗೆ ತೊಂದರೆಯಾಗುತ್ತದೆ. ನಮ್ಮಲ್ಲಿ ಹುಲಿಗಳ ಸಂತತಿ ಕಡಿಮೆಯಾಗುತ್ತಿದೆ. ಹೀಗಾಗಿ ರಾತ್ರಿ ಸಂಚಾರ ನಿಷೇಧ ತೆರವು ಮಾಡಬಾರದು. ರಾಜ್ಯ ಸರ್ಕಾರ ಒತ್ತಡಕ್ಕೆ ಮಣಿದು ರಾತ್ರಿ ಸಂಚಾರ ತೆರವುಗೊಳಿಸಿದರೆ ಉಗ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು.

ಪ್ರತಿಭಟನೆಯಲ್ಲಿ ಹೋರಾಟ ಗಾರರಾದ ಶಿವಶಂಕರ್, ಪಾರ್ಥಸಾರಥಿ, ತೇಜಸ್ ಲೋಕೇಶ್‌ಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಕಳಸಾರೋಹಣ ಮಹೋತ್ಸವ...



ಮೈಸೂರು ತಾಲೂಕು, ಜಯಪುರ ಹೋಬಳಿಯ ಮಾದಹಳ್ಳಿ ಗ್ರಾಮದಲ್ಲಿ ಶ್ರೀ ವೀರಭದ್ರೇಶ್ವರ, ಶ್ರೀ ಮಹದೇಶ್ವರ, ಶ್ರೀ ಬಸವೇಶ್ವರಸ್ವಾಮಿ ಮತ್ತು ಶ್ರೀ ಸಿದ್ದಪ್ಪಾಜಿ ಸೇವಸ್ಥಾನಗಳ ಜೀರ್ಣೋದ್ಧಾರ, ಅಂಕಸ್ಥಾಪನೆ ಹಾಗೂ ಕಳಸಾರೋಹಣ ಮಹೋತ್ಸವ ಸೋಮವಾರ ನೆರವೇರಿತು. ಸುತ್ತೂರು ಶ್ರೀಗಳು ಸೇರಿದಂತೆ ವಿವಿಧ ಮಠಾಧೀಶರು, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಮುಖಂಡ ಕವೀಶ್‌ಗೌಡ ಮತ್ತಿತರರು ಪಾಲ್ಗೊಂಡಿದ್ದರು.

ಏ.10ರಂದು ನಮ್ರತಾ ಜೋಯಿಸ್ ಭರತನಾಟ್ಯ ರಂಗಪ್ರವೇಶ

ಮೈಸೂರು,ಏ.7(ಪಿಎಂ)– ವಸುಂಧರ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ ಮೈಸೂರು ವತಿಯಿಂದ ಏ.10ರಂದು ನಮ್ರತಾ ಜೋಯಿಸ್ ಅವರ ಭರತನಾಟ್ಯ ರಂಗಪ್ರವೇಶ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಕುವೆಂಪುನಗರದ ಗಾನಭಾರತಿಯ ರಮಾಗೋವಿಂದ ಕಲಾವೇದಿಕೆಯಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಅಂದು ಸಂಜೆ 5.30ಕ್ಕೆ ಅಂತಾರಾಷ್ಟ್ರೀಯ ಖ್ಯಾತಿಯ ಸಂಗೀತಶಾಸ್ತ್ರಜ್ಞ, ಕರ್ನಾಟಕ ಕಲಾಶ್ರೀ ಡಾ.ಆರ್.ಎಸ್.ನಂದಕುಮಾರ್ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಯಾಗಿ ನಿವೃತ್ತ ಪ್ರಾಧ್ಯಾಪಕಿ ಡಾ.ಎಂ.ಸುಶೀಲಾ ಅರಸ್, ನೂಪುರ ಕಲಾವಿದರ ಟ್ರಸ್ಟ್‌ನ ನಾಟ್ಯಾಚಾರ್ಯ ಪ್ರೊ.ಕೆ.ರಾಮಮೂರ್ತಿ ರಾವ್ ಪಾಲ್ಗೊಳ್ಳಲಿದ್ದಾರೆ. ನಮ್ರತಾ ಅವರ ಗುರುಗಳಾದ ಡಾ.ವಸುಂಧರ ದೊರೆಸ್ವಾಮಿ ಅವರು ಗುರುವಂದನೆ ಸ್ವೀಕರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಏ.13ರಂದು ಸಾಂಸ್ಕೃತಿಕ ಸ್ಪರ್ಧೆ

ಮೈಸೂರು,ಏ.7(ಪಿಎಂ)– ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ವತಿಯಿಂದ ಏ.13ರಂದು ಸಂಘದ ಸದಸ್ಯರು, ಅವರ ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರಿಗೆ ಚಿತ್ರಕಲೆ, ಗಾಯನ, ನೃತ್ಯ ಹಾಗೂ ಪಿಕ್ ಅಂಡ್ ಸ್ಪೀಚ್ ಒಳಗೊಂಡ ಸಾಂಸ್ಕೃತಿಕ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಜಯಲಕ್ಷ್ಮೀಪುರಂನ ಕೊಡಗು ಸಹಕಾರ ಸಂಘದ ಆವರಣದಲ್ಲಿ ಅಂದು ಬೆಳಗ್ಗೆ 10.30ಕ್ಕೆ ಸ್ಪರ್ಧೆಗಳ ಉದ್ಘಾಟನೆಯಾಗಲಿದೆ. ಮುಖ್ಯ ಅತಿಥಿಯಾಗಿ ಸಿ.ಸೀತಮ್ಮ ಕಾಳಯ್ಯ ಪಾಲ್ಗೊಳ್ಳಲಿದ್ದು, ಶ್ರೀ ಕಾವೇರಿ ಕೊಡಗು ಮಹಿಳಾ ಸಂಘದ ಅಧ್ಯಕ್ಷೆ ಕೆ.ಬೊಳ್ಳಮ್ಮ ಕುಟ್ಟಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡಾ.ಭ.ನಾಗರಾಜರ 'ಟ್ವಿನ್ಸ್', 'ಕೆವೋಸ್ ಡೋಂಟ್ ಡೆಸ್ಟ್ರಾಯ್' ಕಾದಂಬರಿಗಳ ಬಿಡುಗಡೆ

ಮೈಸೂರು, ಏ.6(ಎಸ್‌ಪಿಎನ್)– ಹಿರಿಯ ವೈದ್ಯಲೇಖಕರಾದ ಡಾ.ಭ.ನಾಗರಾಜ್ ರಚಿಸಿರುವ 'ಟ್ವಿನ್ಸ್' ಮತ್ತು 'ಕೆವೋಸ್ ಡೋಂಟ್ ಡೆಸ್ಟ್ರಾಯ್' ಅನುವಾದಿತ ಆಂಗ್ಲಭಾಷಾ ಕಾದಂಬರಿಗಳನ್ನು ಶನಿವಾರ ಬಿಡುಗಡೆಗೊಳಿಸಲಾಯಿತು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಭದ್ರಶೆಟ್ಟಿ ಬಳಗದ ಸಹಯೋಗದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಆಂಗ್ಲಭಾಷಾ ಕೃತಿ ಬಿಡುಗಡೆ ಸಮಾರಂಭದಲ್ಲಿ ಯುವರಾಜ ಕಾಲೇಜಿನ ಆಂಗ್ಲಭಾಷಾ ಉಪನ್ಯಾಸಕಿ ಎಚ್.ನಿವೇದಿತಾ ಮಾತನಾಡಿದರು.

ಲೇಖಕ ಡಾ.ಭ.ನಾಗರಾಜ್ ಅವರ ಅನುಭವ, ಅವರು ಗುರುತಿಸಿಕೊಂಡು ಕ್ಷೇತ್ರದಲ್ಲಿನ ಭಾವಗಳು 'ಕೆವೋಸ್ ಡೊಂಟ್ ಡೆಸ್ಟ್ರಾಯ್' ಕಾದಂಬರಿಯಲ್ಲಿನ ಪಾತ್ರಗಳ ಮೂಲಕ ಹೊರಹೊಮ್ಮಿದೆ. ಅದು ಆಸ್ತಿ ವಿಚಾರವಾಗಿರಬಹುದು. ಆಧ್ಯಾತ್ಮ ವಿಚಾರವಾಗಿರಬಹುದು ಅಥವಾ ನಮ್ಮ ಸುತ್ತಮುತ್ತಲಿನ ಸಂಸ್ಕೃತಿ, ಪರಂಪರೆ ವಿಚಾರವಾಗಿಯೂ ಪಾತ್ರಗಳ ಮೂಲಕ ನಿರ್ವಹಿಸಿದ್ದಾರೆ. ಪ್ರಧಾನವಾಗಿ ಮಹಿಳಾ ಕೇಂದ್ರಿತ ಕಥಾವಸ್ತುವಾಗಿದೆ ಎಂದರು.

ಮಧ್ಯಮ ವರ್ಗದ ಕುಟುಂಬಗಳ ಸವಾಲಿನ ಕುರಿತು ಬಿಂಬಿಸುವ 'ಕೆವೋಸ್ ಡೋಂಟ್ ಡೆಸ್ಟ್ರಾಯ್' ಆಂಗ್ಲಭಾಷಾ ಕಾದಂಬರಿ ಸಾರಸ್ವತ ಲೋಕದಲ್ಲಿ ಹೊಸ ಭಾಷ್ಯವನ್ನು ತೆರೆದಿಟ್ಟಿದೆ. ಈ ಕಾದಂಬರಿಯಲ್ಲಿ ಲೇಖಕರು ಗುರುತಿಸಿಕೊಂಡಿರುವ ಕ್ಷೇತ್ರಗಳ ಭಾವಗಳು ಪಾತ್ರಗಳ ಮೂಲಕ ಅಮೋಘವಾಗಿ ಮೂಡಿ ಬಂದಿದ್ದು, ಈ ಕೃತಿಯನ್ನು ಪ್ರತಿಯೊಬ್ಬರು ಓದಬೇಕು ಎಂದು ಸಲಹೆ ನೀಡಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ ಮಾತನಾಡಿ, ರವೀಂದ್ರನಾಥ್ ಟ್ಯಾಗೂರ್ ಮೊದಲು ತಮ್ಮ ಕೃತಿಗಳನ್ನು ಬಂಗಾಳಿ ಭಾಷೆಯಲ್ಲಿ ರಚಿಸಿದರು. ನಂತರ ತಮ್ಮ ಕೃತಿಗಳನ್ನೇ ಆಂಗ್ಲಭಾಷೆಗೆ ತರ್ಜುಮೆ ಮಾಡಿದರು. ನಂತರ ಅವರಿಗೆ ನೊಬೆಲ್ ಪ್ರಶಸ್ತಿ ಸೇರಿದಂತೆ ಇತರೆ ಅಂತರರಾಷ್ಟ್ರೀಯ ಮಟ್ಟಗಳು ಪ್ರಶಸ್ತಿಗಳು ಲಭಿಸಿದವು. ಅದೇ ರೀತಿ ಲೇಖಕ ಡಾ.ಭ.ನಾಗರಾಜ್ ರಚಿತ 'ಟ್ವಿನ್ಸ್' ಮತ್ತು 'ಕೆವೋಸ್ ಡೋಂಟ್ ಡೆಸ್ಟ್ರಾಯ್' ಕಾದಂಬರಿಗಳು ಈಗಾಗಲೇ ಕನ್ನಡದಲ್ಲಿ ರಚಿತವಾಗಿವೆ. ಈ ಕೃತಿಗಳನ್ನೇ ಆಂಗ್ಲಭಾಷೆಗೆ ತರ್ಜುಮೆ ಮಾಡಿ, ಸಾಹಿತ್ಯ ಲೋಕದಲ್ಲಿ ವಿಶಿಷ್ಟ ಲೇಖಕರ ಸಾಲಿನಲ್ಲಿ ನಿಲ್ಲುತ್ತಾರೆ ಎಂದರು.

ಕನ್ನಡ ಸಾಹಿತ್ಯ ಕಲಾಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಡಾ.ಭನಾಗರಾಜ್ ಅವರು, ಈಗಾಗಲೇ ಹಲವು ಕೃತಿಗಳನ್ನು ರಚಿಸಿ, ಸಾರಸ್ವತ ಲೋಕದಲ್ಲಿ ಲೇಖನಿ ಮೂಲಕ ತಮ್ಮದೇ ಛಾಪು ಮೂಡಿಸಿದ್ದಾರೆ. 'ಟ್ವಿನ್ಸ್' ಮತ್ತು 'ಕೆವೋಸ್ ಡೋಂಟ್ ಡೆಸ್ಟ್ರಾಯ್' ಅನುವಾದಿತ ಕೃತಿಗಳು ಈಗಾಗಲೇ ಕನ್ನಡದಲ್ಲೂ ರಚಿತವಾಗಿವೆ. ಓದುಗರಿಗೆ ಇಂಗ್ಲಿಷ್ ಅಥವಾ ಕನ್ನಡ ಭಾಷೆಗಳಲ್ಲಿ ಲಭ್ಯವಿದೆ ಎಂದರು.

ಲಂಡನ್ ಇನ್ಫೋಸಿಸ್ ಉದ್ಯೋಗಿ ಭಚೇತನ್ ಅವರು, 'ಟ್ವಿನ್ಸ್' ಕಾದಂಬರಿ ಕುರಿತು ಮಾತನಾಡಿದರು. ಸರ್ಕಾರಿ ಪ್ರಕೃತಿ ಚಿಕಿತ್ಸಾ ಯೋಗ ಕಾಲೇಜು ಹಾಗೂ ಆಸ್ಪತ್ರೆಯ ನಿವೃತ್ತ ಪ್ರಾಂಶುಪಾಲ ಡಾ.ಕೆ.ಎಸ್.ಶಾಂತರಾಮ್, ಲೇಖಕ ನಗರ್ಲೆ ಶಿವಕುಮಾರ್, ಲೇಖಕ ಡಾ.ಭ.ನಾಗರಾಜ್ ಉಪಸ್ಥಿತರಿದ್ದರು.



ಹಿರಿಯ ವೈದ್ಯಲೇಖಕರಾದ ಡಾ.ಭ.ನಾಗರಾಜ್ ರಚಿಸಿರುವ 'ಟ್ವಿನ್ಸ್' ಮತ್ತು 'ಕೆವೋಸ್ ಡೊಂಟ್ ಡೆಸ್ಟ್ರಾಯ್' ಅನುವಾದಿತ ಆಂಗ್ಲಭಾಷಾ ಕಾದಂಬರಿಗಳನ್ನು ಶನಿವಾರ ಬಿಡುಗಡೆಗೊಳಿಸಲಾಯಿತು.

ಒಳ ಮೀಸಲಾತಿ ಜಾರಿಗೊಳಿಸದೇ ಬಡ್ತಿ ನೇಮಕಕ್ಕೆ ಮುಂದಾದರೇ

ಮುಂಬರುವ ಚುನಾವಣೆಯಲ್ಲಿ ರಾಜಕೀಯ ಭವಿಷ್ಯ ನಿರ್ಣಾಮ

ಸಿಎಂ, ಉಸ್ತುವಾರಿ ಸಚಿವರಿಗೆ ಎಚ್ಚರಿಕೆ

ತಿ.ನರಸೀಪುರ, ಏ.7– ಒಳ ಮೀಸಲಾತಿ ಜಾರಿಗೊಳಿಸದೇ ಬಡ್ತಿ ನೇಮಕಕ್ಕೆ ಮುಂದಾದರೇ ಮುಂಬರುವ ಚುನಾವಣೆಯಲ್ಲಿ ನಿಮ್ಮ ರಾಜಕೀಯ ಭವಿಷ್ಯ ನಿರ್ಣಾಮ ಮಾಡುತ್ತೇವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಾದಿಗ ಹೋರಾಟ ಸಮಿತಿ ಪಾದಯಾತ್ರೆ ಹಾಗೂ ಕ್ರಾಂತಿಕಾರಿ ರಥಯಾತ್ರೆ ರೂವಾರಿ ಭಾಸ್ಕರ್ ಪ್ರಸಾದ್ ಎಚ್ಚರಿಕೆ ನೀಡಿದರು.

ಪಟ್ಟಣದ ವಿದ್ಯೋದಯ ಕಾಲೇಜಿಗೆ ಸೋಮವಾರ ಸಂಜೆ ಒಳ ಮೀಸಲಾತಿಗಾಗಿ ಕ್ರಾಂತಿಕಾರಿ ರಥಯಾತ್ರೆಯೊಂದಿಗೆ ಆಗಮಿಸಿ ಮಾತನಾಡಿದ ಅವರು, ಮಹದೇವಪ್ಪನವರೇ ನೀವ್ಯಾಕೆ ಜಾತಿ ರೋಗಿಯಾಗಿ ಕೊಳೆಯುತ್ತಿದ್ದೀರಾ, ಮಾದಿಗ ಮೀಸಲಾತಿಗಾಗಿ 35 ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಕಳೆದ ವಿಧಾನಸಭಾ ಚುನಾವಣೆ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ಸದಾಶಿವ ಆಯೋಗದ ವರದಿಯನ್ನು ಮೊದಲ ಜಾರಿ ಮಾಡುತ್ತೇವೆ ಎಂದು ಹೇಳಿತ್ತು. ಸರ್ಕಾರ ಬಂದು 2 ವರ್ಷಗಳಾಗಿವೆ. ಆದರೂ ಯಾವುದೇ ಮಾತಿಲ್ಲ. ಮತ್ತೆ 2 ತಿಂಗಳ ಕಾಲಾವಕಾಶ ಕೇಳಿದ್ದಾರೆ. ಈ ಗ್ಯಾಪ್‌ನಲ್ಲಿ ಸಚಿವ ಮಹದೇವಪ್ಪ, ಸಿಎಂ ಸಿದ್ದರಾಮಯ್ಯ ನಮ್ಮ ಸಮುದಾಯಕ್ಕೆ ಅನ್ಯಾಯ ಮಾಡದೇ ಸುಮ್ಮನಿರಬೇಕಿತ್ತು. ಆದರೆ 2024ನೇ ಸಾಲಿನಲ್ಲಿ ಆಗಿರುವ



ರಥಯಾತ್ರೆಯಲ್ಲಿ ಭಾಸ್ಕರ್ ಪ್ರಸಾದ್ ಮಾತನಾಡಿದರು.

ನೇಮಕಾತಿಗಳಿಗೆ ತಿದ್ದುಪಡಿ ತಂದು 8500 ಹುದ್ದೆಗಳನ್ನು ತುಂಬುವ ನೀಚ ಕೆಲಸಕ್ಕೆ ಕೈ ಹಾಕಿದ್ದು, ನಮ್ಮ ಹೋರಾಟದ ಫಲದಿಂದ ತಡೆಯಾಯ್ತು. ಅಲ್ಲದೇ ಹೊಸ ನೇಮಕಾತಿ ಮಾಡುವಂತಿಲ್ಲ ಎಂದು ಬ್ಯಾಕ್‌ಲಾಗ್ ಹುದ್ದೆ ತುಂಬುವ ಕೆಲಸಕ್ಕೆ ಕೈ ಹಾಕಿದರು. 23 ವರ್ಷಗಳಿಂದ ಕಾಯ್ದಿರಿಸಿದ್ದ 36 ಸಾವಿರ ಸರ್ಕಾರಿ ಹುದ್ದೆಗಳನ್ನು ಕೇವಲ 2 ತಿಂಗಳಲ್ಲಿ ತುಂಬಿದರೆ ನಮ್ಮ ಸಮುದಾಯದ ಮಕ್ಕಳು ಭಿಕ್ಷಾಪಾತ್ರೆ ಹಿಡಿದು ಹೋಗಬೇಕಾ ಎಂದು ಪ್ರಶ್ನಿಸಿದ ಅವರು ನಮ್ಮ ಹೋರಾಟದ ಫಲವಾಗಿ ಅದಕ್ಕೂ ತಡೆಯಾಗಿದೆ ಎಂದರು.

ಇದೀಗ ಮಹದೇವಪ್ಪ ಒಳ ಮೀಸಲಾತಿ ಜಾರಿಯಾಗದೇ ಬಡ್ತಿ ನೇಮಕಾತಿ ಮಾಡುವ ಪ್ರಕ್ರಿಯೆಗೆ ಕೈ ಹಾಕಿದ್ದಾರೆ. ಬ್ಯಾಕ್‌ಲಾಗ್ ಮೂಲಕ ಹುದ್ದೆಗಳ ಭರ್ತಿಗೆ ಹೊರಟಿದ್ದಾರೆ. ಈ ಪ್ರಕ್ರಿಯೆಯಿಂದ ನಮ್ಮ ಸಮುದಾಯದ ಬಂಧುಗಳಿಗೆ ಸಿಗಬೇಕಾದ ಪ್ರಮೋಷನ್ ಸಿಗುತ್ತಿಲ್ಲ. ಹೆಚ್.ಸಿ.ಮಹದೇವಪ್ಪ, ಸಿಎಂ ಸಿದ್ದರಾಮಯ್ಯ ಅವರನ್ನು ಕೈಗೊಂಬೆ ಮಾಡಿಕೊಂಡಿದ್ದಾರೆ. ಅಂಬೇಡ್ಕರ್ ಕೊಟ್ಟ ಸಂವಿಧಾನದ ಸಮಾನತೆ ಕೊಡ್ತೀವಿ ಅಂತ ಭಾಷಣ ಬಿಗಿಯುವ ನೀವು, ಅವರ ಜನ್ಮ ದಿನಾಚರಣೆ ಮಾಡ್ತೀರಾ, ಜಗಜೀವನರಾಂ ಉದ್ದೇಶಗಳನ್ನು ಜನರಿಗೆ ಸಾರುವ ಕೆಲಸ ಮಾಡ್ತೀರಾ, ಆದರೆ ನೀವು ಜಾತಿ ಮಾನಸಿಕ ರೋಗಿಯಾಗಿ ಕೊಳೆಯುತ್ತಿದ್ದೀರಾ. ಮಾದಿಗ ಸಮುದಾಯ ಕಣ್ಣೀರಾಕಿದರೆ ಅವರ ನಿಟ್ಟುಸಿರು ನಿಮ್ಮನ್ನು ಬಿಡುತ್ತಾ ಎಂದು ಆಕ್ರೋಶ ವ್ಯಕ್ತಪಡಿಸಿದರು.

ರಥಯಾತ್ರೆಗೆ ಅದ್ದೂರಿ ಸ್ವಾಗತ: ಇದಕ್ಕೂ ಮೊದಲು ಮೂಗೂರಿನಿಂದ ಪಟ್ಟಣಕ್ಕೆ ಆಗಮಿಸಿದ ಒಳಮೀಸಲಾತಿ ಜಾರಿಗಾಗಿ ಕ್ರಾಂತಿಕಾರಿ ರಥಯಾತ್ರೆಯನ್ನು ಸಮಾಜದ ಮುಖಂಡರು ಪಟ್ಟಣದ ವಿದ್ಯೋದಯ ಕಾಲೇಜು ವೃತ್ತದಲ್ಲಿ ಅದ್ಧೂರಿಯಾಗಿ ಬರಮಾಡಿಕೊಂಡರು.

ಸಾಮಾಜಿಕ ನ್ಯಾಯಪರ ವೇದಿಕೆಯ ಡಾ.ಮರಡೀಪುರ ರವಿಕುಮಾರ್, ಹೋರಾಟಗಾರ ಅರಕಲವಾಡಿ ನಾಗೇಂದ್ರ, ಚಿಂತಕ ವಿ.ಆರ್.ಕಾರ್ಪೆಂಟರ್, ಬೂದಿತಿಟ್ಟು ರಾಜೇಂದ್ರ, ಡಾ.ದುಂಡಯ್ಯ ಎಲೆಮಾಳ, ಹೈಕೋರ್ಟ್ ವಕೀಲ ಪ್ರಕಾಶ್, ಮಂಜುನಾಥ್, ಮೂಗೂರು ಸಿದ್ದರಾಜು, ಬಾಬು ಜಗಜೀವನ ರಾಮ್ ಸಂಘದ ಅಧ್ಯಕ್ಷ ಸಿ.ಪುಟ್ಟಯ್ಯ, ಭೈರಾಪುರ ಬಾಲು, ನಾಗರಾಜು, ಜನ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಮಲಿಯೂರು ಶಂಕರ್, ಭೈರಾಪುರ ಬಾಲು, ಮಹಾದೇವ, ನಾಗರಾಜು ತಾಲೂಕಿನ ಮಾದಿಗ ಸಮುದಾಯದ ಮುಖಂಡರು ಯುವಕ ಮಿತ್ರರು ಮತ್ತಿತರರಿದ್ದರು.

ಸಮಾಜ ಕಲ್ಯಾಣ ಇಲಾಖೆ ಸಚಿವರೇ ಮಾದಿಗರ ಮೊದಲ ವೈರಿ

ಹಿರಿಯ ವಕೀಲ ಅರುಣ್ ಕುಮಾರ್ ಮಾತನಾಡಿ, ಎಲ್ಲಾ ಸಮೀಕ್ಷೆಗಳು, ಎಲ್ಲಾ ಕಮಿಷನ್ ರಿಪೋರ್ಟ್‌ಗಳು ರಾಜ್ಯದಲ್ಲಿ ಮಾದಿಗರೇ ಸಂಖ್ಯೆಯಲ್ಲಿ ನಂಬರ್ ಒನ್ ಎಂದು ಹೇಳಿವೆ. ಆದರೆ ಎಲ್ಲೋ ಒಂದು ಕಡೆ ಮಾದಿಗರು ನಂಬರ್ ಒನ್ ಎಂದು ಒಪ್ಪಿಕೊಳ್ಳಲು ಇನ್ನೂ ಆಗುತ್ತಿಲ್ಲ. ಯಾಕಂದರೆ ಸಿಎಂ ಸೀಟು ಎಲ್ಲಿ ತಪ್ಪಿ ಹೋಗುತ್ತದೋ ಎಂದು ಟವೆಲ್ ಹಾಕಿಕೊಂಡಿದ್ದಾರಲ್ಲ ಅದಕ್ಕಾಗಿ. ಕಳೆದ ಬಾರಿ ಜನಗಣತಿಯಲ್ಲಿ ಮೊದಲು ಪೆನ್ಸಿಲ್‌ನಲ್ಲಿ ಬರೆದು ನಂತರ ಪೆನ್‌ನಲ್ಲಿ ತಿದ್ದಿದ ಕುತಂತ್ರ ನಮಗೆ ಗೊತ್ತಿದೆ. ಈ ಬಾರಿ ಗಟ್ಟಿಯಾಗಿ, ಸ್ಪಷ್ಟವಾಗಿ ಸರ್ಕಾರಕ್ಕೆ ಹೇಳುತ್ತೇವೆ. ಒಳ ಮೀಸಲಾತಿಗೆ ಸಂಬಂಧಪಟ್ಟಂತೆ ನಡೆಯುವ ಸಮೀಕ್ಷೆಯಲ್ಲಿ 101 ಜಾತಿಯಲ್ಲಿ ಒಬ್ಬ ಪ.ಜಾತಿಯವನಿರಬಾರದು. ಇತರೆ ಸಮಾಜದವರು ಸಮೀಕ್ಷೆ ಮಾಡಬೇಕು. ಈ ವಿಷಯದಲ್ಲಿ ನಮಗೆ ನಂಬರ್ ಒನ್ ವೈರಿ ಸಮಾಜ ಕಲ್ಯಾಣ ಇಲಾಖೆ ಸಚಿವರು. ನಾನು ಇದನ್ನು ಸುಮ್ಮನೇ ಹೇಳುತ್ತಿಲ್ಲ. ನಾನೊಬ್ಬ ಜವಾಬ್ದಾರಿಯುತ ವಕೀಲ, ಎಲ್ಲಾ ದಾಖಲಾತಿ ಇಟ್ಟಿದ್ದೇನೆ. 2024ರಲ್ಲಿ ಮೊದಲ ಕ್ಯಾಬಿನೆಟ್‌ನಲ್ಲಿ ಯಾವುದೇ ಬ್ಯಾಕ್‌ಲಾಗ್ ಹುದ್ದೆಯನ್ನಾಗಲೀ, ಬಡ್ತಿಯಲ್ಲಿ ಮೀಸಲಾತಿ ಕೊಡಲ್ಲ. ಹೊಸ ನೇಮಕಾತಿ ಮಾಡಲ್ಲ ಎಂದು ಸಿಎಂ ಸಿದ್ದರಾಮಯ್ಯ ಸಹಿ ಹಾಕಿದ್ದಾರೆ. ಆದರೆ ಸಮಾಜ ಕಲ್ಯಾಣ ಇಲಾಖೆಯಲ್ಲಿ ದಾಖಲಾತಿ ತೆಗೆಸಲಿ, ಅವರೇ ಮೊದಲ ಕುತಂತ್ರಿಗಳು, ತಿದ್ದುಪಡಿ, ಸುಪ್ರೀಂ ಕೋರ್ಟ್, ಹೈ ಕೋರ್ಟ್ ಆರ್ಡರ್ ಇದೆ ಎಂದು ಹೇಳುತ್ತಾರೆ. ಆದರೆ ಭಾಸ್ಕರ್ ಪ್ರಸಾದ್ ಹೋರಾಟ ಮಾಡಿ ಬಿಸಿ ಮುಟ್ಟಿಸಿದ ನಂತರ ನೇಮಕಾತಿ ನಿಂತಿತಾದರೂ ಬಡ್ತಿಯಲ್ಲಿನ ಮೀಸಲಾತಿ ನಿಲ್ಲಿಸಲೇ ಇಲ್ಲ ಎಂದರು.

ಹೈರಿಗೆ ಗ್ರಾಮದಲ್ಲಿ ಹುಲಿ ಪ್ರತ್ಯಕ್ಷ

● ಕಾಡಿಗೆ ಓಡಿಸುವಲ್ಲಿ ಯಶಸ್ವಿಯಾದ ಅರಣ್ಯಾಧಿಕಾರಿಗಳು

● ಹುಲಿ ಸೆರೆಗೆ ಗ್ರಾಮಸ್ಥರ ಒತ್ತಾಯ



ಹುಣಸೂರು, ಏ.7– ತಾಲೂಕಿನ ಹೈರಿಗೆ ಗ್ರಾಮದ ಜಮೀನಿನಲ್ಲಿ ಸೋಮವಾರ ಮುಂಜಾನೆ ಹುಲಿ ಪ್ರತ್ಯಕ್ಷ ವಾಗಿದೆ.

ಗ್ರಾಮದ ತಿಮ್ಮೇಗೌಡರ ಜಮೀನಿನಲ್ಲಿ ಹುಲಿ ಕಾಣಿಸಿಕೊಂಡಿರುವುದು. ಇಂದು ಮುಂಜಾನೆ ತಿಮ್ಮೇಗೌಡರು ಕಾರ್ಮಿಕರೊಂದಿಗೆ ತಮ್ಮ ಜಮೀನಿನಲ್ಲಿ ಬೆಳೆದಿದ್ದ ಬೀನ್ಸ್‌ಗೆ ಔಷಧ ಸಿಂಪಡಿಸಲು ತೆರಳಿದ್ದರು. ಈ ವೇಳೆ ಹುಲಿ ಪ್ರತ್ಯಕ್ಷವಾಗಿದೆ. ಇದರಿಂದ ಭಯಗೊಂಡ ಎಲ್ಲರೂ ಅಲ್ಲಿಂದ ಓಡಿ ಬಂದು ಗ್ರಾಮಸ್ಥರಿಗೆ ವಿಷಯ ಮುಟ್ಟಿಸಿದ್ದಾರೆ. ನಂತರ ಗ್ರಾಮಸ್ಥರು ಜಮೀನಿಗೆ ಬಳಿ ತೆರಳಿ ಹುಲಿ ಓಡಿಸಲು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ತಕ್ಷಣ ಅರಣ್ಯ ಇಲಾಖೆ ಅಧಿಕಾರಿಗಳಿಗೆ ವಿಷಯ ಮುಟ್ಟಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಆರ್‌ಎಫ್‌ಓ ನಂದಕುಮಾರ್ ಹಾಗೂ ಆನೆ ಕಾರ್ಯಪಡೆ ಸಿಬ್ಬಂದಿ ಪಟಾಕಿ ಸಿಡಿಸಿ ಹುಲಿಯನ್ನು ಕಾಡಿಗೆ ಓಡಿಸಲು ಪ್ರಯತ್ನಿಸಿದರಾದರೂ ಯಾವುದೇ ಪ್ರಯೋಜನವಾಗಲಿಲ್ಲ. ಬದಲಿಗೆ ಹುಲಿ ಜಮೀನಿನಲ್ಲಿ ಮಲಗಿತ್ತು ಎನ್ನಲಾಗಿದೆ. ಅಂತಿಮವಾಗಿ ಅರಣ್ಯಾಧಿಕಾರಿಗಳು ಸತತ ಎರಡೂವರೆ ಗಂಟೆಗಳ ಕಾಲ ಕಾರ್ಯಾಚರಣೆ ನಡೆಸಿ ಗಾಳಿಯಲ್ಲಿ ಗುಂಡು ಹೊಡೆದು ಹುಲಿಯನ್ನು ಮುತ್ತುರಾಯನ ಹೊಸಹಳ್ಳಿ ಕಾಡಿಗೆ ಓಡಿಸುವಲ್ಲಿ ಯಶಸ್ವಿಯಾದರು.

ಹುಲಿ ಸೆರೆಗೆ ಒತ್ತಾಯ: ಈ ಭಾಗದಲ್ಲಿ ಹುಲಿ ಹಾವಳಿ ಹೆಚ್ಚಾಗಿದ್ದು, ಕೂಡಲೇ ಬೋನಿಟ್ಟು ಹುಲಿ ಸೆರೆ ಹಿಡಿಯುವಂತೆ ಹೈರಿಗೆ ಗ್ರಾಮಸ್ಥರು ಅರಣ್ಯ ಇಲಾಖೆ ಅಧಿಕಾರಿಗಳನ್ನು ಒತ್ತಾಯಿಸಿದರು.

ಆಗಾಗ್ಗೆ ಹುಲಿ ದಾಳಿ ನಡೆಸಿ ಸಾಕು ಪ್ರಾಣಿಗಳನ್ನು ಬಲಿ ಪಡೆಯುತ್ತಿದೆ. ಇದರಿಂದ ಸಾಕಷ್ಟು ನಷ್ಟ ಅನುಭವಿಸುವಂತಾಗಿದೆ. ಅಲ್ಲದೇ ರೈತರು ಸಹ ತಮ್ಮ ಜಮೀನುಗಳಿಗೆ ತೆರಳಲು ಭಯಪಡುವಂತಾಗಿದೆ. ಇದೀಗ ತಿಮ್ಮೇಗೌಡರ ಜಮೀನಿನಲ್ಲಿ ಹುಲಿ ಪ್ರತ್ಯಕ್ಷವಾಗಿದ್ದು, ಮತ್ತಷ್ಟು ಹೆದರುವಂತಾಗಿದೆ. ಹೀಗಾಗಿ ಕೂಡಲೇ ಹುಲಿ ಸೆರೆಗೆ ಮುಂದಾಗಬೇಕು ಎಂದು ಒತ್ತಾಯಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಅರಣ್ಯಾಧಿಕಾರಿಗಳು ಈ ವಿಷಯ ಮೇಲಧಿಕಾರಿಗಳ ಗಮನಕ್ಕೆ ತಂದು ಬೋನಿಟ್ಟು ಹುಲಿ ಸೆರೆ ಹಿಡಿಯಲು ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಪಿಡಿಓ, ಅಧ್ಯಕ್ಷರ ವಿರುದ್ಧ ಸದಸ್ಯರ ಪ್ರತಿಭಟನೆ

ಕೆ.ಆರ್.ನಗರ, ಏ.7– ಪಿಡಿಓ ಸರ್ವಾಧಿಕಾರಿ ಧೋರಣೆ ಮತ್ತು ಅವರಿಗೆ ಬೆಂಬಲ ನೀಡುತ್ತಿರುವ ಅಧ್ಯಕ್ಷರ ವಿರುದ್ಧ ತಿಪ್ಪೂರು ಗ್ರಾಪಂನ ಕೆಲವು ಸದಸ್ಯರು ಗ್ರಾಪಂ ಕಚೇರಿಗೆ ಬೀಗ ಹಾಕಿ ಪ್ರತಿಭಟನೆ ನಡೆಸಿದರು.

ತಾಲೂಕಿನ ತಿಪ್ಪೂರು ಗ್ರಾಪಂ ಪಿಡಿಓ ಜಿ.ಎಲ್.ಧನಂಜಯ ಅವರು ಸಾಮಾನ್ಯ ಸಭೆಗಳಲ್ಲಿ ನಮಗೆ ಸಮರ್ಪಕ ಮಾಹಿತಿ ನೀಡುವುದಿಲ್ಲ. ಯಾವ ಪ್ರಶ್ನೆ ಕೇಳಿದರೂ ದರ್ಪದಿಂದ ಉತ್ತರಿಸಿ ನನಗಿಷ್ಟ ಬಂದಂತೆ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಿದ್ದು, ಇದರಿಂದ ನಮ್ಮ ಅಧಿಕಾರ ಮೊಟಕಾಗುತ್ತಿದೆ ಎಂದು ಪ್ರತಿಭಟನಾನಿರತರು ಅಸಮಾಧಾನ ವ್ಯಕ್ತಪಡಿಸಿದರು.

ಗ್ರಾಪಂ ಸದಸ್ಯರಾದ ಭಾಸ್ಕರ್ ಮತ್ತು ಸತ್ಯನಾರಾಯಣ ಮಾತನಾಡಿ, ಪಿಡಿಓ ವರ್ತನೆ ಬಗ್ಗೆ ತಿಳಿದಿದ್ದರೂ, ಅಧ್ಯಕ್ಷ ರಾಜೇಗೌಡ ಅವರು ಪಿಡಿಓಗೆ ಕುಮ್ಮಕ್ಕು ನೀಡುತ್ತಿದ್ದು, ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಎಂದು ದೂರಿದರು.



ತಿಪ್ಪೂರು ಗ್ರಾಪಂ ಸದಸ್ಯರು ಪ್ರತಿಭಟಿಸಿದರು.

ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಹಲವು ಬಾರಿ ದೂರು ನೀಡಿದರೂ ಯಾವುದೇ ಕ್ರಮಕೈಗೊಂಡಿಲ್ಲ. ಹೀಗಾದರೇ ಸದಸ್ಯರಾದ ನಾವು ಸಾರ್ವಜನಿಕರ ಕೆಲಸ ಮಾಡುವುದು ಹೇಗೆ ಎಂದು ಪ್ರಶ್ನಿಸಿದ ಅವರು ಇದೀಗ ಪ್ರತಿಭಟನೆ ನಡೆಸಿದರೂ ಅಧಿಕಾರಿಗಳು ನಮ್ಮ ಸಮಸ್ಯೆ ಆಲಿಸುತ್ತಿಲ್ಲ ಎಂದರು.

ಪ್ರತಿಭಟನೆ ವೇಳೆ ಕಾರ್ಯ ನಿಮಿತ್ತ ಗ್ರಾಪಂ ಎದುರು ತೆರಳುತ್ತಿದ್ದ ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಶಿವಪ್ರಕಾಶ್ ಸ್ಥಳಕ್ಕಾಗಮಿಸಿ ಗ್ರಾಪಂ ಬಾಗಿಲು ಹಾಕುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗಲಿದೆ ಎಂದು ಮನವೊಲಿಸಿದರಿಂದ ಗ್ರಾಪಂ ಕಚೇರಿ ಬಾಗಿಲು ತೆರೆದು ಪ್ರತಿಭಟನೆ ಮುಂದುವರೆಸಿದರು.

ಸ್ಥಳಕ್ಕಾಗಮಿಸಿದ ತಾಪಂ ವ್ಯವಸ್ಥಾಪಕ ಸತೀಶ್ ಕುಮಾರ್ ಮಾತನಾಡಿ, ನಿಮ್ಮ ಯಾವುದೇ ದೂರುಗಳಿದ್ದರೂ ಲಿಖಿತವಾಗಿ ನೀಡಿದರೆ ಅದನ್ನು ಕಾರ್ಯ ನಿರ್ವಹಣಾಧಿಕಾರಿಗಳ ಗಮನಕ್ಕೆ ತಂದು ಪರಿಹರಿಸುವುದಾಗಿ ಭರವಸೆ ನೀಡಿದ್ದರಿಂದ ಪ್ರತಿಭಟನೆ ಹಿಂಪಡೆಯಲಾಯಿತು.

ಈ ವೇಳೆ ಉಪಾಧ್ಯಕ್ಷೆ ಅನಿತಾ, ಸದಸ್ಯರಾದ ರತ್ನಮ್ಮ, ರಮ್ಯ, ರಾಮಕೃಷ್ಣೇಗೌಡ, ಶಿವಣ್ಣ, ನೀಲಯ್ಯ, ಶೋಭಾ ಇದ್ದರು.

ಹೆಚ್.ಡಿ.ಕೋಟೆಯಲ್ಲಿ ಸರಣಿ ಕಳ್ಳತನ



ಹೆಚ್.ಡಿ.ಕೋಟೆ, ಏ.7– ಪಟ್ಟಣದಲ್ಲಿ ಭಾನುವಾರ ರಾತ್ರಿ ಸರಣಿಗಳ್ಳತನ ನಡೆಸಿರುವ ದುಷ್ಕರ್ಮಿಗಳು 43 ಸಾವಿರ ರೂ. ದೋಚಿ ಪರಾರಿಯಾಗಿದ್ದಾರೆ.

ಪಟ್ಟಣದ ವಿಜಯ ಬ್ಯಾಂಕ್ ಪಕ್ಕದಲ್ಲಿರುವ ಎಂಎಸ್‌ಐಎಲ್ ಮದ್ಯದಂಗಡಿ ಹಾಗೂ ಕೃಷ್ಣಾಪುರ ಸರ್ಕಲ್ ಬಳಿಯ 2 ಎಂಎಸ್‌ಐಎಲ್ ಮದ್ಯದಂಗಡಿ ಮತ್ತು ಜೆಎಸ್‌ಎಸ್ ಕಲ್ಯಾಣ ಮಂಟಪ ಬಳಿಯ ನಂದಿನಿ ಹಾಲಿನ ಡೈರಿಯಲ್ಲಿ ಕಳ್ಳತನ ಮಾಡಿರುವ ದುಷ್ಕರ್ಮಿಗಳು 43 ಸಾವಿರ ರೂ. ದೋಚಿ ಪರಾರಿಯಾಗಿದ್ದಾರೆ. ಹೆಚ್.ಡಿ.ಕೋಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ

ಹೆಚ್.ಡಿ.ಕೋಟೆ, ಏ.7– ಗ್ರಾಮದ ಜನರ ಅನುಕೂಲಕ್ಕಾಗಿ ಹಾಗೂ ಎಲ್ಲರಿಗೂ ಶುದ್ಧ ನೀರು ಸಿಗಲೆಂದು ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪಿಸಲಾಗಿದೆ ಎಂದು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜ್ ತಿಳಿಸಿದರು.

ತಾಲೂಕಿನ ಕ್ಯಾತನಹಳ್ಳಿಯಲ್ಲಿ ನೂತನ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ಗ್ರಾಮದ ಜನತೆಯ ಆರೋಗ್ಯ ದೃಷ್ಟಿಯಿಂದ ಶುದ್ಧ ಕುಡಿಯುವ ಘಟಕ ಸ್ಥಾಪಿಸಲಾಗಿದ್ದು, ಶಾಸಕ ಅನಿಲ್ ಅವರ ಅನುದಾನದಿಂದ 4 ಲಕ್ಷ ರೂ., ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಯಿಂದ 5 ಲಕ್ಷ ರೂ. ಮತು ಕ್ಯಾತನಹಳ್ಳಿ ಗ್ರಾಪಂನ 2 ಲಕ್ಷ ರೂ. ಸೇರಿದಂತೆ 11 ಲಕ್ಷ ರೂ. ವೆಚ್ಚದಲ್ಲಿ ಶುದ್ಧ ನೀರಿನ ಘಟಕ ನಿರ್ಮಾಣಗೊಂಡಿದ್ದು, ಶಾಸಕ ಅನಿಲ್, ಧರ್ಮಸ್ಥಳದ ಧರ್ಮಾಧಿಕಾರಿಗಳಿಗೆ ಹಾಗೂ ಸ್ಥಳೀಯ ಗ್ರಾಪಂ ಆಡಳಿತ ಮಂಡಳಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.



ಶುದ್ಧ ಕುಡಿಯುವ ನೀರಿನ ಘಟಕವನ್ನು ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜ್ ಉದ್ಘಾಟಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಸವಿತಾ ಬಸಪ್ಪ, ಉಪಾಧ್ಯಕ್ಷ ಪ್ರಸನ್ನ ಕುಮಾರ್, ಡೈರಿ ಅಧ್ಯಕ್ಷ ಕೆ.ಪಿ.ಚಲುವರಾಜು, ತಾಪಂ ಮಾಜಿ ಅಧ್ಯಕ್ಷ ಜಿ.ಗೋವಿಂದರಾಜು, ಕೆಪಿಸಿಸಿ ರಾಜ್ಯ ಉಪಾಧ್ಯಕ್ಷ ಎಸ್.ಮಾಲೇಗೌಡ, ಗ್ರಾಪಂ ಸದಸ್ಯ ಎಸ್.ಶಿವರಾಜು, ಗಂಗಾಧರೇಶ್ವರ ಟ್ರಸ್ಟ್ ಅಧ್ಯಕ್ಷ ಎಸ್.ಬೀರೇಗೌಡ, ಮುಖಂಡರಾದ ಶಿವಶಂಕರೇಗೌಡ, ಪುಟ್ಟೇಗೌಡ, ಕಾಳಸೋಮಪ್ಪ, ರಾಮಸ್ವಾಮಿ, ಬಸಪ್ಪ, ಕೃಷ್ಣಮೂರ್ತಿ, ಕೀರ್ತಿ ಕುಮಾರ್, ಕುಮಾರ್, ಎಸ್. ಬೀರೇಶ, ದೊರೆಸ್ವಾಮಿ, ರಾಮೇಗೌಡ, ಮಹದೇವಣ್ಣ, ರಾಮಸ್ವಾಮಿ, ಕೆ.ಟಿ.ಮಹದೇವ, ಲಕ್ಷ್ಮೀಪತಿ, ರಮೇಶ್, ಗೋವಿಂದ, ಶ್ರೀಕಂಠ, ಕಾಂತಶೆಟ್ಟಿ, ಸೋಮಣ್ಣ, ಚಿಕ್ಕಪುಟ್ಟಶೆಟ್ಟಿ, ಪಿಡಿಓ ನಾಗೇಂದ್ರ, ಶಿವರಾಜ್, ನಾಗರಾಜ್, ಸೋಮೇಶ್, ಹರೀಶ್ ಇದ್ದರು.

ಸರಗೂರಲ್ಲಿ ವಿಜೃಂಭಣೆಯ ರಾಮನವಮಿ



ಸರಗೂರಲ್ಲಿ ರಾಮನವಮಿ ನಡೆಯಿತು.

ಸರಗೂರು, ಏ.7– ಪಟ್ಟಣದಲ್ಲಿ ವಾಹನ ಚಾಲಕರ ಸಂಘದಿಂದ ರಾಮನವಮಿ ವಿಜೃಂಭಣೆಯಿಂದ ನಡೆಯಿತು.

ರಾಮನವಮಿ ಅಂಗವಾಗಿ ಪಟ್ಟಣದ ಬಸ್ ನಿಲ್ದಾಣದ ಮುಂಭಾಗ ಶಾಮಿಯಾನ ಹಾಕಿ ತಳಿರು ತೋರಣ ಕಟ್ಟಿ ಶ್ರೀರಾಮ, ಸೀತಾ, ಲಕ್ಷ್ಮಣ, ಆಂಜನೇಯಸ್ವಾಮಿ ಭಾವಚಿತ್ರ ಇಟ್ಟು ವಿವಿಧ ಹೂಗಳಿಂದ ಅಲಂಕರಿಸಿ ವಿಶೇಷ ಪೂಜೆ ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ತೀರ್ಥಪ್ರಸಾದ ವಿನಿಯೋಗ ಮಾಡಲಾಯಿತು. ಬಳಿಕ ಭಕ್ತರಿಗೆ ಕೋಸಂಬರಿ, ಮಜ್ಜಿಗೆ, ಪಾನಕ ವಿತರಿಸಲಾಯಿತು.

ಈ ವೇಳೆ ವಾಹನ ಚಾಲಕರ ಸಂಘದ ಅಧ್ಯಕ್ಷ ಚಿಕ್ಕಣ್ಣ, ಗೌರವಾಧ್ಯಕ್ಷ ಎಸ್.ಹೆಚ್.ಲಿಂಗರಾಜು, ಪ್ರಧಾನ ಕಾರ್ಯದರ್ಶಿ ನಾಗೇಶ್, ಚಾಲಕರಾದ ವೆಂಕಟೇಶ್, ಗೋವಿಂದ, ಎಂ.ನಾಗರಾಜು, ಕೆಇಬಿ ವೆಂಕಟೇಶ್, ನಾಗೇಶ್, ಸುರೇಶ್, ರಾಜೇಂದ್ರ, ರಂಗಸ್ವಾಮಿ, ನಾಗರಾಜು, ತಿಮ್ಮರಾಜು, ಜಿತೇಂದ್ರ, ಕುಮಾರ ಇನ್ನಿತರರಿದ್ದರು.

ಜಾತ್ರೆಗಳು ಬಾಂಧವ್ಯ ಬೆಸೆಯುವ ಕೊಂಡಿಗಳು

ಡಾ.ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಬಣ್ಣನೆ

ತಿ.ನರಸೀಪುರ, ಏ.7– ಹಳ್ಳಿಗಳಲ್ಲಿ ನಡೆಯುವ ಜಾತ್ರೆಗಳು ಜನರ ನಡುವಿನ ಬಾಂಧವ್ಯ ಬೆಸೆಯುವ ಕೊಂಡಿಗಳು ಎಂದು ಡಾ.ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ ಬಣ್ಣಿಸಿದರು.

ತಾಲೂಕಿನ ಚಿಟಗಯ್ಯನಕೊಪ್ಪಲು ಗ್ರಾಮದಲ್ಲಿ 17ನೇ ವರ್ಷದ ಶನಿದೇವರ ಜಾತ್ರಾ ಮಹೋತ್ಸವದ



ಕಾರ್ಯಕ್ರಮವನ್ನು ಖೊ ಖೋ ಆಟಗಾರ್ತಿ ಚೈತ್ರಾ ಉದ್ಘಾಟಿಸಿದರು.

ಸಾನಿಧ್ಯ ವಹಿಸಿ ಮಾತನಾಡಿದ ಅವರು, ಬಡ ವರ್ಗದವರಿಗೆ ನೆರಳಾಗಿ ನಿಂತು ಎಲ್ಲವನ್ನು ಸರಿದೂಗಿಸಿಕೊಂಡು ಹೋಗುವ ಶನಿದೇವರ ಗುಡ್ಡಪ್ಪ ಬಸವರಾಜಸ್ವಾಮಿ ಅವರ ಶ್ರಮ ಇನ್ನು ಹೆಚ್ಚಾಗಿ ಬೇಕಾಗಿದೆ. ಗ್ರಾಮಸ್ಥರು ಇದಕ್ಕೆ ಅಪಾರ ಬೆಂಬಲ ನೀಡುತ್ತಾ ಬಂದಿದ್ದಾರೆ. ಇನ್ನು ಹೆಚ್ಚಿನ ಸಹಕಾರ ನೀಡಿ ಎಂದರು.

ಶನಿದೇವರ ಗುಡ್ಡಪ್ಪ ಬಸವರಾಜ ಸ್ವಾಮಿ ಮಾತನಾಡಿ, ಭಗವಂತನ ಕೃಪೆಯಿಂದ ಸರಳವಾಗಿ ಪ್ರಾರಂಭವಾದ ಜಾತ್ರಾ ಮಹೋತ್ಸವ ಇಂದು 17 ವರ್ಷಗಳನ್ನು ಪೂರೈಸಿದೆ. ಇದಕ್ಕೆ ಊರಿನ ಜನತೆ, ನೆರೆಹೊರೆಯ ಭಕ್ತರ ಸಹಕಾರ, ಭಕ್ತಿ, ಗೌರವಗಳೇ ಕಾರಣ. ಹೀಗಾಗಿ ದಾಸೋಹ, ಸಾಧಕರಿಗೆ ಸನ್ಮಾನ, ನಾದಸ್ವರ ಸಂಗೀತಗಳ ರಸದೌತಣವನ್ನು ಉಣಬಡಿಸಲಾಗುತ್ತಿದೆ ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಖೊ ಖೋ ಆಟಗಾರ್ತಿ ಚೈತ್ರಾ, ನನಗೆ ನೀವು ನೀಡುತ್ತಿರುವ ಈ ಪ್ರೋತ್ಸಾಹ. ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ ಎಂದರು.

ಈ ವೇಳೆ ಹಂಗ್ರಾಪುರ ಶ್ರೀಗಳು, ರಾಜಶೇಖರ ಶ್ರೀಗಳು, ಪುರಸಭಾ ಮುಖ್ಯಾಧಿಕಾರಿ ವಸಂತ ಕುಮಾರಿ, ಮಿಮಿಕ್ರಿ ಗೋಪಿ, ಕುರುಬರ ಸಂಘದ ರಾಜ್ಯ ಉಪಾಧ್ಯಕ್ಷ ರಾಜೇಶ್, ರಂಗಭೂಮಿ ಹಿರಿಯ ಕಲಾವಿದ ಪುಟ್ಟಣ್ಣ, ಉಪನ್ಯಾಸಕ ಕುಮಾರಸ್ವಾಮಿ, ಡ್ಯಾನ್ಸ್ ಮಾಸ್ಟರ್ ಬಸವರಾಜು, ಕೆಬ್ಬೆಹುಂಡಿ ಶಿವಕುಮಾರ್, ಸಿದ್ದಪ್ಪಾಜಿ, ಕಲಾವಿದೆ ವರಲಕ್ಷ್ಮಿ, ಬೀರಪ್ಪ, ಬುಲೆಟ್ ನಿಂಗಣ್ಣ, ರಾಜೇಶ್, ಚಂದ್ರಶೇಖರ ಶಾಸ್ತ್ರೀ, ಕುಮಾರ್, ಶಿವು, ಕುಮಾರ ಮತ್ತಿತರರಿದ್ದರು.

ದೊಡ್ಡಕೊಪ್ಪಲು ಗ್ರಾಪಂಗೆ ಮಹದೇವಮ್ಮ ಉಪಾಧ್ಯಕ್ಷೆ



ಕೆ.ಆರ್.ನಗರ, ಏ.7– ತಾಲೂಕಿನ ದೊಡ್ಡಕೊಪ್ಪಲು ಗ್ರಾಪಂ ಉಪಾಧ್ಯಕ್ಷೆಯಾಗಿ ಮಹದೇವಮ್ಮ ಅವಿರೋಧವಾಗಿ ಆಯ್ಕೆಯಾದರು.

ಈ ಹಿಂದಿನ ಉಪಾಧ್ಯಕ್ಷೆ ಕಾವ್ಯರಾಜು ಅವರ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಮಹದೇವಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಸಮಾಜ ಕಲ್ಯಾಣ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ಶಂಕರ್‌ಮೂರ್ತಿ ಘೋಷಿಸಿದರು. ಚುನಾವಣೆಯಲ್ಲಿ ಅಧ್ಯಕ್ಷೆ ರಾಜೇಶ್ವರಿ ಬಲರಾಮು, ಸದಸ್ಯರಾದ ಕೃಷ್ಣ, ಲಕ್ಷ್ಮಿ ರೇವಣ್ಣ, ಕೆ.ಕುಮಾರ್, ಬಿ.ಎಂ.ಗಿರೀಶ್, ನಂಜುಂಡ, ಭಾಗ್ಯ ಕರೀಗೌಡ, ಮಹೇಶ್‌ಗೌಡ, ಕೆ.ಎಂ.ಸವಿತಾ, ಮಾರ್ಕ್ ಮಹದೇವ್, ರಾಮನಾಯಕ, ಶ್ವೇತಾ ರವಿ, ಸುಮ ರಾಜೇಶ್, ಪಿಡಿಓ ರಮೇಶ್ ಸೇರಿದಂತೆ ಇನ್ನಿತರರಿದ್ದರು.

ಸನ್ಮಾನ



ಬೆಂಗಳೂರಿನಲ್ಲಿ ಕರ್ನಾಟಕ ಕಾಸ್ಕ್ಯಾರ್ಡ್ ಬ್ಯಾಂಕ್ ಅಧ್ಯಕ್ಷರೂ ಆದ ತಿಪಟೂರು ಶಾಸಕ ಕೆ.ಷಡಕ್ಷರಿ ಅವರನ್ನು ತಿ.ನರಸೀಪುರ ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಕೆಂಪಯ್ಯನಹುಂಡಿ ಮಹಾದೇವಣ್ಣ, ಉಪಾಧ್ಯಕ್ಷ ಎನ್.ಎನ್.ಮಹದೇವಸ್ವಾಮಿ ಸನ್ಮಾನಿಸಿದರು. ಈ ವೇಳೆ ರಾಯಚೂರು ಜಿಲ್ಲಾ ನಿರ್ದೇಶಕ ರಾಯಪ್ಪಗೌಡ, ಬೀದರ್‌ನ ಮಲ್ಲಿಕಾರ್ಜುನ ಮಹಾಶೆಟ್ಟರು, ಎಪಿಎಂಸಿ ಮಾಜಿ ಸದಸ್ಯ ಮಾವಿನಹಳ್ಳಿ ಪುಟ್ಟಸ್ವಾಮಿ, ಕಿರಗಸೂರು ಗ್ರಾಪಂ ಮಾಜಿ ಉಪಾಧ್ಯಕ್ಷ ಮಹದೇವ್ ಇತರರಿದ್ದರು.

ಆರ್.ಪಿ.ರಸ್ತೆ ಬಳಿ ರೈಲ್ವೆ ಮೇಲ್ಸೆತುವೆ ನಿರ್ಮಾಣಕ್ಕೆ ಸಿದ್ಧತೆ

ಬ್ರಿಡ್ಜ್ ಸ್ಥಳಾಂತರಕ್ಕೆ ಸ್ಥಳೀಯ ನಿವಾಸಿಗಳ ಮನವಿ

ನಂಜನಗೂಡು, ಏ.7– ನಗರದ ಆರ್.ಪಿ.ರಸ್ತೆ ಭಾರ್ಗವಿ ಚಿತ್ರಮಂದಿರದ ಬಳಿ ರೈಲ್ವೆ ಮೇಲ್ಸೆತುವೆ ನಿರ್ಮಾಣಕ್ಕೆ ಸಿದ್ಧತೆ ನಡೆಸಲಾಗುತ್ತಿದ್ದು, ಇದರಿಂದ ಶ್ರೀಕಂಠೇಶ್ವರ ದೇವಾಲಯದ ಸೌಂದರ್ಯಕ್ಕೆ ಧಕ್ಕೆಯಾಗುವ ಜೊತೆಗೆ 200ಕ್ಕೂ ಹೆಚ್ಚು ಅಂಗಡಿ ಮುಂಗಟ್ಟುಗಳಿಗೆ ಧಕ್ಕೆಯಾಗಲಿದೆ. ಹೀಗಾಗಿ ಮೇಲ್ಸೆತುವೆ ಸ್ಥಳಾಂತರಿಸುವಂತೆ ಶಾಸಕ ದರ್ಶನ್, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ, ತಹಸೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಸ್ಥಳೀಯ ನಿವಾಸಿಗಳು ಮನವಿ ಸಲ್ಲಿಸಿದ್ದಾರೆ.

ರೈಲ್ವೆ ಮೇಲ್ಸೆತುವೆ ನಿರ್ಮಾಣದಿಂದ ಸಾರ್ವಜನಿಕರಿಗೆ ಶ್ರೀಕಂಠೇಶ್ವರ ದೇವಾಲಯದ ಗೋಪುರದ ದರ್ಶನ ಸಿಗುವುದಿಲ್ಲ. ಇದರಿಂದ ಪುರಾತನ ದೇವಾಲಯದ ಸೌಂದರ್ಯಕ್ಕೆ ಧಕ್ಕೆಯಾಗುತ್ತದೆ. ಜೊತೆಗೆ ರಾಷ್ಟ್ರಪತಿ ರಸ್ತೆಯ 4ನೇ ಕ್ರಾಸ್‌ನಿಂದ ರಾಕ್ಷಸ ಮಂಟಪದವರೆಗೆ 200ಕ್ಕೂ ಹೆಚ್ಚು ಅಂಗಡಿ ಮತ್ತು ಮನೆಗಳು 10 ರಿಂದ 20 ಅಡಿ ಜಾಗವನ್ನು ರೈಲ್ವೆ ಇಲಾಖೆಗೆ ಬಿಟ್ಟು ಕೊಡಬೇಕಾಗಿರುವುದರಿಂದ ಆಸ್ತಿ ನಷ್ಟವಾಗುವುದಲ್ಲದೆ ವ್ಯಾಪಾರ ವಹಿವಾಟಿಗಳಿಗೂ ಕಡಿವಾಣ ಬೀಳಲಿದೆ. ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಸಂಸದರಾಗಿದ್ದಾಗ ಬ್ರಿಡ್ಜ್ ಮಂಜೂರು ಮಾಡಲಾಗಿತ್ತು. ಪ್ರಸ್ತುತ ರೈಲ್ವೆ ಗೇಟ್ ಬಳಿ ಸಂಚಾರ ದಟ್ಟಣೆಯಿಂದ ಎಚ್ಚೆತ್ತ ರೈಲ್ವೆ ಇಲಾಖೆ ಸರ್ವೇ ಕಾರ್ಯ ನಡೆಸಿ ರೈಲ್ವೆ ಮೇಲ್ಸೆತುವೆ ನಿರ್ಮಾಣಕ್ಕೆ ಮಾರ್ಕಿಂಗ್ ಮಾಡುತ್ತಿರುವುದರಿಂದ ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.



ರೈಲ್ವೆ ಬ್ರಿಡ್ಜ್ ನಿರ್ಮಾಣ ಮಾಡದಂತೆ ನಿವಾಸಿಗಳು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಮನವಿ ಸಲ್ಲಿಸುತ್ತಿರುವುದು.

ಈಗಾಗಲೇ ಮಹಾತ್ಮ ಗಾಂಧಿ ರಸ್ತೆಯಲ್ಲಿ ರೈಲ್ವೆ ಕೆಳ ಸೇತುವೆ ಅವೈಜ್ಞಾನಿಕವಾಗಿ ನಿರ್ಮಾಣವಾಗಿರುವುದರಿಂದ ಸ್ಥಳೀಯ ನಿವಾಸಿಗಳಿಗೆ ತೊಂದರೆಯಾಗಿದೆ. ಈ ಮೇಲ್ಸೆತುವೆ ನಿರ್ಮಾಣದದಿಂದ ಮತ್ತೆ ತೊಂದರೆ ಆಗಬಾರದು. ಅಲ್ಲದೇ ರಾಕ್ಷಸ ಮಂಟಪದ ಬಳಿ ರಥ ತಿರುವು ಪಡೆಯುವುದರಿಂದ ರಥ ಎಳೆಯಲು ಧಕ್ಕೆಯಾಗದಂತೆ ರೈಲ್ವೆ ಇಲಾಖೆ ಕ್ರಮವಹಿಸಬೇಕಾಗಿದೆ ಎಂದು ಪತ್ರದಲ್ಲಿ ಉಲ್ಲೇಖಿಸಿ ಒತ್ತಾಯಿಸಿದ್ದಾರೆ.


ಮೇಲ್ಸೆತುವೆ ಸ್ಥಳಾಂತರಕ್ಕೆ ಒತ್ತಾಯ: ರೈಲ್ವೆ ಮೇಲ್ಸೆತುವೆ ನಿರ್ಮಾಣ ಮಾಡುವುದರಿಂದ ಸ್ಥಳೀಯ ನಿವಾಸಿಗಳಿಗೆ ಆಗುವ ತೊಂದರೆ ತಪ್ಪಿಸುವ ಸಲುವಾಗಿ ನಾಗಮ್ಮ ಶಾಲೆಯಿಂದ ಸರಸ್ವತಿ ಕಾಲೋನಿಗೆ ಹೋಗಿ ಅಲ್ಲಿಂದ ರೈಲ್ವೆ ಹಳಿ ದಾಟಿ ಪೊಲೀಸ್ ಪೆರೇಡ್ ಮೈದಾನದ ಮೂಲಕ ರಾಷ್ಟ್ರಪತಿ ರಸ್ತೆಗೆ ಅನ್ಯಮಾರ್ಗ ಬಳಸಿ ರೈಲ್ವೆ ಮೇಲ್ಸೆತುವೆ ಸೇರಿಸುವಂತೆ ಸ್ಥಳೀಯ ನಿವಾಸಿಗಳು ಪತ್ರ ಬರೆದು ಒತ್ತಾಯಿಸಿದ್ದಾರೆ.

ಈ ವೇಳೆ ಖಾದಿ ಗ್ರಾಮೋದ್ಯೋಗ ನಿಗಮದ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಜೆಡಿಎಸ್ ಜಿಲ್ಲಾಧ್ಯಕ್ಷ ಎನ್.ನರಸಿಂಹಸ್ವಾಮಿ, ನಗರಸಭಾ ಮಾಜಿ ಅಧ್ಯಕ್ಷ ಮಹದೇವಸ್ವಾಮಿ, ನಗರಸಭಾ ಸದಸ್ಯ ಕಪಿಲೇಶ್, ಉದ್ಯಮಿ ಹೆಚ್.ಎಂ.ಶಂಕರ್, ಗೋವರ್ಧನ್ ಸೇರಿದಂತೆ ನಂಜನಗೂಡಿನ ನಿವಾಸಿಗಳು ಹಾಜರಿದ್ದರು.

> ಭಾರ್ಗವಿ ಚಿತ್ರಮಂದಿರದ ಬಳಿ ರೈಲ್ವೆ ಬ್ರಿಡ್ಜ್ ನಿರ್ಮಾಣ ಮಾಡುವುದರಿಂದ 4ನೇ ಕ್ರಾಸ್‌ನಿಂದ ರಾಕ್ಷಸ ಮಂಟಪದವರೆಗೆ ಎಡ ಮತ್ತು ಬಲ ಭಾಗಗಳಲ್ಲಿ 10 ರಿಂದ 20 ಅಡಿ ಜಾಗಗಳನ್ನು ಬಿಟ್ಟು ಕೊಡಬೇಕಾಗುತ್ತದೆ. ಇದರಿಂದ ಸಾಕಷ್ಟು ಜನರಿಗೆ ತೊಂದರೆಯಾಗುವುದರ ಜೊತೆಗೆ ದಕ್ಷಿಣ ಕಾಶಿ ಎಂದೇ ಪ್ರಸಿದ್ಧಿ ಪಡೆದಿರುವ ಶ್ರೀ ನಂಜುಂಡೇಶ್ವರ ದೇವಸ್ಥಾನಕ್ಕೂ ಧಕ್ಕೆ ಉಂಟಾಗುತ್ತದೆ. ಆದ್ದರಿಂದ ನಿವಾಸಿಗಳಿಗೆ ತೊಂದರೆಯಾಗದಂತೆ ಅನ್ಯಮಾರ್ಗ ಬಳಸಿ ಮೇಲ್ಸೇತುವೆ ನಿರ್ಮಿಸಬೇಕು.
>
> –ಎನ್.ಆರ್.ಕೃಷ್ಣಪ್ಪಗೌಡ, ಖಾದಿ ಗ್ರಾಮೋದ್ಯೋಗ ನಿಗಮದ ಮಾಜಿ ಅಧ್ಯಕ್ಷ.

ಸಿಲಿಂಡರ್, ಪೆಟ್ರೋಲ್, ಡೀಸೆಲ್ ದರ ಏರಿಕೆ ಮೂಲಕ ರಾಜ್ಯ ಬಿಜೆಪಿ ನಾಯಕರಿಗೆ ಪ್ರಧಾನಿ ಮೋದಿ ಕಪಾಳಮೋಕ್ಷ

ಬೆಂಗಳೂರು, ಏ.7– ಪ್ರಧಾನಿ ನರೇಂದ್ರ ಮೋದಿಯವರು ಪೆಟ್ರೋಲ್, ಡೀಸೆಲ್ ಮತ್ತು ಅಡುಗೆ ಅನಿಲದ ಬೆಲೆಯನ್ನು ಹೆಚ್ಚಿಸುವ ಮೂಲಕ ಜನಾಕ್ರೋಶ ಯಾತ್ರೆ ಎಂಬ ಪ್ರಹಸನ ಶುರು ಮಾಡಿರುವ ರಾಜ್ಯದ ಬಿಜೆಪಿ ನಾಯಕರಿಗೆ ಮುಟ್ಟಿ ನೋಡಿಕೊಳ್ಳುವಂತೆ ಕಪಾಳಮೋಕ್ಷ ಮಾಡಿದ್ದಾರೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.



ಸಿಲಿಂಡರ್ ಬೆಲೆ ಏರಿಕೆ ಬಗ್ಗೆ ಪ್ರತಿಕ್ರಿಯಿಸಿರುವ ಅವರು, ಬೆಲೆ ಏರಿಕೆಗೆ ಕೇಂದ್ರ ಸರ್ಕಾರದ ಜನವಿರೋಧಿ ಆರ್ಥಿಕ ನೀತಿಯೇ ಕಾರಣ ಎಂದು ನಾವು ಹೇಳುತ್ತಲೇ ಬಂದಿರುವ ಸತ್ಯವನ್ನು ಪ್ರಧಾನಿ ನರೇಂದ್ರ ಮೋದಿಯವರೇ ದೇಶದ ಜನರ ಮುಂದೆ ಒಪ್ಪಿಕೊಂಡಿದ್ದಾರೆ. ಈಗ ಕೇಂದ್ರ ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ತೆರಿಗೆಯನ್ನು 2 ರೂ.ಗಳಷ್ಟು ಮತ್ತು ಅಡುಗೆ ಅನಿಲ ಸಿಲಿಂಡರ್ ಬೆಲೆಯನ್ನು 50 ರೂ. ಏರಿಕೆ ಮಾಡಿರುವ ಬಗ್ಗೆ ರಾಜ್ಯದ ಬಿಜೆಪಿ ನಾಯಕರ ಪ್ರತಿಕಿಯೆ ಏನು ಎಂಬುದನ್ನು ನಾನು ತಿಳಿದುಕೊಳ್ಳಬಯಸುತ್ತೇನೆ. ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಯುತ್ತಿದ್ದರೂ ಕೇಂದ್ರ ಸರ್ಕಾರ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ಒಂದೇ ಸಮನೆ ಏರಿಸುತ್ತಾ ಹೋಗಲು ಕಾರಣ ಏನು ಎಂಬುದನ್ನು ಬಿಜೆಪಿ ನಾಯಕರು ರಾಜ್ಯದ ಜನರಿಗೆ ತಿಳಿಸಬೇಕು ಎಂದು ಆಗ್ರಹಿಸಿದ್ದಾರೆ.

ಐಪಿಎಲ್ ಹಂಗಾಮ

ಗೆಲುವಿನ ಲಯಕ್ಕೆ ಮರಳಿದ ಆರ್‌ಸಿಬಿ: ಪಾಂಡ್ಯ ಪಡೆಗೆ ಸೋಲು

ಮುಂಬೈ, ಏ.7– ಕೊನೆಗೂ 10 ವರ್ಷಗಳ ಬಳಿಕ ವಾಂಖೇಡೆ ಕ್ರೀಡಾಂಗಣದಲ್ಲಿ ಮುಂಬೈ ತಂಡವನ್ನು 12 ರನ್‌ಗಳಿಂದ ಸೋಲಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ರೋಚಕ ಗೆಲುವು ಸಾಧಿಸಿದೆ. ಆ ಮೂಲಕ ಅಂಕಪಟ್ಟಿಯಲ್ಲಿ 6 ಅಂಕಗಳೊಂದಿಗೆ 3ನೇ ಸ್ಥಾನ ಅಲಂಕರಿಸಿದ್ದು, ಮತ್ತೆ ಗೆಲುವಿನ ಲಯಕ್ಕೆ ಮರಳಿದೆ.

2015ರ ಮೇ 10 ರಂದು ಆರ್‌ಸಿಬಿಯು ವಾಂಖೇಡೆ ಕ್ರೀಡಾಂಗಣದಲ್ಲಿ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿದ್ದೇ ಕೊನೆ. ಆ ಬಳಿಕ ಇದೇ ಮೊದಲ ಬಾರಿಗೆ ಗೆಲುವಿನ ನಗೆ ಬೀರಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 221 ರನ್‌ಗಳ ಬೃಹತ್ ಮೊತ್ತ ದಾಖಲಿಸಿತು. 222 ರನ್ ಗುರಿ ಬೆನ್ನತ್ತಿದ ಮುಂಬೈ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 209 ರನ್ ಗಳಿಸಲಷ್ಟೇ ಶಕ್ತವಾಗಿ ಸೋಲು ಅನುಭವಿಸಿತು.

ಮುಂಬೈಗೆ ರೋಹಿತ್ ಶರ್ಮಾ ಸ್ಫೋಟಕ ಆರಂಭ ನೀಡಿದರೂ ಹೆಚ್ಚು ಹೊತ್ತು ನಿಲ್ಲಲಿಲ್ಲ. ಕೇವಲ 9 ಎಸೆತಗಳಲ್ಲಿ 2 ಬೌಂಡರಿ ಮತ್ತು 1 ಸಿಕ್ಸರ್ ಒಳಗೊಂಡ 17 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ರಿಯಾನ್ ರಿಕಲ್ಟನ್ ಸಹ 17 ರನ್ ಗಳಿಸಿ ನಿರ್ಗಮಿಸಿದರು. ನಂತರ ಬಂದ ವಿಲ್ ಜಾಕ್ಸ್ 22 ರನ್ ಸಿಡಿಸಿ ಔಟಾದರು. ಸೂರ್ಯಕುಮಾರ್ ಕೂಡ ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಲು ಆರ್‌ಸಿಬಿ ಅವಕಾಶ ನೀಡಲಿಲ್ಲ. 28 ರನ್‌ಗೆ ವಿಕೆಟ್ ಕೈಚೆಲ್ಲಿದರು.

ಈ ವೇಳೆ ಜೊತೆಯಾದ ತಿಲಕ್ ವರ್ಮಾ ಹಾಗೂ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್ ಆರ್‌ಸಿಬಿಗೆ ತಲೆನೋವು ಹೆಚ್ಚಿಸಿತು. ಹಾರ್ದಿಕ್ ಒಂದರ ಮೇಲೊಂದರಂತೆ ಸಿಕ್ಸರ್ ಮೂಲಕ ಅಬ್ಬರಿಸಿದರೆ, ತಿಲಕ್ ವರ್ಮಾ ಬೌಂಡರಿ ಮೂಲಕ ಮುಂಬೈ ಇಂಡಿಯನ್ಸ್‌ಗೆ ನೆರವಾದರು. ಈ ಜೋಡಿ 5ನೇ ವಿಕೆಟ್‌ಗೆ 89 ರನ್ ಜೊತೆಯಾಟವಾಡಿ ತಂಡಕ್ಕೆ ಜಯ ತಂದುಕೊಡಲು ಪ್ರಯತ್ನಿಸಿದರಾದರೂ ಸಾಧ್ಯವಾಗಿಲ್ಲ. 29 ಎಸೆತಗಳಲ್ಲಿ ತಲಾ 4 ಸಿಕ್ಸರ್, ಬೌಂಡರಿ ಒಳಗೊಂಡ 56 ರನ್ ಗಳಿಸಿ ತಿಲಕ್ ವರ್ಮಾ ವಿಕೆಟ್ ಒಪ್ಪಿಸಿದರು. ಮತ್ತೊಂದೆಡೆ ಹಾರ್ದಿಕ್ ಪಾಂಡ್ಯ 15 ಎಸೆತಗಳಲ್ಲಿ 4 ಸಿಕ್ಸರ್, 3 ಬೌಂಡರಿ ಒಳಗೊಂಡ ಸ್ಫೋಟಕ 42 ರನ್ ಗಳಿಸಿ ವಿಕೆಟ್ ಒಪ್ಪಿಸಿದರು.

ಆರ್‌ಸಿಬಿ ಪರ ಕೃನಾಲ್ ಪಾಂಡ್ಯ 4, ಯಶ್ ದಯಾಳ್, ಜೋಶ್ ಹ್ಯಾಸೆಲ್ ವುಡ್ 2, ಭುವನೇಶ್ವರ್ ಕುಮಾರ್ 1 ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಆರ್‌ಸಿಬಿ ಪರ ಫಿಲ್ ಸಾಲ್ಟ್ 4 ರನ್ ಗಳಿಸಿ ನಿರ್ಗಮಿಸಿದರು. ನಂತರ ಜೊತೆಯಾದ ವಿರಾಟ್ ಕೊಹ್ಲಿ ಹಾಗೂ ದೇವದತ್ತ ಪಡಿಕ್ಕಲ್ 2ನೇ ವಿಕೆಟ್‌ಗೆ 91 ರನ್ ಜೊತೆಯಾಟವಾಡಿದರು. ಈ ವೇಳೆ 22 ಎಸೆತಗಳಲ್ಲಿ 3 ಸಿಕ್ಸರ್, 2 ಬೌಂಡರಿ ಒಳಗೊಂಡ 37ರನ್ ಗಳಿಸಿ ಔಟಾದರು. ಮತ್ತೊಂದೆಡೆ ಅಬ್ಬರಿಸಿದ ಕೊಹ್ಲಿ ಅರ್ಧಶತಕ ಸಿಡಿಸಿ ಸಂಭ್ರಮಿಸಿದರು. ಆದರೆ 67 ರನ್ ಗಳಿಸಿದ್ದ ವೇಳೆ ವಿಕೆಟ್ ಒಪ್ಪಿಸಿದರು. ಬಳಿಕ ಬಂದ ರಜತ್ ಪಾಟೀದಾರ್ ಬಿರುಸಿನ ಬ್ಯಾಟಿಂಗ್ ನಡೆಸಿದರು. ಜಿತೇಶ್ ಶರ್ಮಾ ಜೊತೆಗೂಡಿದ ರಜತ್ ಪಾಟೀದಾರ್ ತಂಡವನ್ನು 200ರ ಗಡಿ ದಾಟಿಸುವಲ್ಲಿ ಯಶಸ್ವಿಯಾದರು. ಅಂತಿಮವಾಗಿ ರಜತ್ ಪಾಟೀದಾರ್ 32 ಎಸೆತಗಳಲ್ಲಿ 4 ಸಿಕ್ಸರ್, 5 ಬೌಂಡರಿ ಒಳಗೊಂಡ 64 ರನ್ ಗಳಿಸಿದರೇ, 19 ಎಸೆತಗಳಲ್ಲಿ 4 ಸಿಕ್ಸರ್, 2 ಬೌಂಡರಿ ಒಳಗೊಂಡ ಅಜೇಯ 40 ರನ್ ಗಳಿಸಿದರು. ಮುಂಬೈ ಪರ ಟ್ರೆಂಟ್ ಬೋಲ್ಟ್, ಹಾರ್ದಿಕ್ ಪಾಂಡ್ಯ ತಲಾ 2, ವಿಘ್ನೇಶ್ ಪುತ್ತೂರು 1 ವಿಕೆಟ್ ಪಡೆದರು. ರಜತ್ ಪಾಟೀದಾರ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಟಿ20ಯಲ್ಲಿ ಕೊಹ್ಲಿ 13000 ರನ್

ಮುಂಬೈ: ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಮುಂಬೈ ಇಂಡಿಯನ್ಸ್ ನಡುವಿನ ಐಪಿಎಲ್ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಟಿ20 ಕ್ರಿಕೆಟ್‌ನಲ್ಲಿ 13,000 ರನ್ ಪೂರ್ಣಗೊಳಿಸಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಈ ಐಪಿಎಲ್ ಋತುವಿನಲ್ಲಿ ಕೊಹ್ಲಿ ತಮ್ಮ 2ನೇ ಅರ್ಧಶತಕ ದಾಖಲಿಸಿ ಮೈಲಿಗಲ್ಲನ್ನು ತಲುಪಿದರು. ಟಿ20 ಸ್ವರೂಪದಲ್ಲಿ 13,000 ರನ್ ಗಳಿಸಿದ ಐದನೇ ಬ್ಯಾಟ್ಸ್‌ಮನ್ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ರೋಹಿತ್ ಶರ್ಮಾ ಎರಡನೇ ಸ್ಥಾನದಲ್ಲಿದ್ದಾರೆ. 451 ಪಂದ್ಯಗಳಲ್ಲಿ 11,851 ರನ್ ಗಳಿಸಿದ್ದಾರೆ. ಟಿ20 ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ರನ್ ಗಳಿಸಿದವರ ಪಟ್ಟಿಯಲ್ಲಿ ಕ್ರಿಸ್ ಗೇಲ್ 463 ಪಂದ್ಯಗಳಲ್ಲಿ 14,562 ರನ್ ಗಳಿಸಿ ಮೊದಲ ಸ್ಥಾನದಲ್ಲಿದ್ದಾರೆ, ಅಲೆಕ್ಸ್ ಹೇಲ್ಸ್ 13,610 ರನ್‌ಗಳೊಂದಿಗೆ ಎರಡನೇ ಸ್ಥಾನ, ಶೋಯೆಬ್ ಮಲಿಕ್ 555 ಪಂದ್ಯಗಳಲ್ಲಿ 13,557 ರನ್‌ಗಳೊಂದಿಗೆ ಮೂರನೇ ಸ್ಥಾನ ಮತ್ತು ಪೊಲಾರ್ಡ್ 695 ಪಂದ್ಯಗಳಲ್ಲಿ 13,537 ರನ್‌ಗಳೊಂದಿಗೆ ನಾಲ್ಕನೇ ಸ್ಥಾನದಲ್ಲಿದ್ದಾರೆ.

ತಂಡದ ಅಂಕಪಟ್ಟಿ ವಿವರ

ತಂಡ	ಪಂದ್ಯಗಳು	ಗೆಲುವು	ಸೋಲು	ಡ್ರಾ	ಅಂಕ
ಡೆಲ್ಲಿ	3	3	0	0	6
ಗುಜರಾತ್	4	3	1	0	6
ಬೆಂಗಳೂರು	4	3	1	0	6
ಪಂಜಾಬ್	3	2	1	0	4
ಕೋಲ್ಕತ್ತಾ	4	2	2	0	4
ಲಕ್ನೋ	4	2	2	0	4
ರಾಜಸ್ಥಾನ್	4	2	2	0	4
ಮುಂಬೈ	5	1	4	0	2
ಚೆನ್ನೈ	4	1	3	0	2
ಹೈದರಾಬಾದ್	5	1	4	0	2

ಇಂದಿನ ಪಂದ್ಯಗಳು

ಕೋಲ್ಕತ್ತಾ ನೈಟ್ ರೈಡರ್ಸ್
V/S
ಲಕ್ನೋ ಸೂಪರ್ ಜೈಂಟ್ಸ್
ಸಮಯ: ಮಧ್ಯಾಹ್ನ 3.30
ಸ್ಥಳ : ಈಡನ್ ಗಾರ್ಡನ್ಸ್, ಕೊಲ್ಕತ್ತಾ

ಪಂಜಾಬ್ ಕಿಂಗ್ಸ್
V/S
ಚೆನ್ನೈ ಸೂಪರ್ ಕಿಂಗ್ಸ್
ಸಮಯ: ಸಂಜೆ 7.30
ಸ್ಥಳ : ಯಾದವೀಂದ್ರ ಸಿಂಗ್ ಕ್ರೀಡಾಂಗಣ, ಚಂಡೀಗಢ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವೀರ ಧೀರ ಶೂರನ್–2 (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಮನದ ಕಡಲು (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸಿಕಂದರ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮಿಸ್ ಟೀಚರ್ (ಹಿಂ)	4 ಪ್ರದರ್ಶನಗಳು
ಗಾಯಿತ್ರಿ	
ಅಪ್ಪು (ಕ)	4 ಪ್ರದರ್ಶನಗಳು
ರಾಜಕಮಲ್	
ರಾಬಿನ್ ಹುಡ್ (ತೆ)	4 ಪ್ರದರ್ಶನಗಳು
ಸಂಗಂ	
ಸಿಕಂದರ್ (ಹಿಂ)	4 ಪ್ರದರ್ಶನಗಳು
ಲಿಡೋ	
ನಿಮ್ದೇ ಕಥೆ (ಕ–2), ಬೆಂಕಿಯ ಬಲೆ (ಕ–2)	4 ಪ್ರದರ್ಶನಗಳು
ತಿಬ್ಬಾದೇವಿ	
ಭಗೀರಥ (ಕ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಡಿಸ್ನಿ ಸ್ನೋ ವೈಟ್ (ಇಂ): ಬೆ.9.55ಕ್ಕೆ, ಮ.12.20ಕ್ಕೆ, ಮ.2.40ಕ್ಕೆ, ಸಂ.5ಕ್ಕೆ, ದಿ ಡಿಪ್ಲೊಮೆಟ್ (ಹಿಂ): ರಾ.7.20ಕ್ಕೆ, ಯಾರಿಯನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 2	ಬರ್ಗೆಟ್ ಬಸ್ಯಾ (ಕ): ಬೆ.10.20ಕ್ಕೆ, ಅಸ್ತ್ರಂ (ತ): ಮ.1.10ಕ್ಕೆ, ಕೋರ್ಟ್ ಸ್ಟೇಟ್ V/s ಎ ನೋಬಡಿ (ತೆ): ಮ.3.55ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.7ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 3	ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಬೆ.10.35ಕ್ಕೆ, ಡ್ರ್ಯಾಗನ್ (ತ): ಮ.1.05ಕ್ಕೆ, ಪಿಂಟು ಕಿ ಪಪ್ಪಿ (ಹಿಂ): ಸಂ.4.15ಕ್ಕೆ, ಛಾವಾ (ಹಿಂ): ರಾ.7ಕ್ಕೆ, ಘಾತಕ್ (ಹಿಂ): ಬೆ.10.15ಕ್ಕೆ.
ಸ್ಕ್ರೀನ್ 4	ಡ್ರ್ಯಾಗನ್ (ತ): ಬೆ.10.20ಕ್ಕೆ, ಅಪ್ಪು (ಕ): ಮ.1.30ಕ್ಕೆ, ಷಣ್ಮುಖ (ತೆ): ಸಂ.4.15ಕ್ಕೆ, ರಾ.9.45ಕ್ಕೆ, ಡಿಸ್ನಿ ಸ್ನೋ ವೈಟ್ (ಇಂ): ರಾ.7.05ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಫಾರೆಸ್ಟ್ (ಕ): ಮ.1.45ಕ್ಕೆ, ಬಳ್ಳಾರಿ ಜಿಲ್ಲೆ ಬಳ್ಳಾರಿ ತಾಲೂಕು ಗ್ರಾಮ ಯಾಳ್ಪಿ (ಕ): ಸಂ.6.35ಕ್ಕೆ ಅಸ್ತ್ರಂ (ತ): ರಾ.7ಕ್ಕೆ, ಷಣ್ಮುಖ (ತೆ): ರಾ.9.15ಕ್ಕೆ.
ಸ್ಕ್ರೀನ್ 2	ಪಿಂಟು ಕಿ ಪಪ್ಪಿ (ಹಿಂ): ಮ.1.15ಕ್ಕೆ, ಮ.3.55ಕ್ಕೆ, ಛಾವಾ (ಹಿಂ): ಸಂ.6.30ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಡಿಸ್ನಿ ಸ್ನೋ ವೈಟ್ (ಇಂ): ಮ.1.30ಕ್ಕೆ, ಸಂ.4.05ಕ್ಕೆ, ರಾ.9.20ಕ್ಕೆ, ತುಮ್ಕೊ ಮೇರಿ ಕಸಮ್ (ಹಿಂ): ಸಂ.6.15ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಮೈಸೂರಿಗೆ ವಲಸೆ ಜೇನು ನೊಣಗಳ ಲಗ್ಗೆ

ಒಂದೇ ಮರದಲ್ಲಿ 150ಕ್ಕೂ ಹೆಚ್ಚು ಗೂಡು ಕಟ್ಟಿ ಸಂತಾನಾಭಿವೃದ್ಧಿ

ಎಂ.ಟಿ.ಯೋಗೇಶ್ ಕುಮಾರ್

ಮೈಸೂರು,ಏ.7– ಸಾಂಸ್ಕೃತಿಕ ನಗರಿ ಮೈಸೂರಿಗೆ ಮತ್ತೆ ಅಜ್ಞಾತ ಸ್ಥಳದಿಂದ ನೂರಾರು ಹೆಜ್ಜೇನು ಕುಟುಂಬಗಳು ವಲಸೆ ಬಂದಿದ್ದು, ಒಂದೇ ಮರದಲ್ಲಿ 150ಕ್ಕೂ ಹೆಚ್ಚು ಗೂಡು ಕಟ್ಟಿಕೊಂಡು ವಂಶಾಭಿವೃದ್ಧಿಯಲ್ಲಿ ತೊಡಗಿ ಅಚ್ಚರಿ ಮೂಡಿಸಿವೆ.

ಕಳೆದ ಹಲವು ದಶಕದ ಹಿಂದಿನಿಂದಲೂ ಹೆಜ್ಜೇನುಗಳ ಕುಟುಂಬ ಪ್ರತಿವರ್ಷ ಅಜ್ಞಾತ ಸ್ಥಳದಿಂದ ವಲಸೆ ಬಂದು ಒಂದೇ ಮರದಲ್ಲಿ ಗೂಡು ಕಟ್ಟಿಕೊಂಡು 4–5 ತಿಂಗಳು ವಾಸವಿದ್ದು, ಮತ್ತೆ ಸ್ವಸ್ಥಾನಕ್ಕೆ ಮರಳುವ ಪದ್ಧತಿ ಅನುಸರಿಸುತ್ತಿವೆ. ಮೈಸೂರಿನ ಹಾರ್ಡಿಂಗ್ ವೃತ್ತದಿಂದ ಮಿರ್ಜಾ ರಸ್ತೆಗೆ ಹೊಂದಿಕೊಂಡಂತಿರುವ ತೋಟಗಾರಿಕಾ ಇಲಾಖೆಯ ಸಸ್ಯಕ್ಷೇತ್ರದಲ್ಲಿರುವ ಸುಮಾರು 50 ಅಡಿ ಎತ್ತರದ ಕಾಡು ಹತ್ತಿ ಮರ(ಕಾಟನ್‌ವುಡ್)ವನ್ನೇ ಹೆಜ್ಜೇನು ನೊಣಗಳು ಗೂಡು ಕಟ್ಟಿಕೊಂಡು ಸಂತಾನಾಭಿವೃದ್ಧಿಗೆ ಆಯ್ಕೆ ಮಾಡಿಕೊಳ್ಳುತ್ತಿರುವುದನ್ನು ಕಂಡು ಸ್ಥಳೀಯರು ಹೌಹಾರುವಂತಾಗಿದೆ.

ಬೇಸಿಗೆ ಆರಂಭವಾಗುತ್ತಿದ್ದಂತೆಯೇ ಮೈಸೂರಿಗೆ ವಲಸೆ ಬರುವ ಹೆಜ್ಜೇನುಗಳು ಸುರಕ್ಷಿತ ಸ್ಥಳವನ್ನೇ ಆಯ್ಕೆ ಮಾಡಿಕೊಂಡು ಗೂಡು ಕಟ್ಟಿಕೊಳ್ಳುತ್ತಿವೆ. ಸಂತಾನಾಭಿವೃದ್ಧಿ ಮಾಡಿದ ನಂತರ ಮಳೆಗಾಲ ಆರಂಭವಾಗುತ್ತಿದ್ದಂತೆಯೇ ಹೆಜ್ಜೇನು ತಮ್ಮ ಸ್ವಸ್ಥಾನದತ್ತ ಪಯಣ ಬೆಳಸುತ್ತವೆ. ಪ್ರತಿ ವರ್ಷವೂ ಹೊಸ ಹೊಸ ಜೇನು ಕುಟುಂಬ ಮೈಸೂರಿಗೆ ಬಂದರೂ, ಪೂರ್ವಜರು ಹಲವು ದಶಕಗಳ ಹಿಂದಿನಿಂದ ಗೂಡು ಕಟ್ಟಿಕೊಂಡು ಬಂದಿರುವ ಮರವನ್ನೇ ಆಯ್ಕೆ ಮಾಡಿಕೊಳ್ಳುತ್ತಿರುವುದು ಜೇನು ನೊಣಗಳ ಗ್ರಹಿಕಾ ಶಕ್ತಿಗೆ ಜನ ಮಾರು ಹೋಗಿದ್ದಾರೆ. ತೋಟಗಾರಿಕಾ ಇಲಾಖೆಗೆ ಸೇರಿದ ಆ ಸಸ್ಯಕ್ಷೇತ್ರದಲ್ಲಿ ಹತ್ತಾರು ಮರಗಳಿದ್ದರೂ ಜೇನು ನೊಣಗಳಿಗೆ ಕಾಡುಹತ್ತಿ ಮರವೇ ಅಚ್ಚುಮೆಚ್ಚಿನ ಮರವಾಗಿದೆ. ಒಂದೇ ಮರದಲ್ಲಿ ಈ ಬಾರಿ 150ಕ್ಕೂ ಹೆಚ್ಚು ಜೇನುಗೂಡುಗಳಿವೆ ಬೇರ್ಪಟ್ಟ ಹೊಸ ಜೇನುಕುಟುಂಬಗಳು ಅಕ್ಕಪಕ್ಕದಲ್ಲಿರುವ ಇನ್ನೆರಡು ಮರದಲ್ಲಿ ಹತ್ತಕ್ಕೂ ಹೆಚ್ಚು ಗೂಡುಕಟ್ಟಿಕೊಂಡಿವೆ.


ವಲಸೆ ಸಮಯ: ಪ್ರತಿ ವರ್ಷ ಡಿಸೆಂಬರ್ ಎರಡನೇ ವಾರದಿಂದಲೇ ಹೆಜ್ಜೇನು ವಲಸೆ ಬರುತ್ತಿದ್ದವು. ಆದರೆ ಈ ಬಾರಿ ಫೆಬ್ರವರಿ ಕೊನೆ ವಾರದಲ್ಲಿ ಮೈಸೂರು ಪ್ರವೇಶಿಸಿವೆ. ವಿವಿಧ ಗಿಡಗಳು ಹೂವು ಬಿಡುವ ಸೀಜನ್‌ನಲ್ಲಿಯೇ ಜೇನುನೊಣಗಳ ವಲಸೆ ಆರಂಭವಾಗುತ್ತದೆ. ಪ್ರಸ್ತುತ ಮೈಸೂರಲ್ಲಿರುವ ವಿವಿಧ ಗಿಡ–ಮರಗಳು ಹೂವು ಬಿಟ್ಟಿರುವುದರಿಂದ ಜೇನುನೊಣಗಳಿಗೆ ಆಹಾರ ಲಭ್ಯವಾಗುತ್ತದೆ. ಮಾನ್ಸೂನ್ ಆರಂಭವಾಗಿ 3–4 ಬಾರಿ ಜೋರು ಮಳೆ ಸುರಿದರೆ ಕೆಲವು ಕುಟುಂಬಗಳು ಜಾಗ ಖಾಲಿ ಮಾಡಿದರೆ, ಉಳಿದ ಮತ್ತಷ್ಟು ಕುಟುಂಬಗಳು ಮಾನ್ಸೂನ್ ನಂತರ ವಾಪಸ್ಸಾಗುತ್ತವೆ. ಇದರ ನಡುವೆ ಸುಮಾರು 10–15 ಗೂಡುಗಳು ವರ್ಷವಿಡೀ ಇದೇ ಮರದಲ್ಲಿ ವಾಸಿಸುತ್ತವೆ.

ಸುರಕ್ಷತೆಯ ತಾಣ: ಪಾರ್ಕ್‌ನಲ್ಲಿರುವ ಕಾಟನ್ ವುಡ್ ಮರವನ್ನೇ ಆಯ್ಕೆ ಮಾಡಿಕೊಳ್ಳುತ್ತಿರುವುದಕ್ಕೆ ಕೆಲ ಕಾರಣಗಳಿವೆ. ಈ ಜಾಗ ಜೇನುನೊಣಗಳು ಸಂತಾನಾಭಿವೃದ್ಧಿ ಮಾಡಲು ಸುರಕ್ಷಿತ ಜಾಗವಾಗಿದೆ. ಜೋರಾಗಿ ಗಾಳಿ ಬೀಸಿದರೂ ಗೂಡುಗಳಿಗೆ ಹಾನಿಯಾಗುವುದಿಲ್ಲ. ಅಲ್ಲದೆ, ಜನರಿಂದ ತೊಂದರೆಯಾಗದಿರುವುದು, ಆಹಾರ ಲಭ್ಯತೆ, ಕುಡಿಯಲು ನೀರು ಯಥೇಚ್ಛವಾಗಿ ಸಿಗುವುದರಿಂದ ಜೇನುನೊಣಗಳು ಈ ಸ್ಥಳವನ್ನು ಹಲವು ದಶಕಗಳಿಂದಲೂ ಅವಲಂಬಿಸಿವೆ ಎಂದು ಜೇನುನೊಣದ ಪರಿಣಿತರು ಅಭಿಪ್ರಾಯಪಟ್ಟಿದ್ದಾರೆ.

ಸ್ಥಳೀಯರಿಗೆ ಬೇಸರ: ಸಸ್ಯಕ್ಷೇತ್ರಕ್ಕೆ ಹೊಂದಿಕೊಂಡಂತೆ ಇರುವ ಇಟ್ಟಿಗೆಗೂಡಿನ ಕೆಲ ನಿವಾಸಿಗಳಿಗೆ ಜೇನುನೊಣಗಳಿಂದ ಬೇಸರವಾಗುತ್ತಿದೆ. ಈ ಜೇನು ನೊಣಗಳು ಇದುವರೆಗೂ ಯಾರ ಮೇಲೂ ದಾಳಿ ಮಾಡಿಲ್ಲ. ಆದರೆ, ಆಹಾರ ಅರಸಿ ಹಾರಾಟ ಮಾಡುವಾಗ ಮನೆಗಳ ಗೋಡೆಗಳ ಮೇಲೆ ಜೇನುನೊಣಗಳ ಪಿಕ್ಕೆ ಬಿದ್ದು ಕರೆಯಾಗುತ್ತಿವೆ. ಅಲ್ಲದೆ, ಒಗೆದು ಒಣಹಾಕಿದ ಬಟ್ಟೆಗಳ ಮೇಲೆ ಜೇನು ನೊಣಗಳ ಪಿಕ್ಕೆ ಬಿದ್ದು ಹಳದಿ ಬಣ್ಣದ ಕರೆಯಾಗುತ್ತಿರುವುದಕ್ಕೆ ಸ್ಥಳೀಯರು ಜೇನುನೊಣಗಳ ಮೇಲೆ ಬೇಸರಗೊಂಡಿದ್ದಾರೆ.

ಜೇನುಗೂಡು ಕೀಳಲು ಅವಕಾಶ ನೀಡಿಲ್ಲ: ಪ್ರತಿ ವರ್ಷವೂ ಬರುವ ಜೇನುನೊಣಗಳು ಕಟ್ಟುವ ಗೂಡುಗಳಿಂದ ಜೇನು ತೆಗೆಯಲು ಹಲವು ಮಂದಿ ಪ್ರಯತ್ನಿಸಿ ವಿಫಲರಾಗಿದ್ದಾರೆ. ಜೇನು ಸಂಗ್ರಹಿಸುವುದಾಗಿ ಬರುವವರಿಗೆ ಸಸ್ಯಕ್ಷೇತ್ರದ ಸಿಬ್ಬಂದಿಗಳು ಅವಕಾಶ ನೀಡದೆ ವಾಪಸ್ಸು ಕಳುಹಿಸುವ ಮೂಲಕ ಜೇನುನೊಣ ಹಾಗೂ ಜೇನುಗೂಡುಗಳ ಹಿತಕಾಯುತ್ತಿದ್ದಾರೆ.

ಪಾರ್ಕ್ ಸಿಬ್ಬಂದಿಗಳಿಗೆ ಎಲ್ಲಿಲ್ಲದ ಪ್ರೀತಿ: ಸಸ್ಯಕ್ಷೇತ್ರದಲ್ಲಿರುವ ಜೇನುನೊಣಗಳು ಇದುವರೆಗೆ 3–4 ಬಾರಿ ತೋಟಗಾರಿಕೆ ಸಿಬ್ಬಂದಿಗಳಿಗೆ ಕಚ್ಚಿವೆ. ಆಕಸ್ಮಿಕವಾಗಿ ಕಚ್ಚಿದಾಗ ಸಿಬ್ಬಂದಿಗಳು ಕಚ್ಚಿದ ಜೇನುನೊಣದ ಮೇಲೆ ಪ್ರತಿದಾಳಿ ಮಾಡದೇ ಇರುವುದರಿಂದ ಯಾವುದೇ ಸಮಸ್ಯೆಯಾಗಿಲ್ಲ. ಇಷ್ಟು ವರ್ಷದಲ್ಲಿ ಅಲ್ಲಿನ ಸಿಬ್ಬಂದಿಗಳು ಜೇನು ನೊಣಗಳೊಂದಿಗೆ ಬಾಂಧವ್ಯ ಇಟ್ಟುಕೊಂಡು ಕೆಲಸ ಮಾಡುತ್ತಿರುವುದರಿಂದ ಯಾವುದೇ ಅನಾಹುತ ಸಂಭವಿಸಿಲ್ಲ.



ಹಾರ್ಡಿಂಗ್ ವೃತ್ತದ ಬಳಿ ಮಿರ್ಜಾ ರಸ್ತೆಯಲ್ಲಿರುವ ಸಸ್ಯಕ್ಷೇತ್ರದ ಆವರಣದಲ್ಲಿ ಒಂದೇ ಮರದಲ್ಲಿ ನೂರಾರು ಜೇನುಗೂಡು ಕಟ್ಟಿರುವುದು. ಚಿತ್ರ: ಎಂ.ಎನ್.ಲಕ್ಷ್ಮೀನಾರಾಯಣ ಯಾದವ್

ಜೇನುನೊಣಗಳಿಗೆ ಸುರಕ್ಷಿತ ಸ್ಥಳ

ಪ್ರತಿವರ್ಷವೂ ಜೇನುನೊಣಗಳು ಒಂದೇ ಮರದಲ್ಲಿ ಗೂಡು ಕಟ್ಟಿಕೊಳ್ಳುತ್ತಿರುವುದಕ್ಕೂ ಕಾರಣವಿದೆ. ಅಕ್ಕಪಕ್ಕದಲ್ಲಿ ಹಲವು ಮರಗಳಿದ್ದರೂ ಜೇನು ನೊಣಗಳು ಕಾಟನ್‌ವುಡ್ ಮರವನ್ನೇ ಆಯ್ಕೆ ಮಾಡಿಕೊಳ್ಳುತ್ತಿದ್ದು, ಆ ಮರ ಜೇನಿನಗೂಡಿಗೆ ಸುರಕ್ಷತೆಯಿಂದ ಕೂಡಿದೆ. ಜೇನುನೊಣಗಳು ನಮ್ಮೆಲ್ಲರಿಗೂ ಆಹಾರ ಸಿಗಬೇಕಾದರೆ ಪ್ರಮುಖ ಪಾತ್ರವಹಿಸುತ್ತವೆ. ಅವುಗಳು ಪರಾಗಸ್ಪರ್ಶ ಮಾಡದೇ ಇದ್ದರೆ, ಯಾವುದೇ ಬೆಳೆ ಬೆಳೆಯಲು ಸಾಧ್ಯವಿಲ್ಲ. ಆ ಕಾರಣದಿಂದ ಜೇನು ನೊಣಗಳಿಗೂ ಮಹತ್ವದ್ದಾಗಿದೆ. ಮನೆ, ಕಚೇರಿ ಹಾಗೂ ಇನ್ನಿತರ ಕಟ್ಟಡಗಳಲ್ಲಿ ಜೇನುಗೂಡು ಕಟ್ಟಿದ್ದರೆ ಕೆಲವರು ರಾಸಾಯನಿಕ ದ್ರಾವಣ ಸಿಂಪಡಿಸಿ, ಬೆಂಕಿ ಹಚ್ಚಿ ಜೇನುನೊಣಗಳನ್ನು ಸಾಯಿಸುತ್ತಾರೆ. ಇದು ಅಪಾಯ ಜೇನುಗೂಡು ಕಟ್ಟಿದ್ದರೆ ಸುರಕ್ಷಿತವಾಗಿ ಬಿಡಿಸಿಕೊಡುವ ಕಾರ್ಯವನ್ನು ಮೈಸೂರಲ್ಲಿ ಮಾಡುತ್ತಿದ್ದೇವೆ. ಪರಿಸರದಲ್ಲಿ ಜೇನುಗಳ ಸಂರಕ್ಷಣೆಯೂ ಮಹತ್ವದ್ದಾಗಿದೆ.

– ಪ್ರದೀಪ್, ಪ್ರಾಣಿ ಸಂರಕ್ಷಕ

ಸಾಧಕರಿಗೆ ಪಿ.ಆರ್.ತಿಪ್ಪೇಸ್ವಾಮಿ ಪ್ರಶಸ್ತಿ ಪ್ರದಾನ

ಮೈಸೂರು, ಏ.7(ಜಿಎ)–ಪಿ.ಆರ್.ತಿಪ್ಪೇಸ್ವಾಮಿ ಅವರು ಮನೆ ಮನೆಗಳನ್ನು ಸುತ್ತಿ ವಸ್ತುಗಳನ್ನು ಸಂಗ್ರಹ ಮಾಡಿರುವುದನ್ನು ಮುಂದಿನ ಪೀಳಿಗೆಗಾಗಿ ಉಳಿಸಿಕೊಂಡು ಹೋಗುವ ದೊಡ್ಡ ಜವಾಬ್ದಾರಿ ಎಲ್ಲರ ಮೇಲೂ ಇದೆ ಎಂದು ಕುವೆಂಪು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಕೆ. ಚಿದಾನಂದಗೌಡ ಕರೆ ನೀಡಿದರು.

ಮೈಸೂರಿನ ಮಾನಸ ಗಂಗೋತ್ರಿಯ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ, ಬಿ.ಎಂ. ಶ್ರೀ ಸಭಾಂಗಣದಲ್ಲಿ ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಸಹಯೋಗದಲ್ಲಿ ಪಿ.ಆರ್ ತಿಪ್ಪೇಸ್ವಾಮಿ ಅಧ್ಯಯನ ಪೀಠ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವತಿಯಿಂದ, ಪಿ.ಆರ್. ತಿಪ್ಪೇಸ್ವಾಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.

ತಿಪ್ಪೇಸ್ವಾಮಿಯವರು ತಮ್ಮ ಇಡೀ ಜೀವನವನ್ನೇ ಜಾನಪದ ಕಲೆ, ಚಿತ್ರಕಲೆಗೆ ಮುಡುಪಾಗಿಟ್ಟಿದ್ದವರು. ವಾಹನ ಸೌಕರ್ಯ, ಫೋನ್, ಜಿಪಿಎಸ್ ಇಲ್ಲದ ಅಂದಿನ ಕಾಲದಲ್ಲಿ ಹಳ್ಳಿ ಹಳ್ಳಿಗೂ ಹೋಗಿ ಜನರ ಮನವೊಲಿಸಿ ಅವರ ಮನೆಯ ಅಟ್ಟದ ಮೇಲೆ ವ್ಯರ್ಥವಾಗಿದ್ದ ಜಾನಪದ ಕಲೆಯ ವಸ್ತುಗಳನ್ನೆಲ್ಲ ಸಂಗ್ರಹಿಸಿ ಮ್ಯೂಸಿಯಂಗೆ ತಂದಿಟ್ಟಿದ್ದಾರೆ ಎಂದು ಸ್ಮರಿಸಿ, ಪಿ.ಆರ್.ತಿಪ್ಪೇಸ್ವಾಮಿ ಅವರು ಜಾನಪದ ಕಲಾವಿದರಾಗಿ ಸಾಹಿತ್ಯ ಕ್ಷೇತ್ರ, ಚಿತ್ರಕಲೆಯಲ್ಲೂ ಪ್ರಸಿದ್ಧರಾಗಿದರು ಎಂದು ತಿಳಿಸಿದರು.

ರಾಜ್ಯ ಮಾಹಿತಿ ಆಯುಕ್ತ ರುದ್ರಣ್ಣ ಹರ್ತಿಕೋಟೆ ಅವರು ಮಾತನಾಡಿ, ಮಾನಸ ಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯಲ್ಲಿರುವ ಜಾನಪದ ವಸ್ತು ಸಂಗ್ರಹಾಲಯಕ್ಕೆ ಪಿ.ಆರ್.ತಿಪ್ಪೇಸ್ವಾಮಿ ಅವರ ಹೆಸರಿಡಬೇಕು. ನಗರದಲ್ಲಿರುವ ಪಿ.ಆರ್.ಟಿ ಹೆಸರಿನ ವೃತ್ತದಲ್ಲಿ ಅವರ ಪ್ರತಿಮೆ ಸ್ಥಾಪನೆಗೆ ಮಹಾ ನಗರ ಪಾಲಿಕೆ ಅವಕಾಶ ಮಾಡಿಕೊಡಬೇಕು. ಇದಕ್ಕೆ ಮೈಸೂರು ವಿವಿ ಕುಲಪತಿ ಪತ್ರ ಬರೆದು ಸಹಕರಿಸಬೇಕು ಎಂದು ಕುಲಪತಿ ಲೋಕನಾಥ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಮೈಸೂರು ವಿವಿಯ ಕುಲಪತಿ ಡಾ.ಎನ್.ಕೆ. ಲೋಕನಾಥ್ ಮಾತನಾಡಿ, ಪಿ.ಆರ್.ತಿಪ್ಪೇಸ್ವಾಮಿ ಅವರು ಮೈಸೂರು ವಿವಿಯ ಆಸ್ತಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ವಸ್ತು ಸಂಗ್ರಹಾಲಯವು, ಇಡೀ ಏಷ್ಯಾದಲ್ಲಿಯೇ ಪ್ರಪ್ರಥಮ ಜಾನಪದ ವಸ್ತು ಸಂಗ್ರಹಾಲಯ ಎಂದ ಕೀರ್ತಿಗೆ ದೇಜಗೌ ಮತ್ತು ಪಿ.ಆರ್.ತಿಪ್ಪೇಸ್ವಾಮಿ ಭಾಜನರಾಗಿದ್ದಾರೆ. ದೇಜಗೌ ಅವರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕರಾಗಿದ್ದ ಸಂದರ್ಭದಲ್ಲಿ, ಈ ಮ್ಯೂಸಿಯಂ ನಿರ್ಮಾಣಕ್ಕಾಗಿ ಜಿ.ಶಂ ಪರಮಶಿವಯ್ಯ ಮತ್ತು ತಿಪ್ಪೇಸ್ವಾಮಿ ಅವರನ್ನು ಆಯ್ಕೆ ಮಾಡಿಕೊಂಡು ಶೂನ್ಯದಿಂದ ಮ್ಯೂಸಿಯಂ ಕಟ್ಟಿದರು. ಅದು ಪ್ರಸಿದ್ಧ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುವಂತೆ ಮಾಡಿದ ಕೀರ್ತಿ ತಿಪ್ಪೇಸ್ವಾಮಿ ಅವರಿಗೆ ಸಲ್ಲುತ್ತದೆ ಎಂದರು.

ಕಾರ್ಯಕ್ರಮದಲ್ಲಿ ತಿಪ್ಪೇಸ್ವಾಮಿ ಪೀಠದ ವತಿಯಿಂದ ಶ್ರೇಷ್ಠ ಚಿತ್ರಕಲಾ ಕಲಾವಿದೆ ಸುಧಾ ಮನೋಹರ್ ಮತ್ತು ಐದು ವಾದ್ಯಗಳನ್ನು ಏಕಕಾಲದಲ್ಲಿ ನುಡಿಸುವ ಕಲಾವಿದ ಅಂಜನಪ್ಪ ಪಿ.ಆರ್ ತಿಪ್ಪೇಸ್ವಾಮಿ ಪ್ರಶಸ್ತಿ ಪ್ರದಾನ ನೀಡಿ ಅಭಿನಂದಿಸಲಾಯಿತು. ಈ ವೇಳೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ. ಲೋಲಾಕ್ಷಿ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಪಿ.ಆರ್. ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷ ರಾಜಶೇಖರ ಕದಂಬ, ಕಾರ್ಯದರ್ಶಿ ಕೆ.ಸಿ. ಮಹದೇವಶೆಟ್ಟಿ, ಪಿ.ಆರ್. ತಿಪ್ಪೇಸ್ವಾಮಿ ಅಧ್ಯಯನ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಆರ್. ಸುನಂದಮ್ಮ ಉಪಸ್ಥಿತರಿದ್ದರು.



ಮೈಸೂರಿನ ಮಾನಸ ಗಂಗೋತ್ರಿಯ ಬಿ.ಎಂ. ಶ್ರೀ ಸಭಾಂಗಣದಲ್ಲಿ ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದ ವತಿಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಚಿತ್ರಕಲಾ ಕಲಾವಿದೆ ಸುಧಾ ಮನೋಹರ್ ಮತ್ತು ಐದು ವಾದ್ಯಗಳನ್ನು ಏಕಕಾಲದಲ್ಲಿ ನುಡಿಸುವ ಕಲಾವಿದ ಅಂಜನಪ್ಪ ಅವರಿಗೆ ಪಿ.ಆರ್ ತಿಪ್ಪೇಸ್ವಾಮಿ ಪ್ರಶಸ್ತಿ ಪ್ರದಾನ ನೀಡಿ ಅಭಿನಂದಿಸಲಾಯಿತು.

ಮೈಸೂರು ಪದ್ಮಪ್ರಿಯಾ ಹೆಚ್‌ಟಿಎ–ಎಐಟಿಎ ರಾಷ್ಟ್ರೀಯ ಸರಣಿ ಟೆನ್ನಿಸ್ ಚಾಂಪಿಯನ್

ಮೈಸೂರು, ಏ.6 (ಎಂಟಿವೈ)– ಪಂಜಾಬ್‌ನ ಲೂಧಿಯಾನದ ಜಸ್ಸೊವಾಲ್‌ನಲ್ಲಿ ಹಾರ್ವೆಸ್ಟ್ ಟೆನ್ನಿಸ್ ಅಕಾಡೆಮಿ ಆಯೋಜಿಸಿದ್ದ 'ಹೆಚ್‌ಟಿಎ – ಎಐಟಿಎ ರಾಷ್ಟ್ರೀಯ ಸರಣಿ ಟೆನ್ನಿಸ್ ಪಂದ್ಯಾವಳಿ'ಯಲ್ಲಿ 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಕರ್ನಾಟಕವನ್ನು ಪ್ರತಿನಿಧಿಸಿರುವ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್, ಸಿಂಗಲ್ಸ್‌ನಲ್ಲಿ ಪ್ರಥಮ ಹಾಗೂ ಡಬಲ್ಸ್‌ನಲ್ಲಿ ದ್ವಿತೀಯ ಬಹುಮಾನ ಪಡೆದು ಸಂಭ್ರಮಿಸಿದ್ದಾರೆ.

'ಹೆಚ್‌ಟಿಎ–ಎಐಟಿಎ ರಾಷ್ಟ್ರೀಯ ಸರಣಿ ಟೆನ್ನಿಸ್ ಪಂದ್ಯಾವಳಿ' ದೇಶದ ವಿವಿಧ ರಾಜ್ಯಗಳಿಂದ ಹಲವು ಟೆನ್ನಿಸ್ ಪಟುಗಳು ಪಾಲ್ಗೊಂಡಿದ್ದು, ಅವರಲ್ಲಿ 14 ವರ್ಷದ ವಿಭಾಗದ ಪಂದ್ಯಾವಳಿಯಲ್ಲಿ ಮೈಸೂರಿನ ಪದ್ಮಪ್ರಿಯಾ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ.

ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯದಲ್ಲಿ ಆಂಧ್ರಪ್ರದೇಶದ ಪರಿಣಿತಾ ವಟ್ಟಪರಂಬಿಲ್ ವಿರುದ್ಧ ಮೈಸೂರಿನ ಪದ್ಮಪ್ರಿಯಾ ರಮೇಶ್‌ಕುಮಾರ್ 6–2, 2–6, 6–1 ಅಂಕಗಳೊಂದಿಗೆ ಚಾಂಪಿಯನ್ ಆದರು. ಡಬಲ್ಸ್‌ನಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ಪದ್ಮಪ್ರಿಯಾ ಹುಲಿ ಯೋಜನೆ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್ ಮತ್ತು ಅರಣ್ಯ ಇಲಾಖೆ ಮೈಸೂರು ವೃತ್ತದ ಸಿಎಫ್ ಡಾ.ಮಾಲತಿ ಪ್ರಿಯಾ ದಂಪತಿ ಪುತ್ರಿ. ಈಗಾಗಲೇ ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಮಟ್ಟದ ಟೆನ್ನಿಸ್ ಪಂದ್ಯಾವಳಿಗೆ 12 ಹಾಗೂ 14 ವರ್ಷದೊಳಗಿನ ಪಂದ್ಯಾವಳಿಯಲ್ಲಿ ಚಾಂಪಿಯನ್ ಪಟ್ಟ ತನ್ನದಾಗಿಸಿಕೊಂಡಿದ್ದಾರೆ.



ಅಭಿನಂದನೆ



ನಾಗವಾಲ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಸಿ.ನರೇಂದ್ರ ಅವರನ್ನು ಅವರ ಅಭಿಮಾನಿ ಬಳಗದ ವತಿಯಿಂದ ಅಭಿನಂದಿಸಲಾಯಿತು. ಈ ವೇಳೆ ಹಿನಕಲ್ ಮಂಜು, ಧನಗಳ್ಳಿ ಪ್ರವೀಣ್, ಪೈಲ್ವಾನ್ ನವೀನ್, ಬಿಳಿಕೆರೆ ಸ್ವಾಮಿ, ಬಂಡಿಪಾಳ್ಯ ವಿಜಯ್ ಕುಮಾರ್, ಬಿ. ಕೆ. ಈಶ್ವರ್, ಸಿಂಗಳ್ಳಿ ಕುಮಾರ್, ಮೊಬೈಲ್ ಮಂಜು, ಕುಮಲ್ಲಿ ಸಂತೋಷ್, ಧನಂಜಯ, ಬೊಮ್ಮೇನಹಳ್ಳಿ ಮಹೇಶ್, ಹರೀಶ್, ಮುರುಡಗಳ್ಳಿ ಮಂಜು, ಶಿವು, ಮಹದೇವಸ್ವಾಮಿ, ಪಾಪನಾಯಕ ಹಾಗೂ ಇನ್ನಿತರರು ಉಪಸ್ಥಿತರಿದ್ದರು


ವಕೀಲರು ಹಾಗೂ
ಜೆಡಿಎಸ್ ಮುಖಂಡರಾದ
ಶ್ರೀ ಎಂ.ಜಿ.ಸಿದ್ದರಾಜು
ರವರಿಗೆ
ಜನ್ಮದಿನದ ಶುಭಾಶಯಗಳು
ಶುಭಕೋರುವವರು
ದುರ್ಗಾ ಗ್ರೂಪ್ಸ್
VISMAYA
ADVERTISERS
8050302424